

ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ
ಸಂಪುಟ 3 ಸಂಚಿಕೆ 30
ಜುಲೈ 26, 2009
ಕನ್ನಡ ವಾರಪತ್ರಿಕೆ
5/-







KHB ಭೂ ಖರೀದಿ ಹಗರಣ

ಬಿಜೆಪಿ - ಭೂ ಮಾಫಿಯಾ ವಿಕಾರ ಮುಖದರ್ಶನ



ಎಚ್ಚರ ಬರುತ್ತಿದೆ !!
ಆಹಾರ (ಅ)ಭದ್ರತಾ ಕಾಯ್ದೆ



ಅಮೆರಿಕಾ ಖಂಡದ ಮೊದಲ ಕ್ರಾಂತಿ

ಕ್ಯೂಬಾ ಕ್ರಾಂತಿಗೆ 50

ಕಮ್ಯೂನಿಸ್ಟ್ ಚಳುವಳಿ ಮತ್ತು ಮಾಧ್ಯಮಗಳ ಅಪಪ್ರಚಾರ

ದೇಶದ ಜನರಿಗೆ ಆಹಾರ ಭದ್ರತೆ ಒದಗಿಸುವುದಾಗಿ ಹೇಳುತ್ತಾ, 'ಆಮ್ ಆದ್ಮಿ'ಯ ಜಪ ಮಾಡುತ್ತಿರುವ ಕೇಂದ್ರ ಸರ್ಕಾರ ತರಲು ಹೊರಟಿರುವ 'ಆಹಾರ ಭದ್ರತಾ ಕಾಯ್ದೆ' ನಿಜವಾಗಿಯೂ ಬಡಜನರಿಗೆ ಈಗ ಸಿಗುತ್ತಿರುವ ಆಹಾರವನ್ನೂ ವಂಚಿಸಲಿದೆ.

ಇದೋ ಬರುತ್ತಿದೆ ಬಡವರ ಆಹಾರ ಕಸಿಯಲು

ಆಹಾರ 'ಭದ್ರತೆ' ಕಾಯ್ದೆ

ಯುಪಿಎ ಸರ್ಕಾರ ಆಹಾರ ಭದ್ರತಾ ಕಾಯ್ದೆ ಎಂಬುದೊಂದನ್ನು ತರಲು ಹೊರಟಿದೆ. ಈ ಕಾಯ್ದೆ ಪ್ರಕಾರ ಬಡತನ ರೇಖೆಗಿಂತ ಕೆಳಗೆ ವಾಸಿಸುತ್ತಿರುವ ಪ್ರತಿ ಕುಟುಂಬವು 3 ರೂಪಾಯಿ ದರದಲ್ಲಿ 25 ಕೆ.ಜಿ. ಅಕ್ಕಿ ಅಥವಾ ಗೋಧಿ ಪಡೆಯಲು ಅರ್ಹರು ಎಂಬ ನಿಯಮವಿದೆ. ಆದರೆ ಸರ್ಕಾರ ಜಾರಿಗೆ ತಂದಿರುವ ಈ ಕಾಯ್ದೆಯಿಂದ ಜನರಿಗೆ ಆಹಾರ ಭದ್ರತೆ ಒದಗಿಸಲು ಸಾಧ್ಯವೇ ಇಲ್ಲ.

ಬಡತನದ ಅಗಾಧತೆ

ವಿಶ್ವ ಹಸಿವಿನ ಅನುಸೂಚಿಯಲ್ಲಿ 88 ರಾಷ್ಟ್ರಗಳ ಪೈಕಿ ಭಾರತವು 66ನೇ ಸ್ಥಾನವನ್ನು ಪಡೆದಿದೆ ಎಂಬುದನ್ನು ಗಮನಿಸಬೇಕಿದೆ.

ಸರ್ಕಾರದ ಮಾಹಿತಿ ಆಹಾರ ಭಾರತದಲ್ಲಿ 6.5 ಕೋಟಿ ಕುಟುಂಬಗಳು ಬಡತನ ರೇಖೆಗಿಂತ ಕೆಳಗೆ ವಾಸಿಸುತ್ತಿದ್ದಾರೆ. ಇದರಲ್ಲಿ 2.5 ಕೋಟಿ ಕಡು ಬಡ ಕುಟುಂಬಗಳು ಅಂತ್ಯೋದಯ ಸ್ಕೀಂನಲ್ಲಿ ಹೆಸರು ನೋಂದಾಯಿಸಿಕೊಂಡಿದ್ದಾರೆ. ಸದ್ಯ ಅಂತ್ಯೋದಯ ಕುಟುಂಬಗಳಿಗೆ 2 ರೂಪಾಯಿ ದರದಲ್ಲಿ 70 ರೂ.ಗಳಿಗೆ 35 ಕೆ.ಜಿ. ಗೋಧಿ ಅಥವಾ ಅಕ್ಕಿಯನ್ನು ವಿತರಣೆ ಮಾಡಲಾಗುತ್ತಿದೆ. ಒಂದು ವೇಳೆ ಆಹಾರ ಭದ್ರತೆ ಕಾಯ್ದೆ ಜಾರಿಗೆ ಬಂದರೆ, ಈಗಿರುವ ಬೆಲೆ 75 ರೂ.ಗಿಂತ ಹೆಚ್ಚಾಗುವುದಲ್ಲದೇ ಆಹಾರ ವಿತರಣೆಗೆ 25 ಕೆ.ಜಿ.ಗೆ ಇಳಿಯುತ್ತದೆ. ಅಂದರೆ ಈ ಕಾಯ್ದೆಯಿಂದ ಅಂತ್ಯೋದಯ ಯೋಜನೆಯಡಿ ಫಲಾನುಭವಿಗಳು ಈಗ ಪಡೆಯುತ್ತಿರುವ ಆಹಾರ ಧಾನ್ಯಕ್ಕಿಂತ ಕಡಿಮೆ ಪಡೆಯಲಿದ್ದಾರೆ. ಸರ್ಕಾರದ ಈ ಕತ್ತರಿ ಕ್ರಿಯೆಯಿಂದ ಅಂತ್ಯೋದಯ ಯೋಜನೆಯಡಿ ಬರುವ ಬಡವರು 12 ರೂ.ದರದಲ್ಲೇ ಅಕ್ಕಿ ಅಥವಾ ಗೋಧಿಯನ್ನು ಅಂಗಡಿಗಳಲ್ಲಿ ಕೊಂಡುಕೊಂಡರೆ 120 ರೂ. ಜೇಬಿನಿಂದ ಕೊಡಬೇಕಾಗುತ್ತದೆ.

ಬಿಪಿಎಲ್ ಕಾರ್ಡ್ ಹೊಂದಿರುವವರು ತಿಂಗಳಿಗೆ 35 ಕೆ.ಜಿ. ಅಕ್ಕಿ ಅಥವಾ ಗೋಧಿಯನ್ನು ಖರೀದಿಸಿದರೆ ರಾಜ್ಯ ಸರ್ಕಾರ ಹೇರುವ ವೆಚ್ಚವು ಸೇರಿ 4.50 ರೂ.ಗಳ ಸರಾಸರಿಯಂತೆ 157.50 ರೂ. ಮೊತ್ತವಾಗುತ್ತದೆ. ಕಾಯ್ದೆ ಜಾರಿ ಬಂದರೆ ತಿಂಗಳಿಗೆ ಇದೇ ಅಕ್ಕಿಯನ್ನು ಪಡೆಯಲು 195ರೂಪಾಯಿ ಆಗುತ್ತದೆ.

ಇದು ಯುಪಿಎಸರ್ಕಾರ ಜಾರಿಗೆ ತರಲು ಹೊರಟಿರುವ ರಾಷ್ಟ್ರೀಯ ಭದ್ರತೆ ಕಾಯ್ದೆಯಿಂದ ಬಡವರ ಮೇಲೆ ಆಗುವ ಹೊರೆ. ಇದರಿಂದ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಷ್ಟೇ ಅಲ್ಲ ಅಂತ್ಯೋದಯ ಕುಟುಂಬಗಳು ಕೂಡ ಸಮಸ್ಯೆಯನ್ನು ಎದುರಿಸಬೇಕಾಗುತ್ತದೆ. ಈ ರೀತಿ ಮಾಡುವುದರಿಂದ ಸರ್ಕಾರಕ್ಕೆ ಹತ್ತಿರ ಹತ್ತಿರ 4,000 ಕೋಟಿ ರೂ. ಉಳಿತಾಯವಾಗುತ್ತದೆ.


ಸರ್ಕಾರ ಜಾರಿಗೆ ತರುತ್ತಿರುವ ಕಾಯ್ದೆಯ ಉದ್ದೇಶ ಮೇಲ್ನೋಟಕ್ಕೆ ಒಳ್ಳೆಯದು ಅನ್ನಿಸಿದರೂ, ಕೇಂದ್ರ ಸರ್ಕಾರ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳ ಸಂಖ್ಯೆಗೆ ಇಂತಿಷ್ಟು ಅಂತ ಮಿತಿ ನಿಗದಿಪಡಿಸಿದ್ದೇಕೆ? ಆಹಾರ ಭದ್ರತಾ ಕಾಯ್ದೆಯ ರಕ್ಷಣೆ ಸರ್ಕಾರ ನಿಗದಿಪಡಿಸಿದ ಬಡತನ ರೇಖೆಯ ಕೆಳಗಿನವರಿಗೆ ಮಾತ್ರವೇ ಅಗತ್ಯವಾ ಎಂಬ ಪ್ರಶ್ನೆಯ ಜೊತೆ ಸರ್ಕಾರದ ಬಿ.ಪಿ.ಎಲ್. ಮಾನದಂಡ ಎಷ್ಟು ವೈಜ್ಞಾನಿಕವಾಗಿದೆ, ಸಮರ್ಪಕವಾಗಿದೆ ಎಂಬ ಪ್ರಶ್ನೆಯೂ ಗಂಭೀರವಾದುದಾಗಿದೆ.

ಕೈಬಿಟ್ಟು ಹೋದ ಬಡವರ ಲೆಕ್ಕ

ನಮ್ಮ ಯೋಜನಾ ಅಧಿಕಾರಿಗಳು ತಯಾರಿಸಿರುವ ಬಿಪಿಎಲ್ ಮತ್ತು ಅಂತ್ಯೋದಯ ಕುಟುಂಬಗಳ ಅಂಕಿ ಅಂಶಗಳ ದಾಖಲಾತಿಯಲ್ಲಿ ದೊಡ್ಡಸಂಖ್ಯೆಯ ಬಿಪಿಎಲ್ ಕುಟುಂಬಗಳ ಹೆಸರುಗಳು ಪಟ್ಟಿಯಿಂದ ಕೈಬಿಟ್ಟು ಹೋಗಿವೆ. 61ನೇ ರಾಷ್ಟ್ರೀಯ ಸರ್ವೆ (ಎನ್‌ಎಸ್‌ಎಸ್) ಅಂಕಿಅಂಶಗಳ ಪ್ರಕಾರ ದೇಶದ ರೈತರು, ಕೂಲಿ ಕಾರ್ಮಿಕರು ಸೇರಿದಂತೆ ಸಬ್ಸಿಡಿ ಆಹಾರಧಾನ್ಯ ದೊರೆಯುವುದು ತುಂಬಾ ಅನಿವಾರ್ಯವಾದ ದೊಡ್ಡ ಸಂಖ್ಯೆಯ ಜನರಿಗೆ ಬಿಪಿಎಲ್ ಕಾರ್ಡ್ ಸಿಕ್ಕೇ ಇಲ್ಲ. ಇನ್ನು ಉತ್ತರ ಪ್ರದೇಶ ಮತ್ತು ಬಿಹಾರದಂತಹ ರಾಜ್ಯಗಳಲ್ಲಿ ಕ್ರಮವಾಗಿ ಶೇ.73 ಮತ್ತು ಶೇ.71 ರಷ್ಟು ಕುಟುಂಬಗಳು ಕಡು ಬಡತನದ ಕುಟುಂಬಗಳಿಗೆ ಈ ರೀತಿಯಾಗಿ ಬಿಪಿಎಲ್ ಕಾರ್ಡ್ ಸಿಕ್ಕದಂತೆ ಆಗಿದೆ.

ವ್ಯಾಪಕ ಭ್ರಷ್ಟಾಚಾರ - ಅವೈಜ್ಞಾನಿಕ ಮಾನದಂಡ

ಬಡತನ ರೇಖೆಗಿಂತ ಕೆಳಗಿರುವ ಬಿಪಿಎಲ್ ಕುಟುಂಬಗಳಿಗೆ ಹಂಚಿಕೆಯಾಗಿರುವ ಕಾರ್ಡ್‌ಗಳ ವಿತರಣೆಯಲ್ಲಿ ವ್ಯಾಪಕ ಭ್ರಷ್ಟಾಚಾರವಾಗಿರುವುದು ಮೇಲ್ನೋಟಕ್ಕೆ ಸಾಬೀತಾಗುತ್ತದೆ. ಬಿಪಿಎಲ್ ಕಾರ್ಡ್‌ಗಳ ಸಂಖ್ಯೆ ಇಳಿಮುಖ ವಾಗಿರೋದಕ್ಕೆ ಮತ್ತೊಂದು ಕಾರಣ ಯೋಜನಾ ಆಯೋಗ ರಾಜ್ಯಗಳು ಕಳುಹಿಸಿ ಕೊಟ್ಟಿರುವ ವರದಿ ಆಧಾರದ ಮೇಲೆ ಕಾರ್ಡುಗಳನ್ನು ವಿತರಣೆ ಮಾಡಿರುವುದು. ಅಲ್ಲದೆ ಈಗ ವಿವರಿಸಿರುವ ಬಿಪಿಎಲ್ ಕುಟುಂಬಗಳೆಂದು ಗಣನೆಗೆ ತೆಗೆದುಕೊಳ್ಳುವ ಮಾನದಂಡ ಕೂಡ ಅವೈಜ್ಞಾನಿಕವಾಗಿದೆ. ಗ್ರಾಮೀಣ ಭಾಗದಲ್ಲಿ ದಿನಕ್ಕೆ 11.80ರೂ. ಸಂಪಾದನೆ ಮಾಡಲು ಶಕ್ತರಾಗಿರುವ ಮತ್ತು ನಗರ ಪ್ರದೇಶಗಳಲ್ಲಿ 17.80 ರೂ. ಸಂಗ್ರಹಣೆ ಮಾಡಲು ಶಕ್ತರಾಗಿರೋ ಕುಟುಂಬಗಳು ಗಳಿಕೆಯ ಆಧಾರದ ಮೇಲೆ ಬಿಪಿಎಲ್ ಕಾರ್ಡ್‌ಗಳನ್ನು ವಿತರಿಸಲಾಗಿದೆ. ಇನ್ನು ಉಳಿದವರನ್ನು ಬಡತನಕ್ಕಿಂತ ಮೇಲಿರುವವರು, ಅಂದರೆ ಎಪಿಎಲ್



ಅನ್ನುವ ವರ್ಗಕ್ಕೆ ಸೇರಿಸಲಾಗಿದೆ. ಇದು ಕೂಡ ಬಿಪಿಎಲ್ ಕುಟುಂಬಗಳ ಸಂಖ್ಯೆ ಇಳಿಮುಖವಾಗಲು ಪ್ರಮುಖ ಕಾರಣವಾಗಿದೆ. ಕೇಂದ್ರ ಸರ್ಕಾರ ಈಗಿರುವ ಬಿಪಿಎಲ್ ವಿತರಣೆ ವ್ಯವಸ್ಥೆಯ ಅಡಿಯಲ್ಲೇ ಆಹಾರ ಭದ್ರತಾ ಕಾಯ್ದೆ ಜಾರಿಗೆ ತರಲು ಮುಂದಾದರೆ ಅದು ಬಾರಿ ಅನ್ಯಾಯವಾಗುತ್ತದೆ. ಈ ಆಹಾರ ಭದ್ರತಾ ಕಾಯ್ದೆ ಜನಕ್ಕೆ ನಿಜಕ್ಕೂ ಪ್ರಯೋಜನಕಾರಿಯಾಗಬೇಕಾದರೆ, ಬಡತನವನ್ನು ಅಳೆಯುವ ಈಗಿನ ಮಾನದಂಡವನ್ನು ಬಿಸಾಡಿ ಹೊಸ ಮಾನದಂಡ ರೂಪಿಸಬೇಕು. ತೆಂಡೂಲ್ಕರ್ ಸಮಿತಿಯು ಈ ನಿಟ್ಟಿನಲ್ಲಿ ಕೆಲವು ಸ್ವಾಗತಾರ್ಹವಾದ ಶಿಫಾರಸ್ಸು ನೀಡಿದೆಯೆಂಬ ವರದಿಗಳಿವೆ. ಅರ್ಜುನ್ ಸೇನಗುಪ್ತ ಸಮಿತಿ ಗುರುತಿಸಿದಂತೆ ಕೂಡ ಭಾರತದಲ್ಲಿ 77 ರಷ್ಟು ಜನ ಇಂದಿಗೂ ದಿನಕ್ಕೆ ಕೇವಲ 20 ರೂ.ಗಳನ್ನು ಸಂಪಾದಿಸುತ್ತಿದ್ದಾರೆ. ಇವರಿಗೆಲ್ಲಿದೆ ಆಹಾರ ಭದ್ರತೆ?

ಬಡತನದ ಅಗಾಧತೆ, ಆಹಾರ ಕೋಟಾ ನಿಗದಿ ನಡುವೆ ತಾಳಮೇಳವಿಲ್ಲದೆ ಹೋಗುವುದಕ್ಕೆ ಯೋಜನಾ ಆಯೋಗದ ಬಡತನದ ಕುರಿ[ತ] ದೋಷಪೂರಿತವಾದ ಸ್ಥೂಲ ಅಂದಾಜೇ ಕಾರಣ. ನೀಡುತ್ತಿರೋದು ಯೋಜನಾ ಆಯೋಗ. ಕಳೆದ ದಶಕದಲ್ಲಿ ಕಲೆ ಹಾಕಿರುವ ಅಂಕಿ ಅಂಶಗಳ ಆಧಾರದಲ್ಲೇ ಆಹಾರ ಒದಗಿಸುತ್ತಿರುವುದು ಇದಕ್ಕೆ ಕಾರಣವಾಗಿದೆ. ಇದಲ್ಲದೆ ದಶಕದಿಂದೀಚೆಗೆ ಅನೇಕ ಅವಿಭಕ್ತ ಕುಟುಂಬಗಳು ಬೇರೆಯಾಗಿ ಅನೇಕ ಸಣ್ಣ ಸಣ್ಣ ಕುಟುಂಬಗಳಾಗಿವೆ. ಆದರೆ ಇದನ್ನೆಲ್ಲ ಗಣನೆಗೆ ತೆಗೆದುಕೊಳ್ಳದ ಸರ್ಕಾರ, ಕೇವಲ ಈಗಿರುವ ವ್ಯವಸ್ಥೆಯಲ್ಲೇ ಆಹಾರ ಧಾನ್ಯ ವಿತರಿಸಲು ಮುಂದಾಗುತ್ತಿರುವುದು ಅನ್ಯಾಯ ಮತ್ತು ಅಸಂಬದ್ಧವಾದದ್ದು. ಇದ್ದುದರಲ್ಲಿ ಪಶ್ಚಿಮಬಂಗಾಳದ ಮತ್ತು ಬಿಹಾರ ರಾಜ್ಯ ಸರ್ಕಾರಗಳು ಮನೆ ಮನೆಗೆ ತೆರಳಿ ಸಮೀಕ್ಷೆ ಮಾಡಿ ವರದಿಯನ್ನು ತಯಾರಿಸಿವೆ. ಈ ಎರಡು ರಾಜ್ಯಗಳು ನೀಡಿರುವ ವರದಿಯ[ನ್ನು] ಗಮನಿಸುವುದಾದರೆ 10.5 ಕೋಟಿ ಕುಟುಂಬಗಳು ಬಡತನ ರೇಖೆಗಿಂತ ಕೆಳಗಿವೆ. ಅಂದರೆ ಯೋಜನಾ ಆಯೋಗದ ಅಂದಾಜಿಗಿಂತ ಶೇ.40 ರಷ್ಟು ಹೆಚ್ಚು ಕುಟುಂಬಗಳು ಬಡತನ ರೇಖೆಗಿಂತ ಕೆಳಗಿವೆ. ವಿಪರ್ಯಾಸ ಅಂದರೆ ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಗೆ ನೀಡಲಾದ ಶಿಫಾರಸ್ಸಿನ ಯಾವುದೇ ವರದಿಯಲ್ಲಿ ಈ ಅಂಶಗಳನ್ನು ಕೈಬಿಟ್ಟು ಹೋಗಿವೆ.

ಹಲವು ರಾಜ್ಯಗಳಲ್ಲಿ ಭಿನ್ನ ಧೋರಣೆ

ಕೇಂದ್ರ ಸರ್ಕಾರ ಈ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಆಹಾರ ಭದ್ರತಾ ಕಾಯ್ದೆಯನ್ನು ಜಾರಿಗೊಳಿಸಬೇಕು. ಕಳೆದ 5 ವರ್ಷಗಳಿಂದ ಕೇಂದ್ರ ಸರ್ಕಾರ ದಾಖಲೆ ಪ್ರಮಾಣದಲ್ಲಿ ಆಹಾರ ಧಾನ್ಯಗಳ ಬೆಲೆಯನ್ನು ಏರಿಸಿದೆ. ಆದರೆ ಸುಮಾರು 10 ರಾಜ್ಯಗಳ ಸರ್ಕಾರಗಳು ಆಹಾರ ಭದ್ರತೆಯನ್ನು ಜಾ[ರಿ]ಗೊಳಿಸಲು ಮುಂದಾಗಿವೆ. ಇದು ಕೇಂದ್ರ ಸರ್ಕಾರ ಜಾರಿಗೆ ತರುತ್ತಿರುವ ಆಹಾರ ಭದ್ರ[ತಾ] ಕಾಯ್ದೆಗಿಂತ ಉತ್ತಮ. ಅಲ್ಲದೇ ಈಗಿರುವ ಬಿಪಿಎಲ್ ಕುಟುಂಬಗಳ ಸಂಖ್ಯೆಯನ್ನು ಸಮೀಕ್ಷೆ ನಡೆಸಿ ವಾಸ್ತವಾಂಶಗಳನ್ನು ಗಣನೆಗೆ ತೆಗೆದುಕೊಂಡು ಹೆಚ್ಚಿಸಿವೆ. ಉದಾಹರಣೆಗೆ ಛತ್ತೀಸ್‌ಗಢ ರಾಜ್ಯವು ಎಲ್ಲಾ ಬುಡಕಟ್ಟು ಕುಟುಂಬಗಳಿಗೆ ಮತ್ತು ಮಹಿಳಾ ಮುಖ್ಯಸ್ಥ ಕುಟುಂಬಗಳಿಗೆ ಸಬ್ಸಿಡಿ ಆಹಾರ ಧಾನ್ಯ ಪೂರೈಸುತ್ತಿದೆ. ಕೇರಳ ರಾಜ್ಯ ಬುಡಕಟ್ಟು ಜನರಿಗೆ ಕಡಿಮೆದರದ ಆಹಾರ ಧಾನ್ಯ ಸೇರಿದಂತೆ ಬಹುತೇಕ ಎಲ್ಲ ಜನರಿಗೆ ಬಿಪಿಎಲ್ ಕಾರ್ಡ್ ದೊರೆಯುವಂತೆ ನೋಡಿಕೊಂಡಿದೆ. ಛತ್ತೀಸ್‌ಗಢ ರಾಜ್ಯಸರ್ಕಾರ ಶೇ.70ರಷ್ಟು ಜನರಿಗೆ 35 ಕೆ.ಜಿ. ಅಕ್ಕಿಯನ್ನು ವಿತರಿಸುತ್ತಿದೆ. ಅದು ಅಂತ್ಯೋದಯ ಯೋಜನೆಯಲ್ಲಿ ಕೇವಲ ಕೆ.ಜಿ.ಗೆ 1 ರೂ ಹಾಗೂ ಬಿಪಿಎಲ್ ಕುಟುಂಬಗಳಿಗೆ ಕೆ.ಜಿ.ಗೆ 2 ರೂ. ದರದಲ್ಲಿ ಆಹಾರಧಾನ್ಯವನ್ನು ವಿತರಿಸುತ್ತಿದೆ. ಕೇರಳ ರಾಜ್ಯದಲ್ಲಿ ಕೂಡ 2 ರೂ.ಗೆ ಕೆ.ಜಿ. ಅಕ್ಕಿಯಂತೆ 35 ಕೆ.ಜಿ.


ಪುಟ 4 ಕ್ಕೆ

ತೋಳಗಳ ದರ್ಬಾರಿನಲ್ಲಿ ಭೂ ಮಾಫಿಯಾದ ವಿಕಾರ ರೂಪ ಪ್ರದರ್ಶನ

ಕರ್ನಾಟಕ ರಾಜ್ಯ ಸರ್ಕಾರ ಆರೆಸ್ಸೆಸ್ ನಿಯಂತ್ರಣದ ಗಣಿ ಮಾಫಿಯಾ, ಭೂಮಾಫಿಯಾ ಮತ್ತು ಇತರ ಬಂಡವಾಳಶಾಹಿ ಪಟ್ಟಭದ್ರ ಹಿತಗಳ ಸರ್ಕಾರ ಎಂದು "ಜನಶಕ್ತಿ" ವ್ಯಾಖ್ಯಾನ ಮಾಡಿ ಒಂದು ವರ್ಷವಾಯಿತು. ಅದರ ಕರಾಳ ರೂಪಗಳು ಮತ್ತೆ ಮತ್ತೆ ಕರ್ನಾಟಕದ ಜನತೆಯ ಮುಖಕ್ಕೆ ರಾಚುತ್ತಿದೆ. ಇತ್ತೀಚೆಗೆ ವಿಧಾನಸಭೆಯು ಕರ್ನಾಟಕ ರಾಜ್ಯದಲ್ಲಿ ನಡೆಯುತ್ತಿರುವ ಅಸಂಖ್ಯ ಭೂಹಗರಣಗಳಲ್ಲಿ ಒಂದು ಹಗರಣ ರಾಜ್ಯ ವಿಧಾನಸಭೆಯ ಮೂರು ದಿನಗಳನ್ನು ತೆಗೆದುಕೊಂಡಿತು.

ದಾಖಲೆಗಳ ಸಮೇತ ಮಾಹಿತಿಗಳನ್ನು ರಾಜ್ಯವಿಧಾನಸಭೆಯ ಮುಂದೆ ಜೆಡಿ(ಎಸ್) ಪಕ್ಷ ...ಟ್ಟರೂ ಕೂಡ 'ಅಂಗೈ ಹುಣ್ಣಿಗೆ ಕನ್ನಡಿ ಏಕೆ'? ಎನ್ನುವ ಗಾದೆಯಂತೆ ಅಪರಾಧ ಕಣ್ಣಿಗೆ ಹೊಡೆಯುವಂತಿದ್ದರೂ ಕೂಡ ತಕ್ಷಣವೇ ಆ ಸಂದರ್ಭದ ವಸತಿ ಸಚಿವ ಕೃಷ್ಣಯ್ಯಶೆಟ್ಟಿ, ವಸತಿ ನಿಗಮದ ಅಧ್ಯಕ್ಷರನ್ನು ತೆಗೆದುಹಾಕಿ, ಅಧಿಕಾರಿಗಳು ಇದರಲ್ಲಿ ಹೇಗೆ ಯಾವ ಹಂತದಲ್ಲಿ ಭಾಗಿಯಾಗಿದ್ದಾರೆ ಎಂಬ ಬಗ್ಗೆ ಉಚ್ಚ ಮಟ್ಟದ ತನಿಖೆ ನಡೆಸಲು ಕ್ರಮ ಕೈಗೊಳ್ಳುವುದು ಸರ್ಕಾರದ ಹೊಣೆಗಾರಿಕೆಯಾಗಿತ್ತು.

ಜೆಡಿ(ಎಸ್) ಮತ್ತು ಕಾಂಗ್ರೆ ಪಕ್ಷಗಳು ಸಿಬಿಐ ತನಿಖೆಗೆ ಮಾಡಿದ ಒತ್ತಾಯ ಸೂಕ್ತವಾಗಿತ್ತು. ಆದರೆ ಅದಕ್ಕೆ ರಾಜ್ಯಸರ್ಕಾರ ಕೇವಲ ಸರ್ಕಾರದ ಅಧೀನ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳಿಂದ ತನಿಖೆ ಎಂಬುದು ಹಗರಣದ ಸ್ವರೂಪಕ್ಕೆ ಮತ್ತು ರಾಜ್ಯದ ರೈತರಿಗೆ ಬಗೆದ ಅನ್ಯಾಯವೇ ಆಗಿದೆ. ಸಿಬಿಐ ತನಿಖೆಗೆ ಒತ್ತಾಯಿಸಿ 3 ದಿನಗಳ ಕಾಲ ಎರಡೂ ವಿರೋಧ ಪಕ್ಷಗಳು ವಿಧಾನಸಭೆಯಲ್ಲಿ ಧರಣಿ ನಡೆಸಿದರೂ, ಕಣ್ಣಿಗೆ ರಾಚುವಂತಿರುವ ಈ ಅಕ್ರಮದ ಬಗ್ಗೆ ಕ್ರಮ ತೆಗೆದುಕೊಳ್ಳಲು ಮತ್ತು ಸಿಬಿಐ ತನಿಖೆ ನಡೆಸಲು ಸರ್ಕಾರ ಹಾಗೂ ಬಿಜೆಪಿ ಮುಂದಾಗಲಿಲ್ಲ. ಜೆಡಿ(ಎಸ್) ಮತ್ತು ಕಾಂಗ್ರೆಸ್ ಪಕ್ಷಗಳು ಲೋಕಾಯುಕ್ತ ತನಿಖೆಗೆ ಒಪ್ಪಿದರೂ ಕೂಡ ಸರ್ಕಾರ ಮತ್ತು ಮುಖ್ಯಮಂತ್ರಿಗಳು ಕೇವಲ ಮುಖ್ಯ ಕಾರ್ಯದರ್ಶಿಗಳಿಂದ ತನಿಖೆ ಎಂದು ಪಟ್ಟುಹಿಡಿದರು. ಕೊನೆಗೆ ಜೆಡಿ(ಎಸ್) ಮತ್ತು ಕಾಂಗ್ರೆಸ್ ಪಕ್ಷಗಳು ರಾಜ್ಯಪಾಲರಿಗೆ ಮನವಿ ಸಲ್ಲಿಸಿ ಧರಣಿಯನ್ನು ಅಂತ್ಯಗೊಳಿಸಿ ಜವಾಬ್ದಾರಿಯಿಂದ ನಡೆದುಕೊಂಡಿದ್ದಾರೆ. ರಾಜ್ಯದ ಸಮಸ್ಯೆಗಳ ಚರ್ಚೆಗೆ ಅನುವು ಮಾಡಿಕೊಟ್ಟಿದ್ದಾರೆ.



ಈಗಲೂ ರಾಜ್ಯಸರ್ಕಾರಕ್ಕೆ ಹಾಗೂ ಬಿಜೆಪಿಗೆ ಸಾರ್ವಜನಿಕ ಜೀವನದಲ್ಲಿ ನೈತಿಕತೆಯ ಬಗ್ಗೆ ಸ್ವಲ್ಪವಾದರೂ ಬದ್ಧತೆಯಿದ್ದರೆ ಕೃಷ್ಣಯ್ಯಶೆಟ್ಟಿ ಹಾಗೂ ಜಿ.ಟಿ. ದೇವೇಗೌಡರನ್ನು ತಕ್ಷಣವೇ ಕಿತ್ತುಹಾಕಿ, ಇದೇ ಪ್ರಕರಣವನ್ನು ಲೋಕಾಯುಕ್ತ ತನಿಖೆಗೆ ಒಪ್ಪಿಸಬೇಕು.

ಪತ್ರಿಕೆ, ಟಿ.ವಿ.ಗಳು ಮತ್ತು ಬಿಜೆಪಿ ಹಗರಣ

ಕರ್ನಾಟಕದ ಅನೇಕ ಪತ್ರಿಕೆ, ಟಿ.ವಿ. ಛಾನೆಲ್‌ಗಳು ಭೂಹಗರಣದ ಬಗ್ಗೆ ಜೆಡಿ(ಎಸ್) ಮತ್ತು ಕಾಂಗ್ರೆಸ್ ಮೂರು ದಿನಗಳ ಧರಣಿ ಸತ್ಯಾಗ್ರಹ ನಡೆಸಿದ ಬಗ್ಗೆ 'ಸುದ್ದಿ' ಯ ಹೆಸರಿನಲ್ಲಿ ಮಾಡಿದ ಟೀಕೆ ಪತ್ರಿಕಾ ನೈತಿಕತೆಯ ಎಲ್ಲೆಗಳನ್ನು ಮೀರುವಂತಹದು. ಕರ್ನಾಟಕದ ರೈತರಿಗೆ ಒಂದು ಕಡೆ ವಸತಿಗೃಹಗಳ ಆಕಾಂಕ್ಷಿಗಳಿಗೆ ಮತ್ತೊಂದು ಕಡೆ ಮಾಡಿದ ಅನ್ಯಾಯಗಳ ಬಗ್ಗೆ ವರದಿ, ವಿಶ್ಲೇಷಣೆ ಮಾಡುವ ಬದಲು ವಿಧಾನಸಭೆಯ ಮೂರು ದಿನ ವ್ಯರ್ಥ ಒಂದು ದಿನಕ್ಕೆ ಒಂದು ಲಕ್ಷ ರೂ. ನಂತೆ ಜನರ ಹಣ ಹೊಳೆ ನೀರಿಗೆ ಎಂಬಂತೆ ವರ್ಣಿಸಿವೆ.

ಪತ್ರಿಕೆ, ಟಿ.ವಿ. ಛಾನೆಲ್‌ಗಳ ಪ್ರಕಾರ ವಿರೋಧ ಪಕ್ಷಗಳು ಮುಖ್ಯಮಂತ್ರಿಯವರ ತನಿಖೆಯ ನಾಟಕಕ್ಕೆ ಒಪ್ಪಿ ತಲೆಬಾಗಿ ಮತ್ತಷ್ಟು ಹಗರಣಗಳನ್ನು ಮಾಡಲು ಉತ್ತೇಜನ ನೀಡಬೇಕಾಗಿತ್ತು ಎನ್ನುವಂತಿದೆ.

ಮೂರು ದಿನಗಳ ನಂತರ ಧರಣಿ ಸತ್ಯಾಗ್ರಹವನ್ನು ಹಿಂತೆಗೆದುಕೊಂಡ ವಿರೋಧ ಪಕ್ಷಗಳು ಈ ವಿಷಯವನ್ನು ಜನತೆಯ ಬಳಿಗೆ, ರೈತರ ಬಳಿಗೆ ತೆಗೆದುಕೊಂಡುಹೋಗುವ ಮೂಲಕ ತಮ್ಮ ಕರ್ತವ್ಯವನ್ನು ಮುಂದುವರೆಸುವರೇ?

ಭೂ ಹಗರಣದ ಲಾಭ ಯಾರಿಗೆ

ಶಿ...ಘಟ್ಟದಲ್ಲಿ ರೈತರಿಂದ ಕೇವಲ 5 ರಿಂದ 15 ...ರೂ.ಗೆ ಭೂಮಿಯನ್ನು ಕೊಂಡು 50 ಲಕ್ಷಕ್ಕೆ ಕರ್ನಾಟಕ ಗೃಹ ಮಂಡಳಿಗೆ ಮಾರಿ ಒಂದು ಎಕರೆಗೆ ...ಲಕ್ಷವನ್ನು ಹೊಡೆಯಲಾಗಿದೆ. ಇದು ಒಂದು ಕಡೆ. ರೈತರಿಗೆ ಮತ್ತೊಂದು ಕಡೆ ಗೃಹಮಂಡಳಿಯಿಂದ ವಸತಿಯನ್ನು ಪಡೆಯುವ ಬಳಕೆದಾರರಿಗೂ ದೊಡ್ಡ ಅನ್ಯಾಯವೆಸಗಲಾಗಿದೆ.



ಈ ಹಗರಣದ ವಿವರಗಳು ತನ್ನಿಂದ ತಾನೇ ಕೇವಲ ಸಾಮಾನ್ಯ ಜ್ಞಾನವಿದ್ದವರಿಗೂ ಕೂಡ ಅಪರಾಧದ ಪ್ರಮಾಣ, ಅಪರಾಧ ಯಾರಿಂದ, ಹೇಗೆ? ಯಾವಾಗ? ಎಲ್ಲವೂ ಸ್ಪಷ್ಟವಾಗಿ ಗೊತ್ತಾಗುವಂತಿದೆ.

"ಹಿಂದು" ಪತ್ರಿಕೆಯ ವರದಿಯಂತೆ ರಾಜ್ಯಸರ್ಕಾರ 2009 ರ ಫೆ. 20 ರಂದು 959 ಎಕರೆ ಭೂಮಿಯನ್ನು ಕೊಳ್ಳಲು ಆಜ್ಞೆ ಹೊರಡಿಸಿದೆ. 24 ಗಂಟೆಗಳ ಒಳಗಾಗಿ ಫೆಬ್ರವರಿ 21 ರಂದು ಕರ್ನಾಟಕ ಗೃಹ ಮಂಡಳಿ 10 ಎಕರೆ ಭೂಮಿಯನ್ನು ಅಂದಿನ ವಸತಿ ಸಚಿವ ಕೃಷ್ಣಯ್ಯ ಶೆಟ್ಟಿಯವರ ಸೋದರ ಶ್ರೀನಿವಾಸ ಶೆಟ್ಟಿ ಮತ್ತು ಅವರ ಪಾಲುದಾರ ರಮೇಶರವರಿಂದ 10 ಎಕರೆ ಭೂಮಿಯನ್ನು ಕೊಂಡೇಬಿಟ್ಟಿತು. ಒಟ್ಟಿನಲ್ಲಿ 30.31 ಎಕರೆ ಭೂಮಿಯನ್ನು 15 ಕೋಟಿ ರೂ.ಗಳ ಬೆಲೆಗೆ ಕೊಳ್ಳಲಾಯಿತು. ಇವೆಲ್ಲವೂ ಶರವೇಗದಲ್ಲಿ ನಡೆದಿವೆ. ಇದೇ ರೀತಿ ರಾಜ್ಯದ ಹಲವೆಡೆಗಳಲ್ಲಿ ಅಕ್ರಮಗಳು ನಡೆದಿವೆಯೆಂಬ ಶಂಕೆಯಿದೆ.


ಈ ಹಗರಣದಲ್ಲಿ ಮೇಲ್ನೋಟಕ್ಕೆ ವಸತಿ ಸಚಿವ ಕೃಷ್ಣಯ್ಯ ಶೆಟ್ಟಿ ಹಾಗೂ ಕರ್ನಾಟಕ ಗೃಹ ಮಂಡಳಿ ಅಧ್ಯಕ್ಷ ಜಿ.ಟಿ. ದೇವೇಗೌಡರು ಅಪರಾಧಿ ಸ್ಥಾನದಲ್ಲಿ ನಿಲ್ಲುತ್ತಾರೆ. ಆದರೆ ಈ ಹಗರಣದ ಬಗ್ಗೆ ಮುಖ್ಯಮಂತ್ರಿಯವರು, ಬಿಜೆಪಿಯ ಇತರೆ ಸಚಿವರು ಬಹಳ ದೃಢವಾಗಿ ವಿರೋಧ ಪಕ್ಷದ ಜೊತೆ ವಾಗ್ಯುದ್ಧಕ್ಕೆ ಇಳಿದಿರುವುದು ಹಾಗೂ ವಿಧಾನಸಭೆಯ 3 ದಿನಗಳ ಕಲಾಪವನ್ನು ಬಲಿಗೊಡಲು ತಯಾರಾಗಿರುವುದನ್ನು ನೋಡಿದರೆ ಜನಮನದಲ್ಲಿ ಹಲವು ಸಂಶಯಗಳು ಏಳುತ್ತವೆ.

ವಿರೋಧ ಪಕ್ಷ ಎತ್ತಿರುವಂತೆ ಮುಖ್ಯಮಂತ್ರಿಯವರೇ ನೇರ ಫಲಾನುಭವಿಗಳೇ? ಆ ಆಜ್ಞೆಯಿಂದ ರಾಜ್ಯ ಮಂತ್ರಿಮಂಡಲದಲ್ಲಿರುವ ಇತರ ಭೂ ಮಾಫಿಯಾ ಗುಂಪಿನ ಮಂತ್ರಿಗಳೂ ಫಲಾನುಭವಿಗಳೇ? ಇವು ಒಂದು ಹಂತದ ಪ್ರಶ್ನೆಗಳು.

ಇವುಗಳ ಜೊತೆಗೆ ಈ ಆಜ್ಞೆ ಹೊರಟಿರುವ ಸಮಯ ಮತ್ತು ವೇಗವನ್ನು ನೋಡಿದರೆ ಇದು ಕೇವಲ ಕೆಲ ವ್ಯಕ್ತಿಗಳ ಲಾಭಕ್ಕಾಗಿ ಮಾತ್ರ ಅಲ್ಲ ಎನ್ನುವಂತಿದೆ.

ಮುಂದೆ ಬರಲಿರುವ ಚುನಾವಣಾ ಸಂಹಿತೆಗೆ ಮೊದಲೇ ಶರವೇಗದಲ್ಲಿ ಹಣ ಕೈಗೆ ಬರಬೇಕೆಂಬ ಆತುರ ಎದ್ದು ಕಾಣುತ್ತದೆ. ಬಿಜೆಪಿ ಮತ್ತು ಆರೆಸ್ಸೆಸ್ ಈ ಹಗರಣದ ಬಗ್ಗೆ ಚಕಾರ ಎತ್ತದಿರುವುದನ್ನು ನೋಡಿದರೆ ಈ ಹಣದ ಲಾಭ ಪ್ರಧಾನವಾಗಿ ಬಿಜೆಪಿಗೆ ಕೆಲ ಕ್ಷೇತ್ರಗಳ ಚುನಾವಣಾ ವೆಚ್ಚವನ್ನು ಭರಿಸಲಿಕ್ಕೆ ಎಂಬ ಸಂಶಯ ಎದ್ದು ಕಾಣುತ್ತಿದೆ.

ಹೀಗೆ ಕರ್ನಾಟಕದಲ್ಲಿ ಬಿಜೆಪಿಯು 19 ಲೋಕಸಭಾ ಸ್ಥಾನಗಳ ಗೆಲುವಿನ ಹಿಂದೆ ಇಂತಹ ಎಷ್ಟು ಹಗರಣ ಅಥವಾ ಲೂಟಿ ಇದೆಯೋ? ಪತ್ತೆದಾರಿ ಕೆಲಸ ಮಾಡಿಯೇ ತಿಳಿಯಬೇಕಾಗಿದೆ.2



ನಾಚಿಕೆ, ಮಾನ, ಮರ್ಯಾದೆ ಮೂರೂ ಬಿಟ್ಟ ಕೃಷ್ಣಯ್ಯ ಶೆಟ್ಟಿ

"ಹಿಂದಿನಿಂದಲೂ ನಮ್ಮ ಕುಟುಂಬ ರಿಯಲ್ ಎಸ್ಟೇಟ್‌ನಲ್ಲಿ ತೊಡಗಿದೆ. ವ್ಯಾಪಾರವೇ ನಮ್ಮ ಬದುಕು. ಈ ಪ್ರಕರಣದಲ್ಲೂ ಅಷ್ಟೆ, ರೈತರಿಂದ ಖರೀದಿಸಿದ್ದ ಭೂಮಿಯನ್ನು ಕೆಎಚ್‌ಬಿಗೆ ಮಾರಾಟ ಮಾಡಲಾಗಿದೆ. ಇದರಲ್ಲಿ ಏನು ತಪ್ಪಿದೆಯೋ ಗೊತ್ತಾಗುತ್ತಿಲ್ಲ. ಲಾಭಕ್ಕಲ್ಲದೆ, ನಷ್ಟಕ್ಕೆ ಮಾರಿಕೊಳ್ಳಲು ನಮಗೆ ತಲೆ ಕೆಟ್ಟಿಲ್ಲ. ಅನೇಕ ಪ್ರಕರಣಗಳಲ್ಲಿ ಚದರ ಅಡಿಗೆ 750 ರೂ.ಗಳಂತೆ ಮಾರಾಟ ಮಾಡಿದ್ದಾರೆ, ಖರೀದಿಸಿರುವ ನಿದರ್ಶನಗಳಿವೆ. ನಾವು 450 ರೂ.ಗೆ ಮಾರಿದ್ದೇವೆ. ಅದನ್ನೇ ತಪ್ಪು ಎಂದರೆ ಏನು ಹೇಳಲು ಆಗುವುದಿಲ್ಲ' ಎಂದರು.

- ಕೃಷ್ಣಯ್ಯ ಶೆಟ್ಟಿ
ಬಿಜೆಪಿ ಮಾಜಿ ವಸತಿ ಸಚಿವ

ಸುದ್ದಿ ಬಿಂಬ

ಪ್ರತಿ 2 ದಿನಕ್ಕೆ ಒಬ್ಬ ರೈತ ಆತ್ಮಹತ್ಯೆ

ರಾಜ್ಯ ಹಾಗೂ ಕೇಂದ್ರ ಸರ್ಕಾರದ ಸಾಲ ಮನ್ನಾ ಯೋಜನೆ, ಶೇ.3 ರಷ್ಟು ಸಾಲ ಯೋಜನೆ ನಡುವೆಯೂ ರಾಜ್ಯದಲ್ಲಿ ರೈತರ ಆತ್ಮಹತ್ಯೆ ಸರಣಿ ಮುಂದುವರೆದಿದೆ. ಕಳೆದ ಒಂದೂವರೆ ವರ್ಷದಲ್ಲಿ ರಾಜ್ಯದಲ್ಲಿ ಸರಾಸರಿ ಪ್ರತಿ ಎರಡು ದಿನಕ್ಕೆ ಒಬ್ಬರಂತೆ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

2008 ಜನವರಿಯಿಂದ 2009 ಜೂನ್ 30ರವರೆಗೆ ಬೆಳೆ ನಷ್ಟ ಮತ್ತಿತರ ಕಾರಣಗಳಿಗಾಗಿ ಪ್ರಾಣ ಕಳೆದುಕೊಂಡ ರೈತರ ಸಂಖ್ಯೆ 266. ಇದು ರಾಜ್ಯ ಸರ್ಕಾರದ ನೀಡಿರುವ ಅಧಿಕೃತ ಪ್ರಕರಣಗಳು. ಅಧಿಕೃತವಲ್ಲದ ರೈತರ ಆತ್ಮಹತ್ಯೆ ಪ್ರಕರಣಗಳು ಎಷ್ಟಿವೆಯೋ! ಈ ಎಲ್ಲಾ 266 ಪ್ರಕರಣಗಳಲ್ಲೂ ರಾಜ್ಯ ಸರ್ಕಾರ ಸಂತ್ರಸ್ತ ರೈತ ಕುಟುಂಬಕ್ಕೆ ತಲಾ 1 ಲಕ್ಷ ರೂಪಾಯಿ ಪರಿಹಾರ ನೀಡಿದೆ.

ಸದನದಲ್ಲಿ ಸರ್ಕಾರ ನೀಡಿರುವ ಮಾಹಿತಿ ಪ್ರಕಾರ ರೈತ ಆತ್ಮಹತ್ಯೆ ಮುಕ್ತ ಜಿಲ್ಲೆ ಎಂದರೆ ಚಿಕ್ಕಬಳ್ಳಾಪುರ.

ಚಾಮರಾಜನಗರ, ದಾವಣಗೆರೆ, ಉಡುಪಿ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಪರಿಸ್ಥಿತಿ ಪರವಾಗಿಲ್ಲ. ಇಲ್ಲಿ ಆತ್ಮಹತ್ಯೆಗೆ ಶರಣಾದವರ ಸಂಖ್ಯೆ ತಲಾ 1 ಮಾತ್ರ. ಬೀದರ್ ಜಿಲ್ಲೆಯಲ್ಲಿ ಅತಿ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈ ಜಿಲ್ಲೆಯಲ್ಲಿ ಆತ್ಮಹತ್ಯೆಗೆ ಶರಣಾದ ರೈತರ ಸಂಖ್ಯೆ 31.

ನಂತರದ ಸ್ಥಾನದಲ್ಲಿ ಗುಲ್ಬರ್ಗಾ ಜಿಲ್ಲೆ ಇದೆ. ಇಲ್ಲಿ 30 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಚಿಕ್ಕಮಗಳೂರು ಜಿಲ್ಲೆ 28, ಹಾಸನದಲ್ಲಿ 25, ಬೆಳಗಾವಿಯಲ್ಲಿ 16, ಬಿಜಾಪುರ ಮತ್ತು ಚಿತ್ರದುರ್ಗದಲ್ಲಿ ತಲಾ 15, ತುಮಕೂರು ಮತ್ತು ಕೊಡಗಿನಲ್ಲಿ ತಲಾ 11 ಹಾಗೂ ಬಳ್ಳಾರಿಯಲ್ಲಿ 10 ಮಂದಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಧಾರವಾಡ 8, ಮೈಸೂರು 7, ಕೊಪ್ಪಳ 7, ಗದಗ 6, ಮಂಡ್ಯ 9, ಬಾಗಲಕೋಟೆ 4, ಉತ್ತರ ಕನ್ನಡ 9, ದಕ್ಷಿಣ ಕನ್ನಡ 3, ರಾಮನಗರ 4, ಹಾವೇರಿ 5, ಶಿವಮೊಗ್ಗ ಜಿಲ್ಲೆಯಲ್ಲಿ 3 ಮಂದಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

■ 'ಕನ್ನಡ ಪ್ರಭ'ದಿಂದ

ಮಾಧ್ಯಮ ಮತ್ತು ಭ್ರಷ್ಟಾಚಾರ

ವಿಧಾನಸಭಾ ಅಧಿವೇಶನ ಆರಂಭವಾಗುತ್ತಲೇ ಗೃಹ ಮಂಡಳಿ ಭೂ ವಿವಾದ ಭಾರೀ ಚರ್ಚೆಗೆ ಗ್ರಾಸವಾಗಿದೆ. ಶಿಡ್ಲಘಟ್ಟದಲ್ಲಿ ಎಕರೆಗೆ 5 ಲಕ್ಷ ರೂಪಾಯಿ ನೀಡಿ ರೈತರಿಂದ ಜಮೀನು ಖರೀದಿಸಲಾಗಿದೆ. ಅದೇ ಜಮೀನಿಗೆ ಗೃಹ ಮಂಡಳಿಯಿಂದ 50 ಲಕ್ಷ ರೂಪಾಯಿ ನಿಗದಿಪಡಿಸಲಾಗಿದೆ. ಇದೊಂದು ಬೃಹತ್ ಅವ್ಯವಹಾರವಾಗಿದ್ದು, ಮಾಜಿ ಸಚಿವ ಕೃಷ್ಣಯ್ಯ ಶೆಟ್ಟಿ ನೇರವಾಗಿ ಭಾಗಿಯಾಗಿದ್ದಾರೆ ಎಂಬ ಆರೋಪವೂ ಇದೆ. ಸುಮಾರು 600 ಕೋಟಿ ರೂಪಾಯಿಗಳ ಈ ಅವ್ಯವಹಾರದ ಪ್ರಮುಖ ಸೂತ್ರಧಾರಿ ಕೃಷ್ಣಯ್ಯ ಶೆಟ್ಟಿ ಸಹೋದರ ಶ್ರೀನಿವಾಸ ಶೆಟ್ಟಿ.

ಭ್ರಷ್ಟಾಚಾರದಲ್ಲಿ ಮಾಧ್ಯಮದ ಪಾಲು

ಕೆಲ ದಿನಗಳ ಹಿಂದೆ 'ಟಿವಿ 9' ಸುದ್ದಿ ವಾಹಿನಿಯ ವರದಿಗಾರನೊಬ್ಬ ಕೆಲಸ ಕಳೆದುಕೊಂಡ. ಈ ಸುದ್ದಿ ಮಾಧ್ಯಮ ವಲಯದಲ್ಲಿ ಭಾರೀ ಚರ್ಚೆಯ ವಿಷಯವಾಯಿತು. ಕೆಲಸ ಕಳೆದುಕೊಂಡ ಈ ಸುದ್ದಿವಾಹಿನಿಯ ವರದಿಗಾರ ಇದೇ ಹಗರಣದ ಬೆನ್ನು ಹತ್ತಿದ್ದ. ಈ ಸುಳಿವು ಪಡೆದುಕೊಂಡ ಸಚಿವರಾಗಿದ್ದ ಕೃಷ್ಣಯ್ಯ ಶೆಟ್ಟಿ ಸುದ್ದಿ ಮುಚ್ಚಿ ಹಾಕಲು ವರದಿಗಾರನಿಗೆ ಬರೋಬ್ಬರಿ 1 ಕೋಟಿ ಲಂಚ ನೀಡಿದ. ಮುಖ್ಯಸ್ಥರಿಗೆ, ಎಡಿಟರ್‌ಗೆ, ಡೆಸ್ಕ್ ಚೀಫ್‌ಗೆ ಹಣ ನೀಡಬೇಕು ಎಂದು ಕಂತು ಕಂತಲ್ಲೇ ಹಣ ಪಡೆದ. ರಾಜ್ಯದ ಎಲ್ಲೆಡೆ ತಿರುಪತಿಯ ಉಂಡೆ ಹಂಚಿದ ಈ ಸಚಿವರಿಗೆ ವರದಿಗಾರ ತಿರುಪತಿಯ ಪಂಗನಾಮವನ್ನೇ ಹಾಕಿದ.

ಮಾಧ್ಯಮದ ಕಚೇರಿಗೆ ಆ ಸಚಿವ ಭೇಟಿ ನೀಡಿದ್ದಾಗ ಲೋಕಾಭಿರಾಮವಾಗಿ ಈ ವಿಷಯ ಬಂತು. 'ನಿಮಗೆಲ್ಲ ನನ್ನ ಪ್ರಸಾದ ತಲುಪಿದೆಯೇ' ಎಂದು ಕೇಳಿದಾಗ ಎಲ್ಲರಿಗೂ ಅಚ್ಚರಿ. ಆಗಲೇ ವರದಿಗಾರನ ಸಾಹಸ ಬಯಲಿಗೆ ಬಂದದ್ದು.

ಅವ್ಯವಹಾರವೇ ನಡೆಯದಿದ್ದರೆ ಕೃಷ್ಣಯ್ಯ ಶೆಟ್ಟಿ ಅಷ್ಟೊಂದು ಲಂಚ ಯಾಕೆ ನೀಡಬೇಕಿತ್ತು ಎಂಬ ಪ್ರಶ್ನೆ ಸಹಜವಾಗಿಯೇ ಉದ್ಭವಿಸುತ್ತದೆ. ಇನ್ನು ಈ ಬಗ್ಗೆ ಶೆಟ್ಟಿ ದೂರು ನೀಡುವ ಗೋಜಿಗೇ ಹೋಗಿಲ್ಲ. ಏಕೆಂದರೆ ಅದು ಭ್ರಷ್ಟಾಚಾರದ ಕಪ್ಪು ಹಣ. ಇದು ಹಗರಣಗಳಲ್ಲಿ ಮಾಧ್ಯಮದ ಪಾತ್ರಕ್ಕೆ ಒಂದು ಪುಟ್ಟ ಸ್ಯಾಂಪಲ್.

ಪತ್ರಿಕೆಯಲ್ಲಿ, ಟಿವಿಯಲ್ಲಿ ಮಿಂಚಲೂ ಹಣ

ಇನ್ನು ಪತ್ರಿಕೆಯಲ್ಲಿ, ಟಿವಿಯಲ್ಲಿ ಮಿಂಚಬೇಕಿದ್ದರೆ ವರದಿಗಾರನನ್ನು ಚೆನ್ನಾಗಿ ಇಟ್ಟುಕೊಳ್ಳಬೇಕು ಎಂಬ ಅಘೋಷಿತ ನಿಯಮವೂ ಚಾಲ್ತಿಯಲ್ಲಿದೆ. ಚುನಾವಣೆ ಸಮಯದಲ್ಲಿ ಸಾಕಷ್ಟು ಇಂತಹ ವ್ಯವಹಾರ ಮಾಡಿದ ಪತ್ರಕರ್ತರೂ ಇದ್ದಾರೆ. ಸುದ್ದಿ ವಾಹಿನಿಗಳಲ್ಲಿ ಇಂತಹದ್ದು ಸಾಕಷ್ಟು ನಡೆಯುತ್ತದೆ. ಆದರೆ, ಕೋಟಿ ಲಂಚದ ಪ್ರಸಂಗ ಭ್ರಷ್ಟಾಚಾರದ ಎತ್ತರವನ್ನು ಜಗಜ್ಜಾಹೀರು ಮಾಡಿದೆ.

ರೈತರ ಹೆಸರಲ್ಲಿ ವಿದೇಶ ಪ್ರಯಾಣ ಮಾಡುವುದು, ಅತಿ ಪ್ರಾಮುಖ್ಯ ಸ್ಥಳದಲ್ಲಿ ಸೈಟ್ ಪಡೆದುಕೊಳ್ಳುವುದು, ಬೇಕಾದವರಿಗೆ ವರ್ಗಾವಣೆ, ಭಡ್ತಿ ನೀಡಿಸುವುದು ಇತ್ಯಾದಿ ಇತ್ಯಾದಿ... ಇವೆಲ್ಲ ಭ್ರಷ್ಟ ಪತ್ರಕರ್ತರ ಅಡ್ಡ ವ್ಯವಹಾರಗಳು.

ಭ್ರಷ್ಟರಿಗೆ ಪುಡಾರಿಗಳ ಪ್ರೋತ್ಸಾಹ

ಮಾಧ್ಯಮದಲ್ಲೂ ಭ್ರಷ್ಟಾಚಾರ ವ್ಯಾಪಕವಾಗಿ ಬೆಳೆದಿದೆ ಎಂಬುದನ್ನು ಎಲ್ಲರೂ ಒಪ್ಪಲೇಬೇಕು. ಒಪ್ಪುತ್ತಾರೆ ಕೂಡ. ಇದು ವಾಸ್ತವ. ಇಂತಹ ಪರಿಸ್ಥಿತಿಯನ್ನು ಒಂದು ವರ್ಗದ ಪತ್ರಕರ್ತರು ತಂದಿಟ್ಟಿದ್ದಾರೆ. ಇವರ ಕೃತ್ಯದಿಂದ ಇಡೀ ಪತ್ರಕರ್ತರ ವರ್ಗವೇ ತಲೆತಗ್ಗಿಸಬೇಕಾಗಿದೆ. ಇದು ಕೇವಲ ಅವರ ವೃತ್ತಿ ಜೀವನದ ಕಪ್ಪುಚುಕ್ಕೆಯಲ್ಲ. ಇಡೀ ಪತ್ರಿಕಾ ರಂಗಕ್ಕೆ ಕಳಂಕ.

ನಿಜ, ಇಂತಹ ಸುದ್ದಿಗಳು ನಿಷ್ಪಕ್ಷಪಾತ, ವೃತ್ತಿಪರ ಪತ್ರಕರ್ತನಿಗೆ ಸಾಕಷ್ಟು ಮುಜುಗರ ಉಂಟುಮಾಡಿಯೇ ಮಾಡುತ್ತದೆ. ವೃತ್ತಿ ಜೀವನದಲ್ಲಿ ಒಂದು ಕಪ್ ಟೀ ಕೂಡ ಮುಟ್ಟದ ಪತ್ರಕರ್ತರೂ ಇದ್ದಾರೆ. ಕೇವಲ ತಮ್ಮ ಬರವಣಿಗೆಗಳ ಮೂಲಕ ಸರ್ಕಾರಗಳ[illegible] ಅಲ್ಲಾಡಿಸಿದವರಿದ್ದಾರೆ, ಹಲವಾರು ಬಾ[illegible] ಪತ್ರಿಕೆಗಳೇ ಭ್ರಷ್ಟಾಚಾರವನ್ನು ಬಯಲಿಗೆಳೆದಿವೆ. ಹಾಗಾಗಿಯೇ ಪತ್ರಿಕಾ ಮಾಧ್ಯಮಕ್ಕೆ ಸಮಾಜದಲ್ಲಿ ಉನ್ನತ ಸ್ಥಾನವಿದೆ. ಇದೇ ದಾರಿಯಲ್ಲಿ ಸಾಗಿ, ಘನತೆ, ಗಂಭೀರತೆ ಮೆರೆದ ಪತ್ರಕರ್ತರು ಸಾಕಷ್ಟಿದ್ದಾರೆ. ಅಂಥವರು ಮಾಧ್ಯಮ ವರ್ಗಕ್ಕೆ ಆದರ್ಶವಾಗಬೇಕು.

ಸಮಾಜದಲ್ಲಿ ನಡೆಯುವ ಅನ್ಯಾಯ, ಶೋಷಣೆ ಖಂಡಿಸುವ, ವಿರೋಧಿಸುವ, ತನಗೆ ಸರಿ ಕಂಡದ್ದನ್ನು ಬರೆಯುವ ಪತ್ರಕರ್ತರ ಸಂಖ್ಯೆ ಹೆಚ್ಚಬೇಕು.

ಆಹಾರ 'ಭದ್ರತೆ' ಕಾಯ್ದೆ...

ಪುಟ 2ರಿಂದ

ಅಕ್ಕಿಯನ್ನು ಪ್ರತಿ ಕುಟುಂಬಕ್ಕೆ ಹಂಚಿಕೆ ಮಾಡಲಾಗುತ್ತಿದೆ. ಆಂಧ್ರಪ್ರದೇಶ, ಕೇರಳ, ತಮಿಳುನಾಡು ಸರ್ಕಾರಗಳು ತನ್ನದೇ ಆದ ರೀತಿಯಲ್ಲಿ ಬಡವರಿಗೆ ಅಕ್ಕಿಯನ್ನು ವಿತರಿಸುತ್ತಿವೆ. ಕೇರಳ ರಾಜ್ಯದಲ್ಲಿ ಕಡಿಮೆ ದರದ ಆಹಾರ ಧಾನ್ಯಕ್ಕೆ ಅರ್ಹ ವಾಗಿ ಕೇಂದ್ರ ಸರ್ಕಾರವು ಶೇ.11 ರಷ್ಟು ಜನಸಂಖ್ಯೆ ಯನ್ನು ಗುರುತಿಸಿದ್ದರೆ, ಕೇರಳ ಸರ್ಕಾರವು ವಿವಿಧ ಅಂಶಗಳ ಪರಿಗಣನೆಯ ಆಧಾರದಲ್ಲಿ ಶೇ.30 ಜನರಿಗೆ ಈ ಅಗ್ಗದ ದರದ ಆಹಾರ ಧಾನ್ಯ ಪೂರೈಸುತ್ತಿದೆ. ಆಂಧ್ರ ಸರ್ಕಾರವು ತನ್ನ ರಾಜ್ಯದ ಶೇ.80 ರಷ್ಟು ಜನರಿಗೆ ಕೆ.ಜಿ.ಗೆ 2 ರೂ.ನಂತೆ ಪ್ರತಿಯೊಬ್ಬರಿಗೆ ತಲಾ 6 ಕೆ.ಜಿ.ಯಂತೆ ಅಕ್ಕಿ ಪೂರೈಸುತ್ತಿದೆ. ತಮಿಳು ನಾಡು ಸರ್ಕಾರವು 16 ರಿಂದ 20 ಕೆ.ಜಿ. ಆಹಾರವನ್ನು ಕೆ.ಜಿ.ಗೆ ಒಂದು ರೂಪಾಯಿ ಬೆಲೆಯಲ್ಲಿ ಸಾರ್ವತ್ರಿಕವಾಗಿ ಎಲ್ಲಾ ಕುಟುಂಬಗಳಿಗೆ ಒದಗಿಸುತ್ತಿದೆ.

ಕಳೆದ ಐದು ವರ್ಷಗಳಿಂದ ಬಿಪಿಎಲ್ ಕಾರ್ಡುದಾರರ ಸಂಖ್ಯೆ ಕಡಿಮೆ ಆಗಲು ಕಾರಣ ಕೇಂದ್ರ ಸರ್ಕಾರ ಸಮೀಕ್ಷೆಯಿಂದ ಎಪಿಎಲ್ ಕಾರ್ಡ್‌ದಾರರ ಸಂಖ್ಯೆಯನ್ನು ಅವೈಜ್ಞಾನಿಕವಾಗಿ ಏರಿಸಿದ್ದು, ಇದು ಕೂಡ ಸಾರ್ವಜನಿಕ ಆಹಾರ ವಿತರಣೆ ವ್ಯವಸ್ಥೆ ಮೇಲೆ ಪರಿಣಾಮ ಬೀರಿದೆ. ಉದಾಹರಣೆಗೆ, 2006ರಿಂದ 2008ರವರೆಗೆ ಎಪಿಎಲ್ ಕಾರ್ಡುದಾರರಿಗೆ ಗೋಧಿಯನ್ನು ನೀಡುವುದನ್ನು ಕೇಂದ್ರ ಸರ್ಕಾರ ನಿಲ್ಲಿಸಿದೆ. ಆದರೆ ಅನೇಕ ರಾಜ್ಯಗಳು ಬಜೆಟ್‌ನಲ್ಲಿ ತನ್ನ ರಾಜ್ಯದ ಬಡವರಿಗೆ ಆಹಾರ ಧಾನ್ಯಗಳನ್ನು ಪಡಿತರ ವ್ಯವಸ್ಥೆ ಅಡಿಯಲ್ಲಿ ವಿತರಿಸಲು ಸಾಕಷ್ಟು ಹಣ ವ್ಯಯ ಮಾಡುತ್ತಿವೆ. ಆದರೆ ಆಹಾರ ಧಾನ್ಯಗಳ ಬಿಡುಗಡೆ ಮೇಲೆ ಹಿಡಿತ ಹೊಂದಿರುವ ಕೇಂದ್ರ ಸರ್ಕಾರ ರಾಜ್ಯ ಸರ್ಕಾರಗಳಿಗೆ ಹಣ ಬಿಡುಗಡೆ ಮಾಡಲು ಹಿಂದುಮುಂದು ನೋಡುತ್ತಿದೆ. ಆದ್ದರಿಂದ ಕೇಂದ್ರ ಸರ್ಕಾರ ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯನ್ನು ಜಾರಿಗೆ ತರುವ ಮುನ್ನ ರಾಜ್ಯಗಳಿಗೆ ಆಹಾರ ಧಾನ್ಯಗಳನ್ನು ನಿಗದಿತ ಸಮಾಜದಲ್ಲಿ ಬಿಡುಗಡೆ ಮಾಡಬೇಕು ಜೊತೆಗೆ ರಾಜ್ಯಗಳು ನೀಡುತ್ತಿರುವ ಸಬ್ಸಿಡಿ ರಿಯಾಯ್ತಿ ಹಣವನ್ನು ಕೇಂದ್ರ ಸರ್ಕಾರ ಭರಿಸಬೇಕು.

ನವ ಉದಾರೀಕರಣ ನೀತಿಗಳು ಜಾರಿಗೊಳ್ಳ[illegible] ಮುಂಚೆ ಅಂದರೆ 90ರ ದಶಕಕ್ಕಿಂತ ಮುಂಚೆ ಇದ್ದ[illegible] ಆಹಾರ ಧಾನ್ಯವು ಪಡಿತರ ಚೀಟಿಯ [illegible] ಎಲ್ಲರಿಗೂ ದೊರೆಯುವಂತೆ ಮಾಡುವುದೇ ಆಹಾ[illegible] ಭದ್ರತೆಯ ದೃಷ್ಟಿಯಿಂದ ಪ್ರಮುಖವಾದ [illegible] ಇಂತಹ ಸಾರ್ವತ್ರಿಕ ಪಡಿತರ ವಿತರಣಾ ವ್ಯವಸ್ಥ[illegible] ಪ್ರಯೋಜನವೇನೆಂಬುದು ಈಗಾಗಲೇ ಭಾರತದ[illegible] ಸಾಬೀತಾಗಿದೆ. ಶ್ರೀಮಂತರನ್ನು ಬಡತ[illegible] ರೇಖೆಯೊಳಗೆ ಸೇರಿಸಿರುವುದಕ್ಕಿಂತ ಬಡವರ[illegible] ಬಡತನ ರೇಖೆಯಿಂದ ಹೊರಗಿಟ್ಟಿರುವುದ[illegible] ಪ್ರಮಾಣ ತುಂಬಾ ಅಧಿಕ. ಬಿಪಿಎಲ್ ದರದ[illegible] ಆಹಾರ ಧಾನ್ಯವನ್ನು ಎಲ್ಲರಿಗೂ ಪೂರೈಸಲು ಹಾಗ[illegible] ಅಂತ್ಯೋದಯ ಯೋಜನೆಯನ್ನು ಅಗತ್ಯವುಳ್ಳವರ[illegible] ವಿಸ್ತರಿಸಿ ಮುಂದುವರಿಸಿಕೊಂಡು ಹೋಗಲು ದೇಶ[illegible] ಒಟ್ಟು ರಾಷ್ಟ್ರೀಯ ಉತ್ಪನ್ನದ ಶೇ.1.6 ರಷ[illegible] ಸಂಪನ್ಮೂಲ ಮಾತ್ರವೇ ಸಾಕೆಂದು ಅಂದಾಜ[illegible] ಮಾಡಲಾಗಿದೆ. ಕಳೆದ 5 ವರ್ಷಗಳಲ್ಲಿ ದೊ[illegible] ದೊಡ್ಡ ಬಂಡವಾಳಗಾರ ಕಂಪನಿಗಳಿಗೆ ನೀಡಲಾ[illegible]ರುವ ರಿಯಾಯಿತಿ ವಿನಾಯಿತಿಗಳಿಗೆ ಹೋಲಿಸಿದ[illegible] ಇದು ಅತ್ಯಲ್ಪ ಪ್ರಮಾಣ ಎಂಬುದು ಖಚಿತ. [illegible] ಹಿನ್ನೆಲೆಯಲ್ಲಿ ದೇಶವು ದೇಶದ ಜನರ ಆ[illegible] ಭದ್ರತೆಗೆ ಖಂಡಿತ ಇಷ್ಟನ್ನು ವೆಚ್ಚ ಮಾಡಬೇಕಾ[illegible] ಅಗತ್ಯವಿದೆ. ಅನಿವಾರ್ಯತೆಯೂ ಇದೆ.

ಹೊಸೂರು ರಸ್ತೆ ಬೊಮ್ಮನಹಳ್ಳಿ ಪ್ರದೇಶದಲ್ಲಿ ನಾಗರಿಕ ಸಮಸ್ಯೆಗಳ ವಿರುದ್ಧ ಹೋರಾಟ ನಡೆಸುತ್ತಾ ಬೆಳೆಯುತ್ತಿರುವ ಸಿಪಿಐ(ಎಂ) - ಡಿವೈಎಫ್‌ಐ ಸಂಘಟನೆಗಳ ಏಳ್ಗೆಯನ್ನು ಸಹಿಸದ ಗೂಂಡಾಗಳು ದಾಳಿಗೆ ಮುಂದಾಗಿದ್ದಾರೆ. ಆದರೆ ಜನಪರ ಆಂದೋಲನ ಇಂತಹ ದಾಳಿಗೆ ಬೆದರುವುದಿಲ್ಲ.

ಸಿಪಿಐ(ಎಂ) ಕಛೇರಿ ಧ್ವಂಸ ಮುಖಂಡರ ಮೇಲೆ ಗೂಂಡಾ ಧಾಳಿ

ಕ್ಷಿಪ್ರ ಪ್ರತಿಭಟನೆ


ಬೆಂಗಳೂರಿನ ಹೊಸೂರು ರಸ್ತೆ ಸಿಪಿಐ(ಎಂ) ಮಡಿವಾಳ ವಲಯ ಕಛೇರಿ ಮೇಲೆ ದಾಳಿ ನಡೆಸಿ ಸಿಪಿಐ(ಎಂ) ವಲಯ ಕಾರ್ಯದರ್ಶಿ ಲ[illegible]ಕುಮಾರ್ ಮೇಲೆ ಮಾರಣಾಂತಿಕ ಹಲ್ಲೆ ನ[illegible]ದ್ದು, ಸದ್ಯ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಜುಲೈ 12, ಭಾನುವಾರದಂದು ರಾತ್ರಿ 10ರ ಸುಮಾರಿನಲ್ಲಿ ಏಕಾಏಕಿ ದಾಳಿ ನಡೆಸಿದ ಕೆಲ ಗೂಂಡಾಗಳು ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಡಿವೈಎಫ್‌ಐ ಮುಖಂಡ ನವೀನ್‌ಕುಮಾರ್ ಮೇಲೆ ತೀವ್ರ ಹಲ್ಲೆ ನಡೆಸಿದ್ದಾರೆ. ಇದನ್ನು ತಡೆಯಲು ಮುಂದಾದ ಸಿಪಿಐ(ಎಂ) ಮುಖಂಡ ಲಕ್ಷ್ಮಣ್‌ಕುಮಾರ್ ಅವರಿಗೆ ಬಾಟಲಿಯಿಂದ ತಲೆಗೆ ಹೊಡೆದು, ಚಾಕು ಮತ್ತು ಮಚ್ಚುಗಳನ್ನು ಬಳಸಿ ಕೊಲೆ ಮಾಡಲು ಯತ್ನಿಸಿದ್ದಾರೆ. ತೀವ್ರ ರಕ್ತಸ್ರಾವವಾಗಿದೆ. ತಕ್ಷಣವೇ ಸಮೀಪದ ಆಸ್ಪತ್ರೆಗೆ ಸೇರಿಸಲಾಗಿ, ಪ್ರಾಣಾಪಯದಿಂದ ಪಾರಾಗಿದ್ದಾರೆ. ಲಕ್ಷ್ಮಣ್‌ಕುಮಾರ್ ಅವರ ಮಾರುತಿ ಓಮನಿ ಕಾರನ್ನು ಜಖಂಗೊಳಿಸಿ, ಕಛೇರಿಯಲ್ಲಿದ್ದ [illegible]ಪಕರಣಗಳನ್ನು ಬೀದಿಗೆ ಎಸೆದು, ಹಲವು ದ[illegible]ಲಗಳನ್ನು ಬಿಸಾಡಿದ್ದಾರೆ.

ದಾಳಿಯ ಹಿಂದಿರುವ ಉದ್ದೇಶ

ಬೊಮ್ಮನಹಳ್ಳಿ ಪ್ರದೇಶದಲ್ಲಿ ಡಿವೈಎಫ್‌ಐ ಹಾಗೂ ಸಿಪಿಐ(ಎಂ) ನೇತೃತ್ವದಲ್ಲಿ ನಾಗರಿಕರ ಸಮಸ್ಯೆಗಳ ವಿರುದ್ಧ ನಿರಂತರವಾಗಿ ಹೋರಾಟಗಳನ್ನು ನಡೆಸಿ, ಜನಮನ್ನಣೆಗೆ ಪಾತ್ರವಾಗಿವೆ. ನೇರ ಹಾವಳಿ ವಿರುದ್ಧ, ರೇಷನ್‌ಕಾರ್ಡ್‌ಗಾಗಿ, ವಸತಿ ನಿವೇಶನ ರಹಿತರಿಗೆ ವಸತಿಗಾಗಿ, ಕುಡಿಯುವ ನೀರು, ರಸ್ತೆ, ಚರಂಡಿ, ಇನ್ನಿತರ ಜನರ ಜ್ವಲಂತ ಸಮಸ್ಯೆಗಳ ವಿರುದ್ಧ ಜನರನ್ನು ಸಂಘಟಿಸಿ ಚಳುವಳಿಗೆ ನೇತೃತ್ವ ನೀಡುತ್ತಿವೆ. ಕಳೆದ ನಾಲ್ಕಾರು ವರ್ಷಗಳ ಹಿಂದೆ ಅಷ್ಟೇನೂ ಚಳುವಳಿಯ ಇಲ್ಲದ ಒ[illegible] ಪ್ರದೇಶದಲ್ಲಿ ಸದ್ಯ ಭಾರತ ಪ್ರಜಾಸತ್ತಾತ್ಮಕ ಯುವಜನ ಸಂಘಟನೆ ([illegible]ಎಫ್‌ಐ), ಜನವಾದಿ ಮಹಿಳಾ ಸಂಘಟನೆ (ಜೆಎಂಎಸ್), ಕಟ್ಟಡ ಕಾರ್ಮಿಕರ ಸಂಘ, ಸ್ವಸಹಾಯ ಸಂಘಗಳು, ನಾಗರಿಕ ಹಿತರಕ್ಷಣಾ ವೇದಿಕೆ ಮುಂತಾದ ಸಂಘಟನೆಗಳ ನೇತೃತ್ವದಲ್ಲಿ ಎಲ್ಲಾ ವಿಭಾಗದ ಜನರನ್ನು ಸಂಘಟಿಸಲು ಸಾಧ್ಯವಾಗುತ್ತಿದೆ. ಇದರಿಂದಾಗಿ ಇಲ್ಲಿನ ಹಲವಾರು ಸಮಸ್ಯೆಗಳು ಬಗೆಹರಿದಿವೆ. ಜನರು ಸಂಘಟಿತರಾಗುತ್ತಿರುವುದು ಇಲ್ಲಿನ ಪಟ್ಟಭದ್ರರಲ್ಲಿ ನಡುಕು ಉಂಟು ಮಾಡಿದೆ. ಇದನ್ನು ಸಹಿಸದ ಪಟ್ಟಭದ್ರರು ಕಛೇರಿ ಖಾಲಿ ಮಾಡಿಸಲು ಹಲವು ಬಾರಿ ಕಛೇರಿಯ ಮಾಲಿಕರಿಗೆ ಧಮಕಿ ಹಾಕಿ ಒತ್ತಡ ಹೇರದ್ದಾರೆ.

ಬೇರೆ ಬೇರೆ ಸಂದರ್ಭಗಳಲ್ಲಿ ಜನರು ಚಳುವಳಿಗಳಿಗೆ ಭಾಗವಹಿಸದಂತೆ ತಡೆಯಲಾಗಿದೆ ಕೂಡಾ. ನಮ್ಮ ಚಳುವಳಿಯಲ್ಲಿ ಸಕ್ರಿಯರಾಗಿದ್ದ ಕೆಲ ಹೊಸ ಕಾರ್ಯಕರ್ತರನ್ನು ವಿವಿಧ ಆಮಿಷಗಳನ್ನೊಡ್ಡಿ ತಮ್ಮತ್ತ ಸೆಳೆದಿರುವ ಉದಾಹರಣೆಗಳೂ ಇವೆ. ಚಳುವಳಿ ಬೆಳೆಯುತ್ತಿರುವಂತೆ ವಸೂಲಿ ರೋಲ್‌ಕಾಲ್ ಮಾಡಿ ಬದುಕುತ್ತಿದ್ದ ಈ ಪ್ರದೇಶದ ಪುಡಿ ರೌಡಿಗಳಿಗೆ ವಸೂಲಿ ದಂಧೆ ನಿಲ್ಲಲು ಪ್ರಾರಂಭವಾಯಿತು. ಇದರಿಂದ ಕುಪಿತಗೊಂಡ ಒಂದು ಗುಂಪು ಕಳೆದ ನವೆಂಬರ್ ತಿಂಗಳ ಸಮಯದಲ್ಲಿ ಪ್ರದೇಶದ ಡಿವೈಎಫ್‌ಐ ಮುಖಂಡ ನವೀನ್‌ಕುಮಾರ್ ಮೇಲೆ ಹಲ್ಲೆ ನಡೆಸಿದ್ದರು.



ಹಲ್ಲೆಗೊಳಗಾದ [illegible] ಮುಖಂಡ ಲಕ್ಷ್ಮಣ್‌ಕುಮಾರ್



ಆ ಸಂದರ್ಭದಲ್ಲಿ ತಕ್ಷಣವೇ ಪ್ರತಿಭಟನೆ ವ್ಯಕ್ತವಾದ ಹಿನ್ನೆಲೆಯಲ್ಲಿ, ಹಲ್ಲೆ ನಡೆಸಿದ ಸುರೇಶ್ ಎಂಬಾತನನ್ನು ಪೊಲೀಸರು ಬಂಧಿಸಿದ್ದರು. ಇದರಿಂದ ಇನ್ನಷ್ಟು ಹತಾಶ ಗೊಂಡ ಈ ರೋಲ್‌ಕಾಲ್ ಗ್ಯಾಂಗ್ ಅವಕಾಶಕ್ಕಾಗಿ ಹಲವು ತಿಂಗಳುಗಳಿಂದ ಹೊಂಚು ಹಾಕುತ್ತಿತ್ತು.



ಪ್ರತಿಭಟನೆಯಲ್ಲಿ ಪಾಲ್ಗೊಂಡು ಜನ

ಪ್ರತೀ ದಿನವೂ ಕಛೇರಿಯಲ್ಲಿ ನಾಗರಿಕರು ಕುಂದು ಕೊರತೆಗಳ ಕುರಿತಾಗಿ ತಂಡೋಪತಂಡವಾಗಿ ಬರುತ್ತಿದ್ದುದರಿಂದಾಗಿ ಅವರಿಗೆ ಅಷ್ಟು ಸುಲಭವಾಗಿ ಅವಕಾಶ ಸಿಗಲಿಲ್ಲ. ಹೀಗಾಗಿ ಇಲ್ಲಿನ ಸ್ಥಳೀಯ ಪಟ್ಟಭದ್ರರು ಹಾಗೂ ರೋಲಾಕಾಲ್ ಗ್ಯಾಂಗ್‌ಗಳು ಒಂದಾಗಿ ದಾಳಿಗೆ ಮುಂದಾಗಲು ಪ್ರಯತ್ನ ನಡೆಸಿವೆ.

ಅಂದು 12 ರ ರಾತ್ರಿ 10 ಗಂಟೆ ಸಮಯದಲ್ಲಿ ಒಬ್ಬರೇ ಇರುವುದನ್ನು ಗಮನಿಸಿದ ಈ ಗೂಂಡಾಗಳು ಏಕಾಏಕಿ ದಾಳಿ ನಡೆಸಿದ್ದಾರೆ. ಇದರಲ್ಲಿ ಪಟ್ಟಭದ್ರರ ಕೈವಾಡ ಇದೆ ಎಂಬ ಸಂಶಯ ವ್ಯಕ್ತವಾಗಿದ್ದರೂ ಕೂಡಾ ಪ್ರತ್ಯಕ್ಷವಾಗಿ ಕಾಣಬರದಂತೆ ಎಚ್ಚರ ವಹಿಸಿದ್ದಾರೆ. ಏಕೆಂದರೆ ಕೆಲವೇ ತಿಂಗಳಲ್ಲಿ ಬೆಂಗಳೂರು ಮಹಾನಗರ ಪಾಲಿಕೆ ಚುನಾವಣೆ ಹತ್ತಿರವಿರುವುದರಿಂದಾಗಿ ಜನರಲ್ಲಿ ವಿಶ್ವಾಸ ಕಳೆದುಕೊಳ್ಳಬೇಕಾಗಬಹುದೆಂಬ ಭಯ ಆವರಿಸಿದೆ. ಹೀಗಾಗಿ ತಕ್ಷಣಕ್ಕೆ ಪ್ರತ್ಯಕ್ಷವಾಗಿ ಕಾಣಿಸಿಕೊಳ್ಳದಿದ್ದರೂ ಪರೋಕ್ಷವಾಗಿ ಇವರ ಬೆಂಬಲದೊಂದಿಗೆ ನಡೆಸಿದ ವ್ಯವಸ್ಥಿತ ದಾಳಿ ಇದಾಗಿದೆ.

ಎಚ್ಚರಿಕೆ ನೀಡಿದ ಪ್ರತಿಭಟನೆ

ಸಿಪಿಐ(ಎಂ) ಕಛೇರಿ ಮೇಲೆ ದಾಳಿಹಾಗೂ ಮುಖಂಡರ ಮೇಲೆ ಮಾರಣಾಂತಿಕ ಹಲ್ಲೆಯನ್ನು ಖಂಡಿಸಿ ದಾಳಿಯ ಪ್ರಮುಖ ಆರೋಪಿ ಸುರೇಶ್‌ನನ್ನು ಸೆಕ್ಷನ್ 307 ರ ಅಡಿ ಬಂಧಿಸಲಾಗಿದ್ದು, ದಾಳಿಯಲ್ಲಿ ಭಾಗಿಯಾಗಿದ್ದ ಉಳಿದ 4 ಜನ ಸಹಚರರನ್ನು ಬಂಧಿಸಬೇಕು ಹಾಗೂ ಇಂಥ ಗೂಂಡಾಗಿರಿ ಮತ್ತೊಮ್ಮೆ ನಡೆಯಲು ಬಿಡುವುದಿಲ್ಲವೆಂಬ ಎಚ್ಚರಿಕೆಯನ್ನು ನೀಡಲು ಪ್ರಜಾಸತ್ತಾತ್ಮಕ ರೀತಿಯಲ್ಲಿ ಪ್ರತಿಭಟನಾ ಸಭೆಯನ್ನು ಏರ್ಪಡಿಸಲಾಗಿತ್ತು. ಘಟನೆ ನಡೆದ ಸ್ಥಳದಲ್ಲೇ ಏರ್ಪಡಿಸಲಾಗಿದ್ದ ಸಭೆಯಲ್ಲಿ ನೂರಾರು ಜನರು, ಸಾಮಾಜಿಕ ಸಂಘಟನೆಗಳ ಕಾರ್ಯಕರ್ತರು, ಸ್ಥಳೀಯ ನಾಗರಿಕರು ಗಣನೀಯ ಸಂಖ್ಯೆಯಲ್ಲಿ ಸೇರಿದ್ದರು. ಪ್ರತಿಭಟನಾ ಸಭೆಯನ್ನು ಉದ್ದೇಶಿಸಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಪ್ರಸನ್ನಕುಮಾರ್, ಜಿಲ್ಲಾ ಮುಖಂಡರಾದ ಕೆ.ಎನ್.ಉಮೇಶ್, ಗೌರಮ್ಮ ಸಿಐಟಿಯು ಜಿಲ್ಲಾ ಅಧ್ಯಕ್ಷರಾದ ಹೆಚ್.ಎನ್.ಗೋಪಾಲಗೌಡ ಮಾತನಾಡಿದರು. ದಾಳಿಗೊಳಗಾದ ಸಿಪಿಐ(ಎಂ) ವಲಯ ಕಾರ್ಯದರ್ಶಿ ಲಕ್ಷ್ಮಣ್‌ಕುಮಾರ್ ವೇದಿಕೆಯಲ್ಲಿ ಉಪಸ್ಥಿತರಿದ್ದು ಘಟನೆಯ ವಿವರ ಹಾಗೂ ಹಿನ್ನೆಲೆಯನ್ನು ವಿವರಿಸಿದರು. ವೇದಿಕೆಯಲ್ಲಿ ಡಿವೈಎಫ್‌ಐ ಮುಖಂಡರಾದ ಲಿಂಗರಾಜು, ನಾಗರಾಜು, ದಯಾನಂದ, ಕೆ.ಎಸ್. ಆನಂದಕುಮಾರ್, ಸಿಪಿಐ(ಎಂ) ವಲಯ ಮುಖಂಡರಾದ ಶಂಕರ್ ವೇದಿಕೆಯಲ್ಲಿದ್ದರು. ಅಧ್ಯಕ್ಷತೆಯನ್ನು ಸಿಪಿಐ(ಎಂ) ಜಿಲ್ಲಾ ಮುಖಂಡರಾಗಿದ್ದ ಮೀನಾಕ್ಷಿಸುಂದರಂ ವಹಿಸಿದ್ದರು.


ಸಭೆಯ ಬಳಿಕ ಮೆರವಣಿಗೆ ಏರ್ಪಡಿಸಲಾಗಿತ್ತು. ಮೆರವಣಿಗೆಯಿಂದಾಗಿ ದಾಳಿಯಿಂದ ಭಯಭೀತ ಗೊಂಡ ಜನರಲ್ಲಿ ಧೈರ್ಯ, ಆತ್ಮವಿಶ್ವಾಸ ತುಂಬಲು ಸಾಧ್ಯವಾಯಿತು. ○

ಡಿವೈಎಫ್‌ಐ ವಾಚನಾಲಯಕ್ಕೆ ಕಿಡಿಗೇಡಿಗಳಿಂದ ಬೆಂಕಿ

ಬೆಂಗಳೂರು ನಗರದ ಡಬ್ಬಲ್ ರೋಡ್ ಸಮೀಪದ ವಿಲ್ಸನ್‌ಗಾರ್ಡನ್ ಪ್ರದೇಶಕ್ಕೆ ಹೊಂದಿಕೊಂಡಂತಿರುವ ಶಾಂತಿನಗರ ಎಂಬ ಜಾಗವಿದೆ. ಇಲ್ಲಿ ಹಲವು ವರ್ಷಗಳಿಂದ ಭಾರತ ಪ್ರಜಾಸತ್ತಾತ್ಮಕ ಯುವಜನ ಸಂಘಟನೆ (ಡಿವೈಎಫ್‌ಐ) ಉಚಿತ ವಾಚನಾಲಯವನ್ನು ನಡೆಸುತ್ತಿದೆ.

ಈ ಪ್ರದೇಶದ ಜನರು ಹೆಚ್ಚಾಗಿ ಕಾರ್ಮಿಕರು, ಬಡವರೇ ಆಗಿದ್ದಾರೆ. ಎಲ್ಲರಿಗೂ ಎಲ್ಲ ಪತ್ರಿಕೆಯನ್ನು ಕೊಳ್ಳಲು ಆಗುವುದಿಲ್ಲ. ಈ ಉಚಿತ ವಾಚನಾಲಯದಲ್ಲಿ ಬಂದು ಪತ್ರಿಕೆ ಓದುವುದು, ಸಾಮಾಜಿಕ, ರಾಜಕೀಯ ಸಮಸ್ಯೆಗಳು, ವಿಷಯಗಳ ಬಗೆಗೆ ಚರ್ಚೆ ನಡೆಸುವುದು ಇತ್ಯಾದಿ ಇಲ್ಲಿ ನಡೆಯುತ್ತಿತ್ತು. ಕಳೆದ ಹಲವು ವರ್ಷಗಳಿಂದಲೂ ಇಲ್ಲಿ ಈ ಉಚಿತ ವಾಚನಾಲಯ ನಡೆಯುತ್ತಾ ಬರುತ್ತಿದೆ. ದಿನೇ ದಿನೇ ಜನಪ್ರಿಯಗೊಳ್ಳುತ್ತಾ ಬರುತ್ತಿದೆ.

ಜನರನ್ನು ವಂಚಿಸಿ ತಮ್ಮ ಪ್ರಭಾವದಲ್ಲೇ ತಮ್ಮ ಹಿಡಿತದಲ್ಲೇ ಇರಿಸಿಕೊಳ್ಳಬೇಕೆದು ಬಯಸುವವರು ಪ್ರತಿ ಪ್ರದೇಶದಲ್ಲೂ ಇರುತ್ತಾರೆ. ಇಂತಹ ಪಟ್ಟಭದ್ರರಿಗೆ ಜನರಲ್ಲಿ ಜಗೃತಿ ಮೂಡುತ್ತದೆ ಎಂದರೆ ಭಯ. ಜುಲೈ 13ರ ರಾತ್ರಿ ಈ ವಾಚನಾಲಯಕ್ಕೆ ಕಿಡಿಗೇಡಿಗಳು ಬೆಂಕಿ ಹಚ್ಚಿದ್ದಾರೆ. ವಾಚನಾಲಯ ಸಂಪೂರ್ಣ ಸುಟ್ಟು ಕರಕಲಾಗಿದೆ. ಇಂತಹ ಪಿತೂರಿಗಳಿಗೆ ಡಿವೈಎಫ್‌ಐ ಬೆದರುವುದಿಲ್ಲ. ವಾಚನಾಲಯವನ್ನು ಮರಳಿ ನಿರ್ಮಿಸುವ ಕೆಲಸ ನಡೆದಿದೆ. ಜನರು ಡಿವೈಎಫ್‌ಐ ಬೆಂಬಲಕ್ಕಿದ್ದಾರೆ. ○



ಆಹಾರ ಪೂರೈಕೆಯಲ್ಲಿ ಅವ್ಯವಹಾರ ಡಿವೈಎಫ್‌ಐ ಅಚಲ ಹೋರಾ

ಚಳವಳಿ ಹತ್ತಿಕ್ಕಲು ಸಂಘ ಪರಿವಾರ ಕುಟಿಲ ತಂತ್ರ

ಜೂನ್ ಒಂದರಂದು ಮಂಗಳೂರಿನ ಡಿವೈಎಫ್‌ಐ ನಡೆಸಿದ ಕಾರ್ಯಾಚರಣೆಯಲ್ಲಿ ಅವಧಿ ಮೀರಿದ ಹಾಗೂ ಕಳಪೆ ಪೌಷ್ಟಿಕ ಆಹಾರ ಪತ್ತೆ ಮಾಡಲಾಗಿತ್ತು. ಇದು ಬಡ ಕುಟುಂಬಗಳ ಗರ್ಭಿಣಿ ಮಹಿಳೆಯರು ಮತ್ತು ಪುಟಾಣಿ ಮಕ್ಕಳಿಗೆ ನೀಡಲಾಗುತ್ತಿರುವ ಪೌಷ್ಟಿಕ ಆಹಾರ. ಕೇಂದ್ರದ ಈ ಯೋಜನೆ ಜಿಲ್ಲೆಯಲ್ಲಿ ಸಮರ್ಪಕವಾಗಿ ಜಾರಿಯಾಗುತ್ತಿಲ್ಲ ಎಂಬುದನ್ನು ಡಿವೈಎಫ್‌ಐ ಕಾರ್ಯಾಚರಣೆ ಸ್ಪಷ್ಟಪಡಿಸಿತ್ತು.

ಇದಾದ ಕೆಲವೇ ಗಂಟೆಗಳಲ್ಲಿ ಜಿಲ್ಲಾಡಳಿತ ಐದು ತಂಡಗಳನ್ನು ರಚಿಸಿ ತನಿಖೆಗೆ ಆದೇಶ ನೀಡಿತ್ತು. ಆ ತಂಡ ವಿವಿಧ ದಾಸ್ತಾನು ಮಳಿಗೆಗಳಿಗೆ ಭೇಟಿ ನೀಡಿ ತನಿಖೆಯ ನಾಟಕ ಆಡಿತ್ತು.

ಇದೇ ವೇಳೆ, ಜಿಲ್ಲೆಯಾದ್ಯಂತ ಡಿವೈಎಫ್‌ಐ ಹಾಗೂ ಸಿಪಿಐಎಂ ಘಟಕಗಳ ಕಾರ್ಯಕರ್ತರು ವಿವಿಧ ಅಂಗನವಾಡಿಗಳಿಗೆ ಭೇಟಿ ನೀಡಿ ಅಲ್ಲಿನ ಆಹಾರವನ್ನು ಪರಿಶೀಲಿಸಿತು. ಬಹುತೇಕ ಎಲ್ಲೆಡೆ ಅವಧಿ ಮೀರಿದ ಆಹಾರವೇ ಪೂರೈಕೆಯಾಗಿತ್ತು. ಮಾತ್ರವಲ್ಲ, ಇಡೀ ಪ್ರಕ್ರಿಯೆಯಲ್ಲಿ ಸಾಕಷ್ಟು ಅವ್ಯವಹಾರ ನಡೆದಿದೆ ಎಂಬ ಡಿವೈಎಫ್‌ಐ ವಾದಕ್ಕೆ ಮತ್ತಷ್ಟು ಪುಷ್ಟಿ ದೊರಕಿತ್ತು.

ಜಿಲ್ಲಾಡಳಿತದ ಕಣ್ಣು ಕೆಂಪು

ಆದರೆ, ಇಡೀ ಪ್ರಕರಣದಿಂದ ಜಿಲ್ಲಾಡಳಿತಕ್ಕೆ ಅವಮಾನವಾಯಿತು. ವ್ಯವಸ್ಥಿತವಾಗಿ ನಡೆಯುತ್ತಿದ್ದ ಅವ್ಯವಹಾರ ಬಯಲಾದದು ಒಂದೆಡೆಯಾದರೆ, ಅಧಿಕಾರಿ ವರ್ಗದ ಬೇಜವಾಬ್ದಾರಿತನ ಬಗ್ಗೆ ಸಾರ್ವಜನಿಕರಿಗೆ ಸ್ಪಷ್ಟ ಅರಿವಾಯಿತು. ಸಹಜವಾಗಿಯೇ ಅಧಿಕಾರಿ ವರ್ಗದ ಕಣ್ಣು ಕೆಂಪಾಯಿತು. ಈ ಜನಪರ ಹೋರಾಟವನ್ನು ಹತ್ತಿಕ್ಕಬೇಕೆಂಬ ಕಾರಣಕ್ಕಾಗಿ ಅಧಿಕಾರವನ್ನು ದುರುಪಯೋಗ ಮಾಡಲಾಯಿತು.

ಅಂಗನವಾಡಿಗಳಿಗೆ ಭೇಟಿ ನೀಡಿದ್ದು ಅತಿಕ್ರಮ ಪ್ರವೇಶ ಎಂದು ಆರೋಪಿಸಿ ಡಿವೈಎಫ್‌ಐ ಮತ್ತು ಸಿಪಿಐಎಂ ಕಾರ್ಯಕರ್ತರ ಮೇಲೆ ಕೇಸು ಹಾಕಲಾಯಿತು. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪ ನಿರ್ದೇಶಕಿ ಶಕುಂತಳಾ ಅವರನ್ನು ಸರ್ಕಾರ ವ್ಯವಸ್ಥಿತವಾಗಿ ಬಳಸಿತು.



ಆರಂಭದಲ್ಲಿ ಈ ಕಾರ್ಯಾಚರಣೆಯನ್ನು ಪ್ರಶಂಸಿಸಿದ್ದ ಜಿಲ್ಲಾಧಿಕಾರಿ ಪೊನ್ನುರಾಜ್ ಮತ್ತು ಹೆಚ್ಚುವರಿ ಅಧಿಕಾರಿ ಪ್ರಭಾಕರ ಶರ್ಮ ರಾಗವೇ ಬದಲಾಯಿತು. ತನಿಖಾ ತಂಡ ರಚಿಸಿದ ನಂತರ ನಿಮ್ಮ ಕರ್ತವ್ಯ ಮುಗಿಯಿತು. ಆ ಮೇಲೆ ಅಂಗನವಾಡಿಗೆ ಭೇಟಿ ನೀಡಿದ್ದೇ ತಪ್ಪು ಎಂಬ ಅರ್ಥದಲ್ಲಿ ಮಾತನಾಡಿದರು. ಡಿವೈಎಫ್‌ಐ ಮೇಲೆ ಕೇಸು ಹಾಕಿದ ಕ್ರಮವನ್ನು ಬಲವಾಗಿ ಸಮರ್ಥಿಸಿಕೊಂಡರು. ಯಾವುದೇ ಕಾರಣಕ್ಕೂ ಕೇಸು ವಾಪಸ್ ಪಡೆಯುವುದಿಲ್ಲ ಎಂಬುದನ್ನೂ ಸ್ಪಷ್ಟಪಡಿಸಿದರು.

ಅಚಲ ಹೋರಾಟ

ಆದರೆ, ಜಿಲ್ಲಾಧಿಕಾರಿ ಮತ್ತು ಇತರ ಅಧಿಕಾರಿಗಳ ಈ ಬೆದರಿಕೆಗಳಿಗೆ ಡಿವೈಎಫ್‌ಐ ಕಾರ್ಯಕರ್ತರು ಮಣಿಯುವವರಲ್ಲ. ಬೃಹತ್ ರ‍್ಯಾಲಿ ಮತ್ತು ಜಿಲ್ಲಾ ಪಂಚಾಯತ್ ಮುತ್ತಿಗೆ ಮೂಲಕ ತಮ್ಮ ಹೋರಾಟ ಅಚಲ ಎಂಬುದನ್ನು ಸ್ಪಷ್ಟಪಡಿಸಿದರು. ಬೆಳ್ತಂಗಡಿ, ಪುತ್ತೂರು, ಮೂಡಬಿದಿರೆ ಮುಂತಾದ ಕಡೆಗಳ ಗ್ರಾಮೀಣ ಪ್ರದೇಶದ ಜನತೆ ಸಾವಿರಾರು ಸಂಖ್ಯೆಯಲ್ಲಿ ಸೇರಿ ಈ ಹೋರಾಟಕ್ಕೆ ಬೆಂಬಲ ನೀಡಿದರು. ಇದು ಜಿಲ್ಲಾಡಳಿತಕ್ಕೆ ಮತ್ತಷ್ಟು ಚಿಂತೆಗೀಡು ಮಾಡಿತು.

ಸಂಘ ಪರಿವಾರದ ಕುತಂತ್ರ

ಇದೇ ವೇಳೆ, ಕರಾವಳಿ ಪ್ರದೇಶ ಅದರಲ್ಲೂ ಸಂಘ ಪರಿವಾರ ಪ್ರಬಲವಾಗಿರುವ ಪುತ್ತೂರು, ಸುಳ್ಯ ಮತ್ತು ಬೆಳ್ತಂಗಡಿಗಳಲ್ಲಿ ಎಡ ಸಂಘಟನೆಗಳು ಬಲಗೊಳ್ಳುತ್ತಿರುವುದು ಬಿಜೆಪಿ ಮತ್ತದರ ಪರಿವಾರಕ್ಕೆ ಚಿಂತೆ ಮೂಡಿಸಿದ್ದು ಸ್ಪಷ್ಟ. ಎಲ್ಲ ಅಧಿಕಾರವನ್ನು ಬಳಸಿ ಚಳವಳಿಯನ್ನು ಮುರಿಯಲಿ ಪ್ರಯತ್ನ ನಡೆಸಿತು. ಸರ್ಕಾರ ಮತ್ತು ಅದರ ಸಚಿವರ ಕುಮ್ಮಕ್ಕಿನಿಂದ ಸಿಪಿಐಎಂನ ಪ್ರಮುಖ ನಾಯಕ ಬಿ.ಎಂ. ಭಟ್ ವಿರುದ್ಧ ಮಂಗಳೂರಿನ ಉರ್ವ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಯಿತು. ದೂರು ನೀಡಿದರು ಬೇರಾರೂ ಅಲ್ಲ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪ ನಿರ್ದೇಶಕಿ ಶಕುಂತಳಾ. ಅವಾಚ್ಯ ಶಬ್ದಗಳಿಂದ ನಿಂದಿಸಿದರು, ಕರ್ತವ್ಯಕ್ಕೆ ಅಡ್ಡಿಪಡಿಸಿದರು ಎಂಬ ದೂರನ್ನೂ ಪೊಲೀಸರೂ ದಾಖಲಿಸಿಕೊಂಡರು.

ಹೋರಾಟಗಾರರ ಮೇಲೆ ಕೇಸು

ಕಳಪೆ ಆಹಾರ ದಾಸ್ತಾನು ಪತ್ತೆಯಾ ಸಂದರ್ಭದಲ್ಲಿ ತಮ್ಮ ಹೊಣೆ ತಪ್ಪಿಸಲು ಅಧಿಕಾರಿಗ ಎಲ್ಲ ಜವಾಬ್ದಾರಿಯನ್ನು ಅಂಗನವಾ ಕಾರ್ಯಕರ್ತೆಯರ ಮೇಲೆ ಹಾಕಿದರು. ಆದ ಅವರನ್ನು ಬಲಿಪಶು ಮಾಡಬೇಡಿ ಎಂದು ಜೂನ್ ತಿಂಗಳ ಆರಂಭದಲ್ಲಿ ಬಿ.ಎಂ. ಭಟ್ ಅವರ ಶಕುಂತಳಾ ಅವರಿಗೆ ಮನವಿ ಮಾಡಿದ್ದರು. ಇದನ್ನ ಆಧಾರವಾಗಿಟ್ಟುಕೊಂಡು ಜುಲೈ ಎರಡನೇ ವಾರದ ಅವರ ಮೇಲೆ ಕೀಳು ಮಟ್ಟದ ಆರೋಪ ಮಾ ದೂರು ನೀಡಲಾಯಿತು. ಇದನ್ನ ಕಾನೂನು ಪ್ರಕಾ ಎದುರಿಸುವುದಾಗಿ ಸಂಘಟ ಹೇಳಿದೆ.

ಹೆಚ್ಚಿದ ಜನಬೆಂಬಲ

ಬಡ ಕುಟುಂಬದ ಗರ್ಭಿ ಮಹಿಳೆಯರು ಮತ್ತು ಮಕ್ಕಳ ಹೊ ಸೇರಬೇಕಾದ ಅಮೂಲ ಆಹಾರದಲ್ಲೂ ಅವ್ಯವಹಾ ನಡೆಯುತ್ತದೆ ಎಂಬ ಊಹ ಯಾರಿಗೂ ಇರಲಿಲ್ಲ. ಏನೆ ಆಗಲಿ, ಈ ಹೋರಾ ಅಂತಾರಾಷ್ಟ್ರೀಯ ಮಟ್ಟದಲ್ಲೂ ಸಾಕಷ ಚರ್ಚೆಗೀಡಾದವು. ಡಿವೈಎಫ್‌ಐ ಕಾರ್ಯಕರ್ತ ಹೋರಾಟಕ್ಕೆ ಜಿಲ್ಲೆಯಲ್ಲಿ ಮಾತ್ರವಲ ಹೊರಜಿಲ್ಲೆಯಲ್ಲೂ ಸುದ್ದಿಯಾಯಿತು. ಬ್ಲಾಗ್‌ಗಳ ಈ ಸುದ್ದಿ ಹರಿದಾಡಿತು. ವೆಬ್‌ಸೈಟ್‌ನಲ್ಲಿ ಬಂದ ಸುದ್ದಿಗೆ ಕೊಲ್ಲಿ ರಾಷ್ಟ್ರ, ಅಮೆರಿಕ ಸೇರಿದಂ ವಿದೇಶಗಳಲ್ಲಿ ನೆಲೆಸಿರುವ ಕನ್ನಡಿ ಪ್ರತಿಕ್ರಿಯಿಸಿದರು. ಹೋರಾಟವನ್ನು ಬೆಂಬಲಿಸಿದರು ಇಂತಹ ಜನಪರ ಹೋರಾಟ ಮುಂದುವರಿಸುವಂತೆ ಸಲಹೆ ನೀಡಿದರು.

ಕರಾವಳಿ ಮತ್ತು ಮಲೆನಾಡು ಜಿಲ್ಲೆಗಳಲ್ಲಿ ಭಾರಿ ಮಳೆ ವ್ಯಾಪಕ ಹಾನಿ

ಈ ತಿಂಗಳ ಮೊದಲ ವಾರದಿಂದ ಸುರಿದ ಭಾರೀ ಮಳೆ ಹಾಗೂ ಅದರಿಂದ ಉಂಟಾದ ನೆರೆಗೆ ಇದುವರೆಗೆ ಉಡುಪಿ ಜಿಲ್ಲೆಯಲ್ಲಿ ಒಟ್ಟು ಅಂದಾಜು 29 ಕೋಟಿ ರೂಪಾಯಿಗಳ ಸಾರ್ವಜನಿಕ ಸೊತ್ತು, ಆಸ್ತಿ ಪಾಸ್ತಿಗಳಿಗೆ ಹಾನಿಯಾಗಿದೆ ಎಂದು ಜಿಲ್ಲಾಡಳಿತ ಹೇಳಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇದಕ್ಕಿಂತಲೂ ಹೆಚ್ಚಿಗೆ ಹಾನಿಯಾಗಿದೆ. ಕರಾವಳಿ ಜಿಲ್ಲೆಗಳಲ್ಲಿ ಜೂನ್ ತಿಂಗಳಲ್ಲಿ ನಿರೀಕ್ಷಿತ ಮಟ್ಟದ ಮಳೆ ಸುರಿಯದೇ ತೊಂದರೆಯಾದರೂ, ಜುಲೈ ಮೊದಲ ವಾರದಿಂದಲೇ ಬಿರುಸಾಗಿ ಸುರಿದ ಮಳೆಯಿಂದ ಅಪಾರ ಪ್ರಮಾಣದ ಹಾನಿ ಸಂಭವಿಸಿದೆ.

ಉಡುಪಿ ಜಿಲ್ಲೆಯಲ್ಲಿ ಎಂಟು ಮಂದಿ ಸಾವನ್ನಪ್ಪಿದ್ದಾರೆ. ಇವುಗಳಲ್ಲಿ ನಾಲ್ಕು ಜುಲೈ ತಿಂಗಳಲ್ಲೇ ಸಂಭವಿಸಿದೆ. ಇಬ್ಬರು ನೀರಿನಲ್ಲಿ ಮುಳಿಗಿ ಹಾಗೂ ಇನ್ನಿಬ್ಬರು ಸಿಡಿಲು ಬಡಿದು ಮೃತಪಟ್ಟಿದ್ದಾರೆ. ಉಳಿದ ನಾಲ್ಕು ಮಂದಿ ಕಳೆದ ತಿಂಗಳು ಮೃತಪಟ್ಟಿದ್ದಾರೆ.

ಈ ಬಾರಿ ಕಡಲ್ಕೊರೆತದಿಂದ ಕರಾವಳಿಯ ಹೆಚ್ಚಿನ ಪ್ರದೇಶಗಳಲ್ಲಿ ಹಾನಿಯಾಗಿದೆ. ಬಹಳ ಹಿಂದಿನಿಂದ ಹೇಳುತ್ತಾ ಇದ್ದರೂ ಶಾಶ್ವತ ತಡೆಗೋಡೆ ನಿರ್ಮಾಣವಾಗಲಿಲ್ಲ.

ಮಳೆಯಿಂದ ಈಗಾಗಲೇ ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿ, ಜಿ.ಪಂ. ರಸ್ತೆ, ಗ್ರಾಮೀಣ ರಸ್ತೆಗಳೆಲ್ಲಾ ಹಾಳಾಗಿದ್ದು, ಅವುಗಳ ದುರಸ್ತಿ ತುರ್ತಾಗಿ ಆಗಬೇಕಾಗಿದೆ. ವಾಹನಗಳಿಗೆ ಚಲಿಸಲು ಸಾಧ್ಯವಾಗದೇ ಜನಸಾಮಾನ್ಯರಿಗೆ ಇದರಿಂದಾಗಿ ತೊಂದರೆಯಾಗಲಿದೆ.

ನಗರಸಭೆ, ಪುರಸಭೆ ಮತ್ತು ಪಂಚಾಯತ್ ವ್ಯಾಪ್ತಿಯಲ್ಲಿ ತೋಡು ಮತ್ತು ಚರಂಡಿಗಳನ್ನು ವ್ಯವಸ್ಥಿತವಾಗಿ ಮಾಡದೇ ನೀರು ಹರಿದು ಹೋಗಲು ಅಡ್ಡಿಯಾಗಿ ಬಹಳ ಮಂದಿಗೆ ತೊಂದರೆಯಾಗಿದೆ. ಇದರಿಂದಾಗಿ ರಸ್ತೆಯ ಮೇಲೆ ನೀರು ಹರಿದು ಹೋಗುವುದರಿಂದ ರಸ್ತೆಗಳಲ್ಲಿ ಹೊಂಡಗಳಾಗಿವೆ. ಕಳಪೆ ಕಾಮಗಾರಿಯಿಂದಾಗಿ ಕೆಲವು ಪ್ರದೇಶಗಳಲ್ಲಿ ನೀರು ನಿಂತು ಹಾನಿ ಸಂಭವಿಸಿದೆ. ಮಳೆಗಾಲಾರಂಭ ಆಗುವಾಗ ಕೆಲವು ಪ್ರದೇಶಗಳಲ್ಲಿ ನೀರು ನಿಂತು ಹಾನಿ ಸಂಭವಿಸಿದೆ. ಮಳೆಗಾಲ ಆರಂಭ ಆಗುವಾಗ ಕೆಲವು ಪ್ರದೇಶಗಳಲ್ಲಿ ಕಾಮಗಾರಿ ಆರಂಭಿಸಿ, ಪೂರ್ಣಗೊಳಿಸದೇ ಇರುವುದರಿಂದ ಕೂಡ ಹಾನಿಯಾಗಿದೆ.

ಮಳೆ ಆರಂಭವಾಗುವ ಸಮಯ ಒಂದೇ ಇರುವುದಿಲ್ಲ. ನಾವು ನಿರೀಕ್ಷೆ ಮಾಡಿದಂತೆ ಬರುವುದಿಲ್ಲ. ಒಂದು ವರ್ಷ ಬೇಗ ಆರಂಭವಾಗುತ್ತದೆ. ಇನ್ನೊಂದು ವರ್ಷ ತಡವಾಗುತ್ತದೆ. ಈ ಬಾರಿ ಮಳೆ ವಿಳಂಬವಾದುದರಿಂದ ಕರಾವಳಿ ಜಿಲ್ಲೆಗಳಲ್ಲಿ ಹೆಚ್ಚಿನ ಪ್ರದೇಶಗಳಲ್ಲಿ ಕುಡಿಯುವ ನೀರು ಸಿಗದ ಪರಿಸ್ಥಿತಿ, ಹಾಗೆಯೇ ರಾಜ್ಯದ ಇತರ ಪ್ರದೇಶಗಳಲ್ಲಿ ಕೂಡಾ ಸಿಗದ ಪರಿಸ್ಥಿತಿ, ಹೊಲಗಳಲ್ಲಿ ಉಳುಮೆ ಮತ್ತು ನೇಜಿ (ಬಿತ್ತನೆ) ಇತ್ಯಾದಿ ಕೂಡಾ ವಿಳಂಬವಾಯಿತು.

ಸಂಘ ಪರಿವಾರದವರು ದೇವಸ್ಥಾನಗಳಲ್ಲಿ ಪೂಜ ಸಲ್ಲಿಸುವ ಮೊದಲೇ ಮಳೆ ಆರಂಭವಾಗಿ ಮೊದಲು ಕರಾವಳಿ ನಂತರ ಮಲೆನಾಡು ಪ್ರದೇಶ ಹಾಗೂ ಅನಂತರ ರಾಜ್ಯದ ಬೇರೆ ಬೇರೆ ಪ್ರದೇಶಗಳಲ್ಲಿ ಮಳೆ ಬರುತ್ತಿದೆ. ಮಳೆ ನೀರಿನ ಶೇಖರಣೆ ಮಾಡುವ ಬಹಳ ಮಹತ್ವದ ಯೋಜನೆ ಕೈಗೊಂಡಲ್ಲಿ ಹಾಗೂ ನದಿ ತೋಡು ಮತ್ತು ಕೆರೆಗಳನ್ನು ಆಳ ಮಾಡಿದ್ದಲ್ಲಿ ಸಂಭವಿಸುವ ಹಾನಿಯನ್ನು ತಡೆಯಬಹುದು. ಶಾಶ್ವತ ತಡೆಗೋಡೆ ಮಾಡಿದ್ದಲ್ಲಿ ಕರಾವಳಿಯಲ್ಲಿ ಕಡಲ್ಕೊರೆತದಿಂದ ಆಗುವ ಹಾನಿಯನ್ನು ಕೂಡಾ ತಡೆಯಬಹುದು. ಹೀಗೆ ಮಾಡಲು ಸರ್ಕಾ ಇಚ್ಛಾಶಕ್ತಿ ಬೇಕು. ಅದು ಇದೆಯೆ?

■ ಶಂಕರ್

ಜಮ್ಮು ಕಾಶ್ಮೀರದಲ್ಲಿ ಪರಿಸ್ಥಿತಿ ಉದ್ವಿಗ್ನವಾಗಿದೆ. ಪ್ರತಿಭಟನೆ, ಹಿಂಸಾಚಾರ ನಡೆದೇ ಇದೆ. ಸರಣಿಯಲ್ಲಿ ನಡೆದ ಘಟನೆಗಳು ಸ್ಫೋಟಕ ಸನ್ನಿವೇಶ ಹುಟ್ಟುಹಾಕಿವೆ. ಶಾಂತಿ, ಸಹಜ ಸ್ಥಿತಿ ನೆಲೆಗೊಳ್ಳಲು ಈ ಕೂಡಲೇ ಕೈಗೊಳ್ಳಬೇಕಾದ ಕ್ರಮಗಳೇನು?

ಉದ್ವಿಗ್ನ ಜಮ್ಮು-ಕಾಶ್ಮೀರ

ಶಾಂತಿ ಸ್ಥಾಪನೆಗೆ ಮುತುವರ್ಜಿ ಅಗತ್ಯ

ಎಸ್.ವೈ.ಗುರುಶಾಂತ್

ಕಾಶ್ಮೀರ ಕಣಿವೆಯಲ್ಲಿ ಮತ್ತೆ ಹಿಂಸಾಚಾರ ಮರುಕಳಿಸಿದೆ. ಕಳೆದ ಕೆಲವು ವಾರಗಳಲ್ಲಿ ಶೋಪಿಯಾನ್ ಮತ್ತು ಬಾರಾಮುಲ್ಲಾಗಳಲ್ಲಿ ಹೊತ್ತಿಕೊಂಡಿದ್ದ ಬೆಂಕಿ ಆರುವ ಮುನ್ನ, ಆದ ಗಾಯಗಳು ಮಾಯುವ ಮುನ್ನವೇ ಈಗ ಅಪಹರಣಗೊಂಡಿದ್ದ 20 ವರ್ಷದ ಬಿ.ಕಾಂ ವಿದ್ಯಾರ್ಥಿಯ ಕೊಲೆಯಿಂದಾಗಿ ಬುಧವಾರ, ಗುರುವಾರಗಳಲ್ಲಿ ಹಿಂಸಾಚಾರ, ಪ್ರತಿಭಟನೆ ಮರುಸ್ಫೋಟಿಸಿದವು.

ಭದ್ರತಾ ಪಡೆಗಳ ಅತಿರೇಕ?

ಇಸ್ಲಾಮಿಯ ಕಾಲೇಜಿನ ವಿದ್ಯಾರ್ಥಿ ಅಸ್ರಾರ್ ಮುಸ್ತಕ್ ಕಳೆದ ಶುಕ್ರವಾರ ಕಾಣೆಯಾಗಿದ್ದ. ಅವನ ದೇಹ ಮಂಗಳವಾರ ಸಂಜೆ ರೈನ್‌ವಾರಿ ಸ್ಮಶಾನದಲ್ಲಿ ಪತ್ತೆಯಾಯಿತು. ಆತನ ಕೈಗಳನ್ನು ಹಿಂದಕ್ಕೆ ಕಟ್ಟಲಾಗಿದ್ದು, ಮುಖದ ಮೇಲೆ ಹಲವಾರು ಗಾಯಗಳಾಗಿವೆ. ಅಲ್ಲೇ ಜೀಪ್ ಬಂದು ಹೋದ ದಾರಿಯ ಗುರುತುಗಳೂ ಇವೆ. ಹೀಗಾಗಿ ಇದು ಸಹಜ ಸಾವಲ್ಲ. ಅದು ಕೊಲೆ, ಅದನ್ನು ಭದ್ರತಾ ಪಡೆಗಳೇ ಮಾಡಿವೆ ಎಂಬುದು ಪ್ರತಿಭಟನಾಕಾರರ ದೂರು. ಕೇಂದ್ರ, ರಾಜ್ಯ ಸರ್ಕಾರಗಳ ಮೇಲೆ, ಭದ್ರತಾ ಪಡೆಗಳ ಮೇಲೆ ಆಕ್ರೋಶ.

ವಾತಾವರಣಕ್ಕೆ ಹಾನಿ

ಕಳೆದಾರು ತಿಂಗಳ ಹಿಂದೆ ಜಮ್ಮು ಕಾಶ್ಮೀರ ಅಸೆಂಬ್ಲಿ ಚುನಾವಣೆ, ಇತ್ತೀಚಿನ ಸಂಸತ್ ಚುನಾವಣೆಗಳಲ್ಲಿ ರಾಜ್ಯದ ಜನತೆ ಪ್ರಜಾಸತ್ತಾತ್ಮಕ ಪ್ರಕ್ರಿಯೆಯಲ್ಲಿ ಉತ್ಸಾಹದಿಂದ ಪಾಲ್ಗೊಂಡಿದ್ದರು. ಶಾಂತಿ, ಸಹಜತೆ ಮರುಳುವ ಉತ್ತಮ ಸನ್ನಿವೇಶ ಸೃಷ್ಠಿಯಾಗಿತ್ತು. ಬಳಿಕ ಕಣಿವೆಗೆ ಪ್ರವಾಸಿಗರ ಭೇಟಿಯೂ ಗಣನೀಯವಾಗಿ ಹೆಚ್ಚಿತ್ತು. ಆದರೆ ಇತ್ತೀಚಿನ ಘಟನೆಗಳು ಈ ವಾತಾವರಣವನ್ನೇ ಹಾಳುಮಾಡುವ ದಿಕ್ಕಿನಲ್ಲಿವೆ.

ಮುಖ್ಯವಾಗಿ ಮೇ 29 ರಂದು ಕಾಶ್ಮೀರದ ಶೋಪಿಯನ್‌ನಲ್ಲಿ ಇಬ್ಬರು ಯುವತಿಯರ ಮೇಲೆ ಅತ್ಯಾಚಾರ ಎಸಗಿ ಕೊಂದು ಹಾಕಿದ ಬರ್ಬರ ಕೃತ್ಯ ನಡೆದಿತ್ತು. ಇದನ್ನು ಸ್ಥಳೀಯ ಆಡಳಿತ ಮುಚ್ಚಿಹಾಕಲು ನಡೆಸಿದ ಪ್ರಯತ್ನಗಳು ಮತ್ತು ತೋರಿದ ನಿರ್ಲಕ್ಷ್ಯತನವು ಪ್ರತಿಭಟನೆಗೆ ಹಾದಿ ಮಾಡಿತು. ಬಳಿಕ ನಡೆದ ವೈದ್ಯಕೀಯ ಪರೀಕ್ಷೆಯು ಅತ್ಯಾಚಾರವನ್ನು ದೃಢೀಕರಿಸಿತು. ದುಷ್ಟರ ತಂಡವೇ ಇದನ್ನು ಎಸಗಿರುವ ಅಂಶ ತಳ್ಳಿಹಾಕುವಂತಿರಲಿಲ್ಲ.



ಇದರ ವಿರುದ್ಧ ಪ್ರತಿಭಟನೆ ನಡೆದಾಗ ಸಂಯಮ, ಕಾಳಜಿಪೂರ್ವಕವಾಗಿ ಆಡಳಿತ ವರ್ತಿಸಬೇಕಿತ್ತು. ಆದರೆ ಬದಲಾಗಿ ಆಡಳಿತದ ಕೆಲ ವಿಭಾಗಗಳು ಭದ್ರತಾ ಪಡೆಗಳ ಬಲವನ್ನು ಅತಿಯಾಗಿ ಬಳಸಿದರು. ನಾಗರೀಕರ ಮೇಲೆ ಹಿಂಸಾಚಾರ, ಹಾನಿಯು ಸಂಭವಿಸಿತು. ತಪ್ಪಿತಸ್ಥರ ಮೇಲೆ ಕಠಿಣ ಕ್ರಮ ಜರುಗಿಸಬೇಕಿತ್ತು. ಆದರೆ ಹಾಗಾಗಲಿಲ್ಲ. ಪ್ರತಿಭಟನೆ ಮುಂದುವರೆದವು. ಹಾಗೆಯೇ ಜುಲೈ 1 ರಂದು ಬಾರಾಮುಲ್ಲಾದಲ್ಲಿ ನಡೆದ ಗೋಲಿಬಾರ್‌ಗೆ ಇಬ್ಬರು ಯುವಕರು ಹತ್ಯೆಯಾಗಿದ್ದು, ಹಿಂಸಾಚಾರ-ಪ್ರತಿಭಟನೆ ಇನ್ನಷ್ಟು ಹೆಚ್ಚಲು ಕಾರಣವಾಯಿತು. ಲಾರ್ಕಿಪೊರ, ದೋರುನಲ್ಲಿ 15 ವರ್ಷದ ಬಾಲಕನ ಅಪಹರಣವನ್ನು ಜನ ಪ್ರತಿಭಟಿಸಿದ್ದರು. ಇಲ್ಲೂ ಭದ್ರತಾಪಡೆಗಳ ಮೇಲೆಯೇ ಜನರ ಆಕ್ರೋಶವಿತ್ತು. ಹೀಗಾಗಿ ನಿರಂತರವಾಗಿ ನಡೆಯುತ್ತಿರುವ ಘಟನೆಗಳು ಶಾಂತಿಯ ಸಹಜ ಪರಿಸ್ಥಿತಿಗೆ ಮಾರಕವಾಗುತ್ತಲೇ ನಡೆದಿವೆ.

ಸರ್ಕಾರಗಳ ವಿಫಲತೆ

ಶೋಪಿಯನ್ ಘಟನೆ ಬಗ್ಗೆ ವಿಚಾರಣಾ ಆಯೋಗವನ್ನೇನೋ ರಾಜ್ಯ ಸರ್ಕಾರ ರಚಿಸಿತು. ವರದಿ ಆಧರಿಸಿ ಕೂಡಲೇ ತಪ್ಪಿತಸ್ಥರ ಮೇಲೆ ಕಠಿಣ ಕ್ರಮ ಜರುಗಿಸಬೇಕಿತ್ತು. ಆದರೆ ಹಾಗಾಗಲಿಲ್ಲ. ಇಂತಹ ಒಟ್ಟು ಸಂಗಾತಿಗಳು ಜಮ್ಮು ಕಾಶ್ಮೀರದ ಜನತೆಯಲ್ಲಿ ವಿಶ್ವಾಸವನ್ನು ಸೃಷ್ಟಿಸುವಲ್ಲಿ ವಿಫಲವಾಗಿದೆ. ಸತತವಾಗಿ ನಡೆಯುವ ಧಾಳಿಗಳು, ಭದ್ರತಾಪಡೆಗಳ ಕೃತ್ಯಗಳು ತಮ್ಮ ಘನತೆ ಕುಗ್ಗಿಸುವಂತವು ಎಂದು ಜನತೆ ಭಾವಿಸುವಂತಾಗಿದೆ. ಈ ಸನ್ನಿವೇಶವನ್ನೇ ಕೆಲವು ರಾಜಕೀಯ ಶಕ್ತಿಗಳು ದುರ್ಬಳಸಲು ನೋಡುತ್ತಿವೆ. ಭಯೋತ್ಪಾದಕ, ಪ್ರತ್ಯೇಕವಾದಿಗಳು ಅದನ್ನೇ ಮಾಡುತ್ತಿವೆ.

ಭದ್ರತಾ ಕಾಯ್ದೆ, ಪುನರಾವಲೋಕನದ ಅಗತ್ಯತೆ

ಈ ಪ್ರಸಕ್ತ ಸನ್ನಿವೇಶದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಭದ್ರತಾ ಪಡೆಗಳ ಸಂಖ್ಯೆಯನ್ನು ವಿಳಂಬಿಸದೆ ತಗ್ಗಿಸುವುದು ಅಗತ್ಯವಿದೆ. ನಾಗರೀಕರ ಆಸ್ತಿಯಲ್ಲಿ ಭದ್ರತಾಪಡೆಗಳು ತಳವೂರಿರುವುದನ್ನು ಖಾಲಿ ಮಾಡಿಸಬೇಕಿದೆ.

ಭದ್ರತಾಪಡೆಗಳ ಪ್ರಮಾಣ ತಗ್ಗಿಸುವ ವಿಷಯದಲ್ಲಿ ಪ್ರಧಾನಿಗಳು ಎಂಟು ಸದಸ್ಯರ ಸಮಿತಿಯನ್ನು ರಚಿಸಿದ್ದರು. ಆದರೆ ಈ ಸಮಿತಿ ಏನು ಮಾಡಿತು, ಮಾಡುತ್ತಿದೆ ಎಂಬುದರ ಶಬ್ದವೇ ಇಲ್ಲ. ಹಾಗೆಯೇ 'ಸಶಸ್ತ್ರ ಪಡೆಗಳ ವಿಶೇಷಾಧಿಕಾರ ಕಾಯ್ದೆ (1958)' ಯನ್ನು ಪುನರ್ ಪರಿಶೀಲಿಸುವುದು ಅಗತ್ಯವಿದೆ.. ಜಸ್ಟೀಸ್ ಜೀವನ್ ರೆಡ್ಡಿಯವರ ಆಯೋಗವು 2005 ರಲ್ಲಿ ಪುನರ್ ಪರಿಶೀಲನೆಗೆ ಶಿಫಾರಸು ಮಾಡಿದೆ. ಪ್ರಧಾನಿಯವರ ಕಾರ್ಯನಿರತ ತಂಡದ ಮುಖ್ಯಸ್ಥನಾಗಿದ್ದ ಇಂದಿನ ಉಪರಾಷ್ಟ್ರಪತಿ ಹಮೀದ್ ಅನ್ಸಾರಿಯವರೂ ಇದೇ ಹೇಳಿದ್ದಾರೆ. ವೀರಪ್ಪ ಮೊಯ್ಲಿ ನೇತೃತ್ವದ ಆಡಳಿತ ಸುಧಾರಣಾ ಆಯೋಗವೂ ಇದೇ ಶಿಫಾರಸು ಮಾಡಿದೆ. ಆದರೆ ಕೇಂದ್ರ ಸರ್ಕಾರ ಏನೊಂದು ಕ್ರಮವನ್ನೇ ವಹಿಸಿಲ್ಲ. ಒಟ್ಟಾರೆ ಕೇಂದ್ರ, ರಾಜ್ಯ ಸರ್ಕಾರಗಳು ಶಾಂತಿ, ಸಹಜತೆ ಮರಳುವಲ್ಲಿ ಜನರಿಗೆ ನ್ಯಾಯ ದೊರಕಿಸಲು ಪ್ರಾಮಾಣಿಕ ಕ್ರಮವಹಿಸದೇ ಹೋದಲ್ಲಿ ಸ್ಥಿತಿ ಇನ್ನಷ್ಟು ಹಾಳಾಗಲಿದೆ. ಹೀಗಾಗುವುದು ಅಪಾಯಕಾರಿಯಾಗಿದೆ.



ಅತ್ಯಾಚಾರಕ್ಕೀಡಾಗಿ ಕೊಲೆಯಾದ ಮಹಿಳೆಯರ ಶವಗಳು

ಜಮ್ಮು ಕಾಶ್ಮೀರದ ಇಂದಿನ ಉದ್ವಿಗ್ನ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಶಾಂತಿ, ಸಹಜ ಸ್ಥಿತಿ ತರಲು ಮುಖ್ಯವಾಗಿ ಜಮ್ಮು ಕಾಶ್ಮೀರದ ಜನತೆಯ ಸುರಕ್ಷತೆ ಮತ್ತು ಗೌರವ ಕಾಯುವ ದಿಶೆಯಲ್ಲಿ ಕೇಂದ್ರ, ರಾಜ್ಯ ಸರ್ಕಾರಕ್ಕೆ ಸಿಪಿಐ(ಎಂ) ರಾಜ್ಯಸಮಿತಿಯು ಆಗ್ರಹಿಸಿದ ಅಂಶಗಳು -

- ರಾಜ್ಯದಲ್ಲಿನ ಪ್ರಮುಖ ಸ್ಥಳೀಯ ಜನರೊಂದಿಗೆ ಮಾತುಕತೆ ಪ್ರಕ್ರಿಯೆಗೆ ಮುತುವರ್ಜಿ ಆರಂಭಿಸಬೇಕು. ಅಂತಹ ದೃಢನಂಬಿಕೆಯ ವಾತಾವರಣ ಸೃಷ್ಟಿಯಾಗಬೇಕು.
- ಆಂತರಿಕ ಭದ್ರತೆಗೆಂದು ಬೀಡುಬಿಟ್ಟಿರುವ ಭದ್ರತಾಪಡೆಗಳ ಪ್ರಮಾಣ ಮತ್ತು ಬಲವನ್ನು ಇನ್ನೂ ವಿಳಂಬಿಸದೇ ತಗ್ಗಿಸಬೇಕು.
- ಸಶಸ್ತ್ರ ಪಡೆಗಳ ವಿಶೇಷಾಧಿಕಾರ ಕಾಯ್ದೆ 1958 ನ್ನು ಈ ಕೂಡಲೇ ಹಿಂತೆಗೆದುಕೊಳ್ಳಬೇಕು.
- ಕಾನೂನು ಜಾರಿ ಮಾಡುವ ಅಂಗಗಳು ನಡೆಸುವ ಮಾನವ ಹಕ್ಕುಗಳ ಉಲ್ಲಂಘನೆ ಪ್ರಕರಣಗಳನ್ನು ತನಿಖೆ ನಡೆಸಲು ಹಾಗೂ ಕ್ರಮ ಕೈಗೊಳ್ಳಲು ಸ್ವತಂತ್ರ ಅಂಗ (ಏಜೆನ್ಸಿ) ವನ್ನು ರಚಿಸಬೇಕು.
- ಕಾರ್ಯನಿರತ ತಂಡಗಳ ಶಿಫಾರಸುಗಳನ್ನು ವಿಳಂಬಿಸದೇ ಜಾರಿಗೊಳಿಸಬೇಕು.

ಇತ್ತೀಚೆಗೆ ಜಿ-8 ರಾಷ್ಟ್ರಗಳ ಮುಖಂಡರ ಸಭೆ ಇಟಲಿಯಲ್ಲಿ ನಡೆದಿದೆ. ಜಗತ್ತನ್ನು ಶೋಷಿಸುವ ಬಂಡವಾಳಶಾಹಿ ಪ್ರಭುತ್ವಗಳ ಧೋರಣೆಯನ್ನು ಬಿಂಬಿಸುವ ಒಂದು ಪ್ರದರ್ಶನ



ಕ್ಯೂಬಾ ಕ್ರಾಂತಿಯ ಸುವರ್ಣೋತ್ಸವ ಕ್ಯೂಬನ್ನರಿಗೆ ಮಾತ್ರವಲ್ಲ, ಇಡೀ ಜಗತ್ತಿನ ದುಡಿಮೆಗಾರರಿಗೆ, ಸಮಾನತೆಯ ಸಮಾಜದ ಕನಸು ಕಾಣಬಲ್ಲ ಎಲ್ಲರಿಗೂ ಸಂಭ್ರಮದ ಸಂಗತಿ. ಹತ್ತು ವರ್ಷಗಳ ಹಿಂದೆ ಕ್ಯೂಬಾದಲ್ಲಿ ನಡೆದ ವಿಶ್ವ ಯುವಜನೋತ್ಸವದಲ್ಲಿ ಭಾಗವಹಿಸಿ ಹಿಂದಿರುಗಿದಾಗ ಕನ್ನಡದ ಪತ್ರಕರ್ತ-ಕವಿ ಜಿ.ಎನ್ ಮೋಹನ್ 'ನನ್ನೊಳಗಿನ ಹಾಡು ಕ್ಯೂಬಾ' ಎಂದಿದ್ದರು. ಅದು ಈಗಲೂ ಸಮಾನತೆಯ ಸಮಾಜ ಬಯಸುವ ಎಲ್ಲರೊಳಗಿನ ಹಾಡು.

ಅಮೆರಿಕಾ ಖಂಡ ಪೂರ್ವಾರ್ಧ ಗೋಳದ ಮೊದಲ ಕ್ರಾಂತಿ

ಕ್ಯೂಬಾ ಕ್ರಾಂತಿಗೆ ಸುವರ್ಣ ಸಂಭ್ರಮ

ಈ ಜನವರಿ 1 ರಿಂದ ಕೆರೆಬಿಯನ್ ಸಮುದ್ರದಲ್ಲಿರುವ ಪುಟ್ಟ ದ್ವೀಪ ದೇಶ ಕ್ಯೂಬಾ ತನ್ನ ಕ್ರಾಂತಿಯ ಸುವರ್ಣ ಮಹೋತ್ಸವವನ್ನು ಆಚರಿಸುತ್ತಿದೆ. ಇದು ಕೇವಲ 1ಕೋಟಿ 10ಲಕ್ಷ ಜನರಿರುವ ಚಿಕ್ಕದೇಶವಾದರೂ ...ದರ ಕೀರ್ತಿ ಬಹಳ ದೊಡ್ಡದು. ಜನವರಿ 1, ...59ರಂದು ಚೆಗೆವಾರಾ, ಫಿಡೆಲ್ ಕಾಸ್ಟ್ರೊ, ರೌಲ್ ...ಸ್ಟ್ರೊ ಮತ್ತು ಅವರ ಯುವ ಸಂಗಾತಿಗಳ ...ತೃತ್ವದಲ್ಲಿ ಕ್ಯೂಬನ್ನರು ಸಾಧಿಸಿದ ಕ್ರಾಂತಿ ವಿಶ್ವದ ...ತಿಹಾಸದಲ್ಲಿಯೇ ಒಂದು ರೋಮಾಂಚಕ ...ಟನೆಯಾಗಿದ್ದರೆ, ನಂತರದ ಈ ಐವತ್ತು ವರ್ಷಗಳ ...ದರ ಇತಿಹಾಸ ಮಾನವ ಶ್ರಮದ, ಸಾಧನೆಯ ...ದು ವಿಶಿಷ್ಟ ಗಾಥೆ.

ಕ್ಯೂಬಾ ಸೇರಿದಂತೆ ದಕ್ಷಿಣ ಅಮೆರಿಕ ಮತ್ತು ಮ...ಧ್ಯ ಅಮೆರಿಕ ಖಂಡಗಳ ದೇಶಗಳು ನಮಗಿಂತಲೂ ತೀವ್ರವಾದ, ಕ್ರೂರವಾದ ವಸಾಹತುಶಾಹೀ ಶೋಷಣೆಯನ್ನು ಅನುಭವಿಸಿದ ದೇಶಗಳು. ಭಾರತ, ಚೀನ ಮತ್ತು ಜಪಾನಿನ ಸಂಪತ್ತಿನ ಮೇಲೆ ಕಣ್ಣಿಟ್ಟ ಯುರೋಪಿಯನ್ನರಿಗಾಗಿ ಪಶ್ಚಿಮದ ಮೂಲಕ ದಾರಿ ಹುಡುಕುತ್ತಾ ಹೊರಟ ಕ್ರಿಸ್ಟೊಫರ್ ಕೊಲಂಬಸ್‌ನ ಸಮುದ್ರಯಾನದ ಪರಿಣಾಮವಾಗಿ ಈ ದೇಶಗಳು 15ನೇ ಶತಮಾನದ ಅಂತ್ಯದ ವೇಳೆಗೆ ಯುರೋಪಿಯನ್ನರ, ಅದರಲ್ಲೂ ಸ್ಪೇನ್ ಮತ್ತು ಪೋರ್ಚುಗಾಲ್‌ನ ವಸಾಹತುಗಳಾಗಿ ಮಾರ್ಪಟ್ಟವು, ಮುಂದಿನ ಸುಮಾರು ಮೂರು ಶತಮಾನಗಳ ಕಾಲ ಅವರ ಕ್ರೂರ ಆಳ್ವಿಕೆಗೆ, ಲೂಟಿಗೆ ಮತ್ತು ಗುಲಾಮಿಕೆಗೆ ಒಳಗಾದವು.

ಭಾರತದಂತೆ 19ನೇ ಶತಮಾನದ ವೇಳೆಗೆ ಆರಂಭವಾದ ಸ್ವಾತಂತ್ರ್ಯ ಹೋರಾಟಗಳ ಫಲವಾಗಿ ಈ ದೇಶಗಳು ಒಂದೊಂದಾಗಿ ಸ್ವತಂತ್ರವಾದವು, ಗಣತಂತ್ರಗಳೂ ಆದವು. ಆದರೆ ಆ ವೇಳೆಗೆ ಅಮೆರಿಕಾ ಖಂಡದಲ್ಲಿ ಮಾತ್ರವಲ್ಲ, ಇಡೀ ಜಗತ್ತಿನಲ್ಲಿ ಪ್ರಾಬಲ್ಯ ಗಳಿಸಿದ ಅಮೆರಿಕಾ ಸಂಯುಕ್ತ ಸಂಸ್ಥಾನದ ಆಳುವ ವರ್ಗಗಳು ಇವನ್ನು ನಿಜವಾಗಿಯೂ ಸ್ವತಂತ್ರ ದೇಶಗಳಂತೆ ಬದುಕಲು ಬಿಡಲು ಸಿದ್ಧರಿರಲಿಲ್ಲ. ಸ್ಪೇನ್ ಮತ್ತು ಪೋರ್ಚುಗಲ್‌ನ ವಸಾಹತುಗಳು ಅಮೆರಿಕಾದ ಅರೆ ವಸಾಹತುಗಳಾದವು. ಸ್ಪಾನಿಷ್ ಮತ್ತು ಪೋರ್ಚುಗೀಸ್ ಭಾಷೆಗಳು ಲ್ಯಾಟಿನ್ ಮೂಲದ ಭಾಷೆಗಳಾದ್ದರಿಂದ 'ಲ್ಯಾಟಿನ್ ಅಮೆರಿಕಾ' ಎನಿಸಿಕೊಂಡ ಈ ದೇಶಗಳು ಆಗ 'ಅಮೆರಿಕಾದ ಹಿತ್ತಿಲು' , 'ಬಾಳೆಹಣ್ಣು ಗಣತಂತ್ರಗಳು' ಎನಿಸಿಕೊಂಡವು.

ಈ ವಿಶಾಲ 'ಹಿತ್ತಿಲಿ'ನಲ್ಲಿ, ಅಮೆರಿಕಾ ಸಂಯುಕ್ತ ಸಂಸ್ಥಾನಗಳಿಂದ ಕೇವಲ 90 ಮೈಲಿ ದೂರದಲ್ಲಿರುವ ತಮ್ಮ ದೇಶದ ವಿಮೋಚನೆಗಾಗಿ, ಸಾರ್ವಭೌಮತೆಗಾಗಿ ಜಗತ್ತಿನ ಈ ಅತ್ಯಂತ ಪ್ರಬಲ ದೇಶದ ಆಳರಸರಿಗೆ ಸೆಡ್ಡು ಹೊಡೆದು ನಿಂತವರು ಕ್ಯೂಬಾದ ಕ್ರಾಂತಿಕಾರಿಗಳು.


ಜನವರಿ 8,1959ರಂದು ಹವಾನಾ ಪ್ರವೇಶಿಸುತ್ತಿರುವ ಕಾಸ್ಟ್ರೊ ಮತ್ತು ಸಂಗಾತಿಗಳು

'ಜುಲೈ 26 ಆಂದೋಲನ'

20ನೇ ಶತಮಾನದ ಆರಂಭದಿಂದಲೇ ಕ್ಯೂಬಾದಲ್ಲಿ ದೊಡ್ಡ-ದೊಡ್ಡ ಕಬ್ಬು ಮತ್ತು ಇತರ ಎಸ್ಟೇಟುಗಳ, ಕಂಪನಿಗಳ ಮಾಲಕತ್ವವನ್ನು ಕಬಳಿಸಿದ್ದ ಅಮೆರಿಕನ್ನರ ಪ್ರಭಾವವಿತ್ತು. 1950ರ ವೇಳೆಗೆ ಕ್ಯೂಬಾದಲ್ಲಿ ಅಧಿಕಾರ ವಹಿಸಿಕೊಂಡ ಫುಲ್ಜೆನ್ಸಿಯೊ ಬಾಟಿಸ್ಟಾ ಈ ಅಮೆರಿಕನ್ ಮಾಲಕರ ಹಿತಾಸಕ್ತಿಗಳನ್ನು ಈಡೇರಿಸಲಿಕ್ಕಾಗಿ ತನ್ನ ಬಡ ದೇಶಬಾಂಧವರ ಮೇಲೆಯೇ ದಬ್ಬಾಳಿಕೆ ನಡೆಸುತ್ತಿದ್ದ ಸರ್ವಾಧಿಕಾರಿ. ಸಹಜವಾಗಿಯೆ ಈತನ ಆಳ್ವಿಕೆಯ ಬಗ್ಗೆ ಕ್ಯೂಬನ್ನರಲ್ಲಿ ದ್ವೇಷ ಮತ್ತು ಅಸಂತೃಪ್ತಿ ವ್ಯಾಪಕವಾಗಿತ್ತು. ಆದರೆ 'ಪ್ರಜಾಪ್ರಭುತ್ವ'ವೆನಿಸಿಕೊಂಡ ಅಮೆರಿಕಾದ ಆಳರಸರ ಸಂಪೂರ್ಣ ಬೆಂಬಲ ಆತನಿಗಿದ್ದುದರಿಂದ ಜನ ಹತಾಶರೂ ಆಗಿದ್ದರು. ಅಲ್ಲಿಯ ಯುವಜನ ಸಶಸ್ತ್ರ ಹೋರಾಟಕ್ಕೆ ಇಳಿದದ್ದು ಇಂತಹ ಸನ್ನಿವೇಶದಲ್ಲಿ.

ಕ್ಯೂಬಾದ ಕ್ರಾಂತಿಕಾರಿ ಹೋರಾಟ ಆರಂಭವಾದದ್ದು ಜುಲೈ 26, 1...ರಂದು ಎಂದು ಸಾಮ...ಗಿ ಹೇಳಲಾಗುತ್ತದೆ. ಅಂದ... 160 ಸಶಸ್ತ್ರ ಯುವ ಬಂಡಾಯಗಾರರು ಫಿಡೆಲ್ ಕಾಸ್ಟ್ರೊ ನೇತೃತ್ವದಲ್ಲಿ ಸಾಂಟಿಯಾಗೊದಲ್ಲಿದ್ದ ಮೊಂಕಾಡಾ ಬ್ಯಾರಕ್ (ಸೇನಾ ಪಾಳೆಯ) ಮೇಲೆ ದಾಳಿ ನಡೆಸಿದರು. ಅದು ಯಶಸ್ವಿಯಾಗಲಿಲ್ಲ. ಐವರು ಬಂಡಾಯಗಾರರು ಬಲಿಯಾದರು. ಇತರರನ್ನು ಬಾಟಿಸ್ಟಾ ಆಡಳಿತ ಬಂಧಿಸಿತು. ಬಂಧನದಲ್ಲೇ 56 ಯುವಕರು ಚಿತ್ರಹಿಂಸೆಗಳಿಗೆ ಬಲಿಯಾದರು. ಉಳಿದವರ ಮೇಲೆ ದೇಶದ್ರೋಹದ ಮೊಕದ್ದಮೆ ನಡೆಯಿತು.

ಫಿಡೆಲ್ ಕಾಸ್ಟ್ರೊ ಕಾನೂನು ಪದವೀಧರರಾಗಿದ್ದರು. ತನ್ನ ಮತ್ತು ತನ್ನ ಸಂಗಾತಿಗಳ ಪರವಾಗಿ ಈ ಮೊಕದ್ದಮೆಯಲ್ಲಿ ತಾನೇ ವಕಾಲತ್ತು ವಹಿಸಿದರು. ನ್ಯಾಯಾಲಯದಲ್ಲಿ ತಮ್ಮನ್ನು ಸಮರ್ಥಿಸಿಕೊಂಡು ಅವರು ಸತತವಾಗಿ ನಾಲ್ಕು ಗಂಟೆಗಳ ಕಾಲ ವಾದಿಸಿದರು, ಬಾಟಿಸ್ಟಾ ಸರಕಾರವೇ ದೇಶದ್ರೋಹಿ ಎಂದು ಸಾಬೀತು ಮಾಡಿದರು, ತಮ್ಮ ಕನಸಿನ ಕ್ಯೂಬಾದ ಚಿತ್ರವನ್ನು ಮುಂದಿಟ್ಟರು. 'ನನಗೆ ಗೊತ್ತು, ನನಗೆ ಜೈಲುವಾಸ ಬೇರೆ ಎಲ್ಲರಿಗಿಂತಲೂ ಹೆಚ್ಚು ಕಷ್ಟಕರವಾಗಿರುತ್ತದೆ, ಹೇಡಿತನದ ಬೆದರಿಕೆಗಳಿಂದ, ಅಸಹ್ಯಕರ ಕ್ರೌರ್ಯದಿಂದ ಕೂಡಿರುತ್ತದೆ. ಆದರೆ ನನಗೆ ಜೈಲಿನ ಭಯವಿಲ್ಲ. ಏಕೆಂದರೆ ನನಗೆ ನನ್ನ ಎಪ್ಪತ್ತು ಸಂಗಾತಿಗಳ ಪ್ರಾಣ ತೆಗೆದ ಶೋಚನೀಯ ದಬ್ಬಾಳಿಕಕೋರನ ಭಯವಿಲ್ಲ. ನನಗೆ ಶಿಕ್ಷೆ ವಿಧಿಸಿ, ಪರವಾಗಿಲ್ಲ. ಇತಿಹಾಸ ನನ್ನನ್ನು ನಿರ್ದೋಷಿ ಎನ್ನುತ್ತದೆ' ಎಂಬ ಉದ್ಗಾರದೊಂದಿಗೆ ಕೊನೆಗೊಂಡ ಅವರ ಈ ವಕಾಲತ್ತು ಒಂದು ಇತಿಹಾಸ ಪ್ರಸಿದ್ಧ ಭಾಷಣವಾಗಿ ದಾಖಲಾಗಿದೆ. ನಂತರ ಇದು 'ಜುಲೈ 26 ರ ಆಂದೋಲನ' ಎಂದೇ ಹೆಸರಾದ ಕ್ರಾಂತಿಕಾರಿ ಚಳುವಳಿಯ ಪ್ರಣಾಳಿಕೆಯೂ ಆಯಿತು.

'ಗ್ರಾನ್ಮಾ' ದಿಂದ ಹವಾನಾದವರೆಗೆ

ಫಿಡೆಲ್ ಕಾಸ್ಟ್ರೊಗೆ 15 ವರ್ಷಗಳ ಶಿಕ್ಷೆ ವಿಧಿಸಲಾಯಿತು. ಅವರ ಸೋದರ ರೌಲ್ ಕಾಸ್ಟ್ರೊಗೆ(ಈಗ ಕ್ಯೂಬಾದ ಅಧ್ಯಕ್ಷರು) 13 ವರ್ಷಗಳ ಶಿಕ್ಷೆಯಾಯಿತು. ಆದರೆ ವಿಮೋಚನಾ ಹೋರಾಟ ನಿಲ್ಲಲಿಲ್ಲ, ತೀವ್ರಗೊಂಡಿತು. ಸಾರ್ವಜನಿಕ ಒತ್ತಡದಿಂದಾಗಿ ಸರ್ವಾಧಿಕಾರಿ ಬಾಟಿಸ್ಟಾ ಎಲ್ಲಾ ರಾಜಕೀಯ ಬಂಧಿಗಳಿಗೆ 'ಸಾರ್ವತ್ರಿಕ ಕ್ಷಮಾದಾನ' ಘೋಷಿಸಲೇ ಬೇಕಾಗಿ ಬಂತು. ಬಿಡುಗಡೆ ಹೊಂದಿದ ಕಾಸ್ಟ್ರೊ ಮತ್ತು ಅವರ ಸಂಗಾತಿಗಳು ಮೆಕ್ಸಿಕೋಗೆ ಹೋದರು, ಅಲ್ಲಿ ಆಗಲೇ ಗಡೀಪಾರಾಗಿ ಇದ್ದ ಕ್ಯೂಬನ್ನರೊಂದಿಗೆ ಸೇರಿಕೊಂಡು ಬಾಟಿಸ್ಟಾ ಸರ್ವಾಧಿಕಾರವನ್ನು ಪದಚ್ಯುತಗೊಳಿಸುವ ಸಶಸ್ತ್ರ ಕ್ರಾಂತಿಗೆ ಸಿದ್ಧತೆ ಆರಂಭಿಸಿದರು. ಪ್ರಖ್ಯಾತ ಕ್ರಾಂತಿಕಾರಿ ಚೆ ಗೆವಾರಾ ಅವರ ಜತೆಗೂಡಿದ್ದು ಇಲ್ಲಿಯೇ. ಕ್ಯೂಬಾ... ಸರ್ವಾಧಿಕಾರಿಯ ಮಿಲಿಟರಿಯ ವಿರುದ್ಧ ಸಶಸ್ತ್ರ ದಾಳಿ, ಅದೇ ವೇಳೆಗೆ ಜನಗಳ ಬಂಡಾಯ ಮತ್ತು ಸಾರ್ವತ್ರಿಕ ಮುಷ್ಕರ ನಡೆಸಿ ಬಾಟಿಸ್ಟಾನನ್ನು

ಕ್ಯಾಸ್ಟ್ರೋಗೆ ಹೆಗಲುಕೊಟ್ಟ ಕ್ರಾಂತಿಯ ರೂವಾರಿಗಳು ರಾವುಲ್ ಕ್ಯಾಸ್ಟ್ರೋ - ಚೆ ಗುವೆರಾ



'ಚೆ' ಕೊಂದವನಿಗೂ ಕಣ್ಣಿಗೆ ಪುಕ್ಕಟ್ಟೆ ಶಸ್ತ್ರ ಚಿಕಿತ್ಸೆ

ಒಂದೂವರೆ ವರ್ಷಗಳ ಹಿಂದೆ ಬೊಲಿವಿಯಾದಲ್ಲಿ ಮಾರಿಯೊ ತೆರಾನ್ ಎಂಬ ಮುದಿ ವಯಸ್ಸಿನ ಮಾಜಿ ಸಾರ್ಜೆಂಟ್‌ಗೆ ಕಳೆದುಹೋಗಿದ್ದ ಕಣ್ಣಿನ ದೃಷ್ಟಿ ಮತ್ತೆ ಲಭಿಸಿತು. ಇದು ಇವೊ ಮೊರೆಲೆಸ್‌ನ ಬೊಲಿವಿಯಾದಲ್ಲಿ ಹ್ಯುಗೊ ಚವೇಜ್‌ನ ವೆನೆಜುವೆಲಾದ ಹಣಸಹಾಯದಿಂದ ಫಿಡೆಲ್ ಕಾಸ್ಟ್ರೊನ ಕ್ಯೂಬಾದ ಡಾಕ್ಟರುಗಳು ನಡೆಸಿದ 14ಲಕ್ಷ ಕಣ್ಣಿನ ಮುಕ್ಕಟೆ ಶಸ್ತ್ರಚಿಕಿತ್ಸೆಗಳಲ್ಲಿ ಒಂದು. ಇದಕ್ಕೆ ಇನ್ನೊಂದು ವಿಶೇಷತೆಯೂ ಇತ್ತು. ಈ ಸಾರ್ಜೆಂಟ್ ಅವತ್ತಿಗೆ 40 ವರ್ಷಗಳ ಹಿಂದೆ ಅಕ್ಟೋಬರ್ 9, 1967ರಂದು ಆಗಿನ ಬೊಲಿವಿಯಾದ ಅಧ್ಯಕ್ಷ ಮತ್ತು ಸಿಐಎ ಆದೇಶದ ಪ್ರಕಾರ ಕ್ಯೂಬಾ ಕ್ರಾಂತಿಯ ಮುಖಂಡ ಬಂಧಿತ ಚೆ ಗೆವಾರನನ್ನು ಗುಂಡಿಟ್ಟು ಕೊಂದಾತ. 'ಹೇಡಿಯೇ, ಬಂದೂಕು ಚಲಾಯಿಸು, ನೀನು ಒಬ್ಬ ಮನುಷ್ಯನನ್ನು ಕೊಲ್ಲುತ್ತಿದ್ದೀಯಷ್ಟೆ' ಎಂದಿದ್ದ ಚೆ. ಕ್ಯೂಬಾ ಕ್ರಾಂತಿ ಲ್ಯಾಟಿನ್ ಅಮೆರಿಕಾದಲ್ಲೆಲ್ಲಾ ಹರಡದಂತೆ ತಡೆಯಲು ಆಗೇನೋ ಸಾಧ್ಯವಾಯಿತು. ಆದರೆ ಮೇಲಿನ ಈ ಘಟನೆ ಇತಿಹಾಸದ ವಿಡಂಬನೆ ಮಾತ್ರವಲ್ಲ, ಈ 50ವರ್ಷಗಳಲ್ಲಿ ಪುಟ್ಟ ಕ್ಯೂಬಾದ ಸಾಧನೆಗಳ ಮಾನವೀಯ ಸ್ವರೂಪದ ಪ್ರತೀಕ ಕೂಡಾ.

ಪದಚ್ಯುತಗೊಳಿಸುವುದು ಅವರ ಯೋಜನೆಯಾಗಿತ್ತು.

1956ರ ನವಂಬರ್ ಕೊನೆಯಲ್ಲಿ 82 ಬಂಡಾಯಗಾರರು 'ಗ್ರಾನ್ಮಾ' ಎಂಬ ಸಣ್ಣ ನೌಕೆಯಲ್ಲಿ ಸಂಗ್ರಹಿಸಿದ ಶಸ್ತ್ರಾಸ್ತ್ರಗಳನ್ನು ತುಂಬಿಕೊಂಡು ಕ್ಯೂಬಾದ ತಟದತ್ತ ಹೊರಟರು. ಡಿಸೆಂಬರ್ 2ರಂದು ಅವರು ದಕ್ಷಿಣ ಭಾಗದಲ್ಲಿರುವ ಸಿಯೆರಾ ಪರ್ವತಶ್ರೇಣಿಗೆ ಹೊಂದಿಕೊಂಡಿದ್ದ ಪಶ್ಚಿಮ ತಟದಲ್ಲಿ ಬಂದಿಳಿದರು. ಆದರೆ ಅವರ ಲೆಕ್ಕಾಚಾರ ತಪ್ಪಿತು. ಅವರು ಅಮೆರಿಕಾದ ಬೆಂಬಲವಿದ್ದ ಸರ್ವಾಧಿಕಾರಿಯ ಭಾರೀ ಮಿಲಿಟರಿ ಶಕ್ತಿಯನ್ನು ಎದುರಿಸಬೇಕಾಗಿತ್ತು. ಹೆಚ್ಚಿನ ಬಂಡಾಯಗಾರರು ಹತರಾದರು. ಉಳಿದ ಸುಮಾರು ಇಪ್ಪತ್ತು ಮಂದಿ ಸಿಯೆರಾ ಪರ್ವತ ಶ್ರೇಣಿಯತ್ತ ಓಡಿ ಹೋದರು. ಮತ್ತೊಮ್ಮೆ ದಾಳಿ ವಿಫಲವಾಯಿತು. ಆದರೆ ಹೋರಾಟ ನಿಲ್ಲಲಿಲ್ಲ. ಆ ಪರ್ವತ ಶ್ರೇಣಿಗಳಲ್ಲೇ ಒಂದು ಗೆರಿಲ್ಲಾ ಸಮರದ ತುಕಡಿಗಳು ನಿರ್ಮಾಣಗೊಳ್ಳಲಾರಂಭಿಸಿದವು. ಸುತ್ತಲಿನ ರೈತರಿಂದ ನೆರವು ಹರಿದು . ಅತ್ತ ಹಳ್ಳಿಗಳಲ್ಲೂ, ನಗರಗಳಲ್ಲೂ ಚಳುವಳಿ ತೀವ್ರಗೊಂಡಿತು, ಕಮ್ಯುನಿಸ್ಟ್ ಪಕ್ಷದ ನೇತೃತ್ವದಲ್ಲಿ ಕಾರ್ಮಿಕರ ಹೋರಾಟಗಳೂ ನಡೆಯುತ್ತಿದ್ದವು.

ಕ್ರಮೇಣ ಸಿಯೆರಾ ಪರ್ವತಶ್ರೇಣಿಯ ಮೇಲೆ ಬಂಡಾಯಗಾರರ ಅಧಿಕಾರ ಸ್ಥಾಪನೆಗೊಂಡಿತು. ಅವರು ಒಂದು ರೇಡಿಯೋ ನಿಲಯವನ್ನೂ ಸ್ಥಾಪಿಸಿದರು. ಇಲ್ಲಿಂದ ಇಡೀ ಕ್ಯೂಬಾಕ್ಕೆ ಫಿಡೆಲ್ ರವರ ಸಂದೇಶಗಳು ಬಿತ್ತರಗೊಳ್ಳಲಾರಂಭಿಸಿದವು. ಸುಮಾರು 300 ಬಂಡಾಯಗಾರರ ಪಡೆಯನ್ನು ಅಮೆರಿಕಾದ ಶಸ್ತ್ರಾಸ್ತ್ರಗಳಿಂದ, ತರಬೇತಿಯಿಂದ ಸಜ್ಜಿತವಾಗಿದ್ದ 30000 ಸೈನಿಕರಿದ್ದ ಬಾಟಿಸ್ಟಾ ಮಿಲಿಟರಿ ಎದುರಿಸದಾಯಿತು. 1958ರ ಅಂತ್ಯದ ವೇಳೆಗೆ ಬಾಟಿಸ್ಟಾ ಆಡಳಿತದ ಹತೋಟಿ ಸಡಿಲವಾಗಲಾರಂಭಿಸಿತ್ತು. ಹಳ್ಳಿಗಳಲ್ಲಿ ಬಂಡಾಯ, ನಗರಗಳಲ್ಲಿ ಸಾರ್ವತ್ರಿಕ ಮುಷ್ಕರಗಳು- ಡಿಸೆಂಬರ್ 31, 1958ರಂದು ಸಾಂತಾ ಕ್ಲಾರ ನಗರ ಚೆ ಗೆವಾರಾ ನೇತೃತ್ವದ ಬಂಡಾಯಗಾರರ ತುಕಡಿಯ ವಶವಾಯಿತು. ಇನ್ನು ತನಗೆ ಉಳಿಗಾಲ ಇಲ್ಲ ಎಂದು ಕಂಡುಕೊಂಡ ಬಾಟಿಸ್ಟ ಮತ್ತು ಆತನ ಸಹಾಯಕರು ಪಲಾಯನ ಮಾಡಿದರು. ಅಂದು ಜನವರಿ 1, 1959. ಬಾಟಿಸ್ಟ ಸರ್ವಾಧಿಕಾರ ಅಂತ್ಯಗೊಂಡಿತ್ತು. ಜನವರಿ 8, 1959ರಂದು ಫಿಡೆಲ್ ಕಾಸ್ಟ್ರೊ, ಚೆ ಗೆವಾರ ಮತ್ತು ಅವರ ಇತರ ಸಂಗಾತಿಗಳ ವಿಜಯಯಾತ್ರೆ ರಾಜಧಾನಿ ಹವಾನಾ ಪ್ರವೇಶಿಸಿತು.

ಸಮಾಜವಾದದ ದಾರಿ

ಇದು ಆರಂಭದಲ್ಲಿ, ಒಂದು ಸರ್ವಾಧಿಕಾರದ ವಿರುದ್ಧ ನಡೆದ ಪ್ರಜಾಪ್ರಭುತ್ವ ಕ್ರಾಂತಿಯಷ್ಟೇ ಆಗಿತ್ತು, ಸಮಾಜವಾದಿ ಕ್ರಾಂತಿಯೇನೂ ಆಗಿರಲಿಲ್ಲ. ಫಿಡೆಲ್, ಚೆ ಮುಂತಾದ ಈ ಕ್ರಾಂತಿಯ ನೇತಾರರು ಸಮಾಜವಾದಿಗಳೂ ಆಗಿರಲಿಲ್ಲ, ತಮ್ಮ ಅನುಭವಗಳಿಂದಾಗಿ ಅಮೆರಿಕನ್ ಸಾಮ್ರಾಜ್ಯಶಾಹಿಯ ವಿರೋಧಿಗಳಾಗಿದ್ದರು ಅಷ್ಟೇ. ರೂ ಇಷ್ಟರಿಂದಲೇ ಅಮೆರಿಕಾದ ಆಳುವ ವರ್ಗಗಳಿಗೆ ಇದು ಕಮ್ಯುನಿಸ್ಟ್ ಕ್ರಾಂತಿ ಎಂದು ದಿಗಿಲಾಗಿತ್ತು. ಆದ್ದರಿಂದ ಇತರ ಮೂರನೇ ಜಗತ್ತಿನ ಆಳುವ ಮಂದಿಯನ್ನು ತಮ್ಮತ್ತ ಸೆಳೆದುಕೊಳ್ಳಲು ಪ್ರಯತ್ನಿಸಿದಂತೆ ಕ್ಯೂಬಾದ ಹೊಸ ಆಡಳಿತಗಾರರನ್ನೂ ತಮ್ಮತ್ತ ಸೆಳೆಯುವ ಪ್ರಯತ್ನ ನಡೆಸದೆ ಬಿಡಲಿಲ್ಲ. 'ನೆರವು' ಒದಗಿಸುವ ಭರವಸೆ ನೀಡಲಾಯಿತು. ಆದರೆ ಅದಕ್ಕಾಗಿ ಕ್ಯೂಬಾ ಐಎಂಎಫ್‌ನ 'ಸ್ಥಿರೀಕರಣ ಯೋಜನೆ'ಯನ್ನು ಅಂಗೀಕರಿಸಬೇಕಾಗಿತ್ತು. ಕ್ಯೂಬಾ ಕ್ರಾಂತಿಕಾರಿಗಳು ಈ ಶರತ್ತಿಗೆ ಒಪ್ಪಲಿಲ್ಲ(ಈಗಲೂ ಅವರ ಈ ದೃಢ ನಿಲುವು ಹಾಗೆಯೇ ಉಳಿದಿದೆ).

ಸಮಾಜವಾದದ ಹಾದಿ ಹಿಡಿಯದೆ ನಿಜವಾದ ಸಾಮ್ರಾಜ್ಯಶಾಹಿ-ವಿರೋಧ ಸಾಧ್ಯವಿಲ್ಲ, ಜನಗಳ ಕಲ್ಯಾಣ ಸಾಧ್ಯವಿಲ್ಲ ಎಂದು ಅವರು ಬಹುಬೇಗನೇ ಕಂಡುಕೊಂಡರು, ಯಾವುದೇ ಹಿಂಜರಿಕೆಯಿಲ್ಲದೆ, ತಮ್ಮದು ಸಮಾಜವಾದಿ ದಾರಿ ಎಂದು ಸಾರಿದರು. ದೇಶೀ ಭೂಮಾಲಕರ ಒಡೆತನದಲ್ಲಿ ಇದ್ದ ಜಮೀನುಗಳನ್ನು, ಅಮೆರಿಕನ್ ಒಡೆತನದ



ಎಸ್ಟೇಟುಗಳನ್ನು, ಕೈಗಾರಿಕೆಗಳನ್ನು, ತೈಲಕಂಪನಿಗಳನ್ನು ರಾಷ್ಟ್ರೀಕರಿಸಲಾಯಿತು. ಕ್ಯೂಬಾದ ಮೇಲೆ ಕೊನೆಗೂ ಕ್ಯೂಬನ್ನರ ಹತೋಟಿ ಸ್ಥಾಪನೆ ಗೊಂಡಿತು.

ಸಾವಿರಾರು ಮೈಲಿಗಳಷ್ಟು ದೂರದಲ್ಲಿರುವ ವಿಯೆಟ್ನಾಮಿನಲ್ಲಿ ಸಮಾಜವಾದವನ್ನು ಸಹಿಸಿಕೊಳ್ಳಲಾರದೆ ಇತಿಹಾಸದಲ್ಲೇ ಕಂಡಿರದ - ಕೇಳಿರದ ಅತ್ಯಂತ ಅಮಾನುಷ ಹಿಂಸಾಚಾರಕ್ಕೆ ಇಳಿದ ಅಮೆರಿಕನ್ ಆಳರಸರು ತಮ್ಮ ಬುಡದಲ್ಲೇ ಒಂದು ಸಮಾಜವಾದಿ ದೇಶವನ್ನು ಹೇಗೆ ಸಹಿಸಿಯಾರು? 1961ರಲ್ಲಿ ಬೇ ಆಫ್ ಪಿಗ್ಸ್ ಅತಿಕ್ರಮಣದ ಮೂಲಕ ಕ್ಯೂಬಾವನ್ನು ಕಬಳಿಸುವ ಪ್ರಯತ್ನ ನಡೆದೇ ನಡೆಯಿತು. ಆದರೆ ಆಗಿನ್ನೂ ಸಮಾಜವಾದಿ ಬಣ ಬಲಿಷ್ಟವಾಗಿದ್ದುದರಿಂದ ಇದು ವಿಫಲವಾಯಿತು. ಕ್ಯೂಬಾವನ್ನು ಮಣಿಸಲು ಅಮೆರಿಕಾ ಆರ್ಥಿಕ ಸಮರದ ಹಾದಿ ಹಿಡಿಯಿತು. ಅಂದು ಆರಂಭವಾದ ಆರ್ಥಿಕ ಸಮರ ಇಂದೂ ಮುಂದುವರೆದಿದೆ. ಆರ್ಥಿಕ ನಿರ್ಬಂಧಗಳನ್ನು ಹೇರಲಾಯಿತು. ಅದು ಸಾಲದು ಎಂದನಿಸಿದಾಗ, ಕ್ಯೂಬಾದೊಡನೆ ವ್ಯವಹರಿಸುವ ದೇಶಗಳ ಮೇಲೂ ನಿರ್ಬಂಧ ಹಾಕುವ ಪ್ರಯತ್ನ ನಡೆಯಿತು. ಫಿಡೆಲ್ ಕಾಸ್ಟ್ರೊರವರ ಹತ್ಯೆ ನಡೆಸಲು ಸಿಐಎ 638 ಬಾರಿ ಪ್ರಯತ್ನ ನಡೆಸಿತಂತೆ. ಕ್ಯೂಬಾವನ್ನು ಅಸ್ಥಿರಗೊಳಿಸಲು ಕೆನೆಡಿಯಿಂದ ಬುಶ್‌ವರೆಗೆ ಹತ್ತು ಅಧ್ಯಕ್ಷರುಗಳ ಆಳ್ವಿಕೆಯಲ್ಲಿ ಬಿಲಿಯಗಟ್ಟಲೆ ಡಾಲರುಗಳನ್ನು ಸುರಿಯಲಾಯಿತು. ಆದರೂ ಕ್ಯೂಬಾಕ್ರಾಂತಿಯನ್ನು ಮಣಿಸಲಾಗಲಿಲ್ಲ.

ಕ್ಯೂಬಾ ಈಗ ಒಂಟಿಯಲ್ಲ

ವಿಶ್ವದ ಅತ್ಯಂತ ಬಲಾಢ್ಯ ಶಕ್ತಿಯೊಡನೆ ಈ 'ಆರ್ಥಿಕ ಸಮರ'ದ ನಡುವೆಯೂ ಕ್ಯೂಬಾದಲ್ಲಿ ಸಮಾಜವಾದಿ ಸಮಾಜವನ್ನು ಕಟ್ಟುವ ಕೆಲಸ ಎಂದೂ ನಿಲ್ಲಲಿಲ್ಲ. ಒಂದೇ ವರ್ಷದಲ್ಲಿ ನಿರಕ್ಷರತೆಯನ್ನು ನಿರ್ಮೂಲ ಮಾಡಿದ್ದು ಈಗಲೂ ಜಗತ್ತಿಗೆ ಒಂದು ಮಾದರಿಯಾಗಿದೆ. ಇದರೊಂದಿಗೇ ರೈತರ, ಕಾರ್ಮಿಕರ ಜೀವನ ಮಟ್ಟವನ್ನು ಸುಧಾರಿಸಲು ಒಂದಾದ ಮೇಲೊಂದರಂತೆ ಕ್ರಮಗಳನ್ನು ಕೈಗೊಳ್ಳಲಾಯಿತು. ವಿಶೇಷವಾಗಿ ಸಾರ್ವತ್ರಿಕ ಶಿಕ್ಷಣ ಮತ್ತು ಆರೋಗ್ಯಕ್ಕೆ ಒತ್ತು ನೀಡಲಾಯಿತು. ಇಲ್ಲಿಯ ಆರೋಗ್ಯ ವ್ಯವಸ್ಥೆ ಜಗತ್ತಿನಲ್ಲೇ ಅತ್ಯುತ್ತಮ ಎಂದು ವಿಶ್ವಸಂಸ್ಥೆಯೇ ಮಾನ್ಯ ಮಾಡಿದೆ. ಇಲ್ಲಿ ಪ್ರತಿ ಒಂದು ಲಕ್ಷ ಜನಸಂಖ್ಯೆಗೆ 591 ಡಾಕ್ಟರುಗಳಿದ್ದಾರೆ. ಶ್ರೀಮಂತ ಮುಂದುವರೆದ ದೇಶವೆನಿಸಿದ ಅಮೆರಿಕಾದಲ್ಲೂ ಈ ಸಂಖ್ಯೆ ಇನ್ನೂ 256 ಎಂಬುದನ್ನು ಗಮನಿಸಬೇಕು. ಕ್ಯೂಬಾದ ಡಾಕ್ಟರುಗಳು ಲ್ಯಾಟಿನ್ ಅಮೆರಿಕಾದ ಇತರ ದೇಶಗಳಲ್ಲಿ, ಆಫ್ರಿಕಾದ ದೇಶಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಆ ದೇಶಗಳ ವಿದ್ಯಾರ್ಥಿಗಳು ಕ್ಯೂಬಾದಲ್ಲಿ ವೈದ್ಯಕೀಯ ಶಿಕ್ಷಣ ಪಡೆಯುತ್ತಿದ್ದಾರೆ.

1990ರ ದಶಕದ ಆರಂಭದಲ್ಲಿ ಸೋವಿಯತ್ ಒಕ್ಕೂಟ ಕುಸಿದಾಗ, ಸಮಾಜವಾದೀ ಬಣವೆಂಬುದೇ ಇಲ್ಲವಾದಾಗ ಜಗತ್ತಿನ ಬಂಡವಾಳಶಾಹಿಗಳು ಕುಣಿದು ಕುಪ್ಪಳಿಸಿದರು, ಸಮಾಜವಾದೀ ಮಾದರಿ ಇನ್ನಿಲ್ಲ, ಕ್ಯೂಬಾದ ಕಥೆ ಇನ್ನು ಮುಗಿಯಿತು ಎಂದು ಸಾರಿದರು. ಆದರೆ ಪುಟ್ಟ ಕ್ಯೂಬಾ ಈ ಸವಾಲನ್ನೂ ಎದುರಿಸಿ ನಿಂತಿತು. ಅಲ್ಲಿನ ಜನ ಕಷ್ಟ-ನಷ್ಟಗಳನ್ನು ಧೈರ್ಯದಿಂದ ಎದುರಿಸಿದರು. ಜತೆಗೆ ಈ ಹಿಂದೆ ತಾನು ನೆರವು ನೀಡಿದ, ಸ್ಪೂರ್ತಿ ನೀಡಿದ ದೇಶಗಳ ದುಡಿಯುವ ಜನಗಳಿಂದ ನೆರವು ಕೂಡಾ ಹರಿದು ಬಂತು. ಭಾರತದ ದುಡಿಯುವ ಜನಗಳೂ 10ಸಾವಿರ ಟನ್ ಗೋಧಿ ಸಂಗ್ರಹಿಸಿ ಒಂದು ಹಡಗು ತುಂಬಿ ಕಳಿಸಿದರು. ನಂತರವೂ ಭಾರತದಿಂದ ಎರಡು ಹಡಗುಗಳು ಔಷಧಿಗಳು, ಶೈಕ್ಷಣಿಕ ಸಾಮಗ್ರಿಗಳನ್ನು ತುಂಬಿಕೊಂಡು ಕ್ಯೂಬಾ ತಲುಪಿದವು.

ಪರ್ಯಾಯ ದಾರಿ

ಈಗ ಪರಿಸ್ಥಿತಿ ಸಂಪೂರ್ಣ ಬದಲಾಗಿದೆ. ಬಂಡವಾಳಶಾಹಿ ಜಾಗತಿಕ ಬಿಕ್ಕಟ್ಟಿಗೆ ಸಿಲುಕಿದ್ದರೆ, ಸುಮಾರು ನಾಲ್ಕು ದಶಕಗಳ ಕಾಲ ಲ್ಯಾಟಿನ್ ಅಮೆರಿಕಾದಲ್ಲಿ ಒಂಟಿಯಾಗಿ ಹೋರಾಡಬೇಕಾಗಿದ್ದ ಕ್ಯೂಬಾಕ್ಕೆ ಈಗ ಅಲ್ಲಿ ಹಲವು ಮಿತ್ರರು ಜತೆಗೂಡಿದ್ದಾರೆ. ಚವೇಜ್ ನೇತೃತ್ವದಲ್ಲಿ ವೆನೆಜುವೆಲಾ, ಮೊರೆಲೆಸ್ ನೇತೃತ್ವದಲ್ಲಿ ಬೊಲಿವಿಯಾ, ಲುಲಾ ನೇತೃತ್ವದಲ್ಲಿ ಬ್ರೆಜಿಲ್ ದೇಶಗಳು ಕೂಡಾ ಅಮೆರಿಕಾಕ್ಕೆ ಸವಾಲು ಹಾಕುತ್ತಿವೆ. ಅಮೆರಿಕನ್ ಸಾಮ್ರಾಜ್ಯಶಾಹಿ ನೇತೃತ್ವದಲ್ಲಿ ಹೇರಿರುವ ನವ-ಉದಾರವಾದೀ ನೀತಿಗಳ ವಿರುದ್ಧ ವಿಶ್ವವ್ಯಾಪಿ ಹೋರಾಟದಲ್ಲಿ ಲ್ಯಾಟಿನ್ ಅಮೆರಿಕಾದ ದೇಶಗಳು ಈಗ ಮುಂಚೂಣಿಯಲ್ಲಿವೆ. ಇದಕ್ಕೆ ಸ್ಪೂರ್ತಿಯೆಂದರೆ ಕ್ಯೂಬಾ ಈ ಐವತ್ತು ವರ್ಷಗಳಲ್ಲಿ ತೋರಿಸಿಕೊಟ್ಟಿರುವ ಪರ್ಯಾಯ ದಾರಿ. ಪ್ರಖ್ಯಾತ ಆರ್ಥಿಕ ತಜ್ಞ ಪ್ರೊ. ಪ್ರಭಾತ್ ಪಟ್ನಾಯಕ್ ಹೇಳುವಂತೆ ಕ್ಯೂಬಾ ಸಾಮ್ರಾಜ್ಯಶಾಹಿ ಜಾಗತೀಕರಣದ ವಿರುದ್ಧ ಈಗಲೂ ಪಂಜು ಎತ್ತಿ ಹಿಡಿದಿರುವ ದೇಶ, ಜಾಗತೀಕರಣದ ಪ್ರವಚನದ ಡಂಭಾಚಾರ ಮತ್ತು ಕಪಟದ ವಿರುದ್ಧ ಅತ್ಯಂತ ಗಟ್ಟಿಯಾದ ದನಿ ಮತ್ತು ಒಂದು ಪರ್ಯಾಯ ಮಾರ್ಗಕ್ಕೆ ಬದ್ಧತೆಯ ಸಾಕಾರ ಮೂರ್ತಿ.

ಅಮೆರಿಕಾ ಖಂಡದಲ್ಲಂತೂ ಇತ್ತೀಚಿನವರೆಗೆ ಅಮೆರಿಕಾ ಸಂಯುಕ್ತ ಸಂಸ್ಥಾನದ್ದೇ ಮಾತು ನಡೆಯುತ್ತಿದ್ದದ್ದು. ಅಲ್ಲಿ ಕ್ಯೂಬಾಕ್ಕೆ ಪ್ರವೇಶವೂ ಇರಲಿಲ್ಲ. ಆದರೆ ಕಳೆದ ತಿಂಗಳು ಬ್ರೆಜಿಲ್‌ನಲ್ಲಿ ನಡೆದ ಲ್ಯಾಟಿನ್ ಅಮೆರಿಕಾ ಮತ್ತು ಕೆರೆಬಿಯನ್ ದೇಶಗಳ ಶೃಂಗ ಸಭೆಯಲ್ಲಿ ಕ್ಯೂಬಾದ ಅಧ್ಯಕ್ಷರಿಗೆ ಭಾರೀ ಸ್ವಾಗತ ದೊರೆಯಿತು. ಈ ಶೃಂಗ ಸಭೆಯಲ್ಲಿ 33 ದೇಶಗಳು ಭಾಗವಹಿಸಿದ್ದವು. ಆದರೆ ಅಮೆರಿಕಾದ ಗೈರು ಹಾಜರಿ ಎದ್ದು ಕಾಣುತ್ತಿತ್ತು. ಕ್ಯೂಬಾದ ಮೇಲೆ ಅಮೆರಿಕಾ ಹೇರಿರುವ ನಿರ್ಬಂಧಗಳನ್ನು ಕೂಡಲೇ ತೆಗೆಯಬೇಕು ಎಂಬ ಒಕ್ಕೊರಲಿನ ಆಗ್ರಹ ಆ ಶೃಂಗ ಸಭೆಯಲ್ಲಿ ಹೊಮ್ಮಿತು. ಇದು ಕ್ಯೂಬಾದ ಕ್ರಾಂತಿಗೆ ಸಂದ ಗೌರವ.

ಕ್ಯೂಬಾ ಕ್ರಾಂತಿಯ ಸುವರ್ಣೋತ್ಸವ ಕ್ಯೂಬನ್ನರಿಗೆ ಮಾತ್ರವಲ್ಲ, ಇಡೀ ಜಗತ್ತಿನ ದುಡಿಮೆಗಾರರಿಗೆ, ಸಮಾನತೆಯ ಸಮಾಜದ ಕನಸು ಕಾಣಬಲ್ಲ ಎಲ್ಲರಿಗೂ ಸಂಭ್ರಮದ ಸಂಗತಿ. ಹತ್ತು ವರ್ಷಗಳ ಹಿಂದೆ ಕ್ಯೂಬಾದಲ್ಲಿ ನಡೆದ ವಿಶ್ವ ಯುವಜನೋತ್ಸವದಲ್ಲಿ ಭಾಗವಹಿಸಿ ಹಿಂದಿರುಗಿದಾಗ ಕನ್ನಡದ ಪತ್ರಕರ್ತ-ಕವಿ ಜಿ.ಎನ್ ಮೋಹನ್ 'ನನ್ನೊಳಗಿನ ಹಾಡು ಕ್ಯೂಬಾ' ಎಂದಿದ್ದರು. ಅದು ಈಗಲೂ ಸಮಾನತೆಯ ಸಮಾಜ ಬಯಸುವ ಎಲ್ಲರೊಳಗಿನ ಹಾಡು.

ರಾಜಿ ರಹಿತ ಹೋರಾಟ

'ವಸಾಹತುಶಾಹಿಯಿಂದ ವಿಮೋಚನೆ ಗೊಂಡ ಮೂರನೇ ಜಗತ್ತಿನ ದೇಶಗಳು ಆರಂಭದಲ್ಲಿ ರಾಷ್ಟ್ರೀಯ ವಿಮೋಚನಾ ಹೋರಾಟಗಳು ನಿರ್ಮಿಸಿದ ಪರಂಪರೆಯಿಂದಾಗಿ ಸಾಮ್ರಾಜ್ಯಶಾಹಿ-ವಿರೋಧಿ ನೀತಿಗಳನ್ನು ಅನುಸರಿಸಿದವು. ಅವುಗಳಲ್ಲಿ ಹೆಚ್ಚಿನ ದೇಶಗಳಲ್ಲಿ, ಬೂರ್ಜ್ವಾ ವರ್ಗ ಅಥವಾ ಬೂರ್ಜ್ವಾ-ಪೂರ್ವ ವರ್ಗದ ಮಂದಿ ಇಂತಹ ಹೋರಾಟಗಳ ನೇತೃತ್ವ ವಹಿಸಿದ್ದ ದೇಶಗಳಲ್ಲಿ, ಸಾಮ್ರಾಜ್ಯಶಾಹಿಯೊಂದಿಗೆ ರಾಜಿಯ ಪ್ರಕ್ರಿಯೆ ಆರಂಭವಾಗಿ ಅವು ಅಂತಿಮವಾಗಿ ತಮ್ಮ ದೇಶದ ಕಾರ್ಮಿಕರು ಮತ್ತು ರೈತರ ಹಿತಗಳಿಗೆ ವಿರುದ್ಧವಾದ ನವ-ಉದಾರವಾದಿ ನೀತಿಗಳನ್ನು ಅಂಗೀಕರಿಸಿದವು. ಆದರೆ ಕ್ಯೂಬಾದ ಕ್ರಾಂತಿ ಮಾತ್ರ ರಾಜಿಗಿಳಿಯಲಿಲ್ಲ. ಬದಲಿಗೆ ಜನತೆಗೆ ಅದರ ದೃಢ ಬದ್ಧತೆಯಿಂದಾಗಿ ತನ್ನ ಸ್ವರೂಪದಲ್ಲಿಯೇ ಪರಿವರ್ತನೆ ಮಾಡಿಕೊಂಡಿತು. ಆ ಬದ್ಧತೆಯಿಂದ ಅದೆಂದೂ ಹಿಂಜರಿಯಲಿಲ್ಲ. ಕ್ಯೂಬಾ ಸಾಮ್ರಾಜ್ಯಶಾಹಿ ಜಾಗತೀಕರಣದ ವಿರುದ್ಧ ಈಗಲೂ ಪಂಜು ಎತ್ತಿ ಹಿಡಿದಿರುವ ದೇಶ, ಜಾಗತೀಕರಣದ ಪ್ರವಚನದ ಡಂಭಾಚಾರ ಮತ್ತು ಕಪಟದ ವಿರುದ್ಧ ಅತ್ಯಂತ ಗಟ್ಟಿಯಾದ ದನಿ ಮತ್ತು ಒಂದು ಪರ್ಯಾಯ ಮಾರ್ಗಕ್ಕೆ ಬದ್ಧತೆಯ ಸಾಕಾರ ಮೂರ್ತಿ.

■ ಪ್ರೊ. ಪ್ರಭಾತ್ ಪಟ್ನಾಯಕ್

ಇತ್ತೀಚಿನ ದಿನಗಳಲ್ಲಿ ಸಿಪಿಐ(ಎಂ) ಪಕ್ಷ ಮತ್ತು ಚಳುವಳಿಗಳ ಕುರಿತು ಬಂಡವಾಳಶಾಹಿ ಪತ್ರಿಕೆ ಮತ್ತು ಟಿ.ವಿ. ಚಾನಲ್‌ಗಳಲ್ಲಿ ಅಪಪ್ರಚಾರಗಳು ವ್ಯಾಪಕಗೊಂಡಿದೆ. ಈ ಪ್ರವೃತ್ತಿಗೆ ಕಾರಣವೇನು?

ಪತ್ರಿಕೆ - ಮಾಧ್ಯಮಗಳ ಸ್ವರೂಪ ಮತ್ತು ಕಾರ್ಮಿಕ ವರ್ಗ

ಹಾಗೂ ಸಿಪಿಐ(ಎಂ) ಬಗೆಗಿನ ದೃಷ್ಟಿಕೋನ

ಜಿ.ಎನ್.ನಾಗರಾಜ್

ಲೋಕಸಭಾ ಚುನಾವಣೆಗಳ ಫಲಿತಾಂಶ ಹೊರಬಿದ್ದ ಮೇಲೆ ಎಡಪಕ್ಷಗಳ ಬಗ್ಗೆ ಅದರಲ್ಲಿಯೂ ಸಿಪಿಐ(ಎಂ) ಬಗ್ಗೆ ಯದ್ವಾತದ್ವಾ ಬರೆಯುವುದರಲ್ಲಿ ಅಥವಾ ಮಾತುಗಳನ್ನುದುರಿಸುವಲ್ಲಿ ಮಾಧ್ಯಮದವರು ಅಪಾರ ಸಂತೋಷವನ್ನು ಪಡೆಯುತ್ತಿದ್ದಾರೆ. ಸತ್ಯ ಸಂಗತಿ ಏನು ಎಂಬುದಕ್ಕೆ ಯಾವ ಬೆಲೆಯನ್ನೂ ನೀಡದೆ, ಪತ್ರಿಕಾ ಧರ್ಮವನ್ನು ಗಾಳಿಗೆ ತೂರಿ ಸುಳ್ಳು, ಕಟಕಿ, ವ್ಯಂಗ್ಯ, ಅಪಹಾಸ್ಯಗಳಿಗೆ ಕೈ ಹಾಕಿದ್ದಾರೆ. ಆ ಮೂಲಕ ತಮ್ಮ ನಿಜ ಸ್ವರೂಪವನ್ನು ತಾವೇ ಬಿಚ್ಚಿಡುತ್ತಿದ್ದಾರೆ. ಸಿಪಿಐ(ಎಂ) ಪಕ್ಷವನ್ನು, ಸದಸ್ಯರನ್ನು ಹತ್ತಿರದಿಂದ ಕಂಡವರು, ಅವರ ಪ್ರಾಮಾಣಿಕತೆ, ನಿಸ್ವಾರ್ಥ, ಸರಳ ಜೀವನ ಮತ್ತು ಶೋಷಣೆಯ ವಿರುದ್ಧ ರಾಜಿಯಿಲ್ಲದ ಹೋರಾಟವನ್ನು ಅರಿತವರಿಗೆ ಮಾಧ್ಯಮ ಹಾಗೂ ಪತ್ರಿಕೆಗಳು ಬಂಡವಾಳಶಾಹಿ ಪಟ್ಟಭದ್ರ ಹಿತಗಳ ವಾಹಕಗಳು ಎಂಬುದು ಹೆಚ್ಚು ಹೆಚ್ಚು ಮನದಟ್ಟಾಗುತ್ತಾ ಹೋಗುತ್ತದೆ. ಆದರೆ ಅದೇ ಸಮಯದಲ್ಲಿ ಸಿಪಿಐ(ಎಂ) ಬಗ್ಗೆ ಏನೂ ಗೊತ್ತಿಲ್ಲದವರಲ್ಲಿ, ಸಿಪಿಐ(ಎಂ)ನ ಹೋರಾಟಗಳ ಪರಿಚಯವಿಲ್ಲದ ಜನ ಸಮುದಾಯದಲ್ಲಿ ಸಿಪಿಐ(ಎಂ) ಬಗ್ಗೆ ತಪ್ಪು ಅಭಿಪ್ರಾಯ ಮೂಡಿಸುವಲ್ಲಿ ಯಶಸ್ವಿಯಾಗುತ್ತವೆ. ಕಮ್ಯೂನಿಸ್ಟ್ ಚಳುವಳಿಯ ಬೆಳವಣಿಗೆಗೆ ಮಾನಸಿಕ ಅಡ್ಡಿಗಳನ್ನು ಸೃಷ್ಟಿಸುತ್ತವೆ.



ಕೃಪೆ: ದಿ ಹಿಂದು

ಬಂಡವಾಳಶಾಹಿಗಳ ಗುರಿಯೂ ಅದೇ ಅಲ್ಲವೇ! ನಿರಂತರವಾಗಿ ದುಡಿಯುವ ಜನರನ್ನು ಶೋಷಣೆಗೆ ಗುರಿಪಡಿಸಿ ಅದಕ್ಕಾಗಿ ಸಮಾಜದ ಮೇಲೆ ಹಿಡಿತವನ್ನು ಸಾಧಿಸಲು ಪತ್ರಿಕೆ -ಮಾಧ್ಯಮಗಳನ್ನು ಒಂದು ಸಾಧನವಾಗಿ ಬಳಸಿಕೊಳ್ಳುವವರಿಗೆ ದುಡಿಯುವ ಜನರಲ್ಲಿ ಶೋಷಣೆಯ ವಿರುದ್ಧ ತೀವ್ರ ಹೋರಾಟಗಳನ್ನು ನಡೆಸುವ ಸಿಪಿಐ(ಎಂ) ಬಗ್ಗೆ ಅಸಹನೆ, ಕೋಪ, ಕ್ರೋಧಗಳಲ್ಲದೆ ಪ್ರೀತಿ, ಸಹಾನುಭೂತಿ ಇರಲು ಸಾಧ್ಯವೇ?

ಪತ್ರಿಕೆ -ಮಾಧ್ಯಮಗಳನ್ನು ನಿಯಂತ್ರಿಸುವುದರಲ್ಲಿ ಪ್ರತ್ಯಕ್ಷವಾಗಿ ಎರಡು ಅಂಶಗಳು ಪ್ರಧಾನ ಮಾಲೀಕತ್ವ ಮತ್ತು ಜಾಹೀರಾತುದಾರರು. ಪತ್ರಿಕೆ -ಮಾಧ್ಯಮಗಳನ್ನು ಆರಂಭಿಸುವುದಕ್ಕೆ, ನಡೆಸುವುದಕ್ಕೆ ಭಾರೀ ದೊಡ್ಡ ಪ್ರಮಾಣದ ಬಂಡವಾಳಗಳು ಬೇಕು. ಮುದ್ರಣಾಲಯ, ಪತ್ರಿಕೆಗಳ ಹಂಚಿಕೆಯ ವ್ಯವಸ್ಥೆ, ಮುದ್ರಣ ವೆಚ್ಚ, ಮುದ್ರಣ ಮತ್ತು ನಿರ್ವಹಣಾ ಸಿಬ್ಬಂದಿ, ಸುದ್ದಿ ಸಂಗ್ರಹ ಮತ್ತು ಪ್ರಕಟಣೆಗೆ ಸಿದ್ಧಪಡಿಸುವ ಸಂಪಾದಕೀಯ ವ್ಯವಸ್ಥೆ ಇತ್ಯಾದಿ. ಟಿ.ವಿ. ವಾಹಿನಿಗಳಿಗಂತೂ ಇನ್ನೂ ಹಲವು ಪಟ್ಟು ಬಂಡವಾಳಬೇಕು.

ಇದನ್ನು ಆರಂಭಿಸುವ ಬಂಡವಾಳ ಶಾಹಿಗಳು ಈಗಾಗಲೇ ಬೇರೆ ಉದ್ಯಮಗಳಿಂದ ಜನರನ್ನು ಶೋಷಣೆಗೆ ಗುರಿಪಡಿಸಿ ಬಂಡವಾಳವನ್ನು ಶೇಖರಿಸಿದವರು, ಅಥವಾ ಭಾರಿ ಆಸ್ತಿಯ ಆಧಾರದ ಮೇಲೆ ಬ್ಯಾಂಕ್ ಮತ್ತಿತರ ಮೂಲಗಳಿಂದ ಸಾಲ ಪಡೆಯುವ ಸಾಮರ್ಥ್ಯವಿದ್ದವರು. (ಸಣ್ಣಪ್ರಮಾಣದ ಬಂಡವಾಳವನ್ನು ಬೇಡುವ ಪ್ರಾದೇಶಿಕ ಪತ್ರಿಕೆಗಳು, ಕಿರುಪತ್ರಿಕೆಗಳು ಬೇರೆಯೇ. ಕಿರು ರೇಡಿಯೋ ವಾಹಿನಿಗಳು ಬೇರೆಯೇ) ಹೀಗಾಗಿ ಅವರ ಇತರೆ ಉದ್ಯಮ, ಆಸ್ತಿಗಳನ್ನು ಸಂರಕ್ಷಿಸಿಕೊಳ್ಳುವುದಕ್ಕಾಗಿ ಅಥವಾ ಬೆಳೆಸುವುದಕ್ಕಾಗಿಯೇ ಅವರ ಪತ್ರಿಕೆಗಳನ್ನು ಟಿ.ವಿ. ವಾಹಿನಿಗಳನ್ನು ಸ್ಥಾಪಿಸಿರುವುದು ಹೆಚ್ಚು ಸಂಭವನೀಯ. ಪತ್ರಿಕೆ -ಮಾಧ್ಯಮ ಎಂಬ ಉದ್ಯಮದ ಮೂಲಕವೇ ಲಾಭಗಳಿಸಬೇಕೆನ್ನುವ ಪತ್ರಿಕೋದ್ಯಮಿಗಳೂ ಇದ್ದಾರೆ. ಅವರಿಗೆ ಲಾಭವೇ ಮುಖ್ಯ. ಸತ್ಯವಲ್ಲ, ಪತ್ರಿಕಾ ಧರ್ಮವೂ ಅಲ್ಲ. ಹೆಚ್ಚು ಬಂಡವಾಳವಿಲ್ಲದೆ ಸದುದ್ದೇಶದಿಂದ ಸ್ಥಾಪಿಸಿದ ಪತ್ರಿಕೆಗಳೂ ಕೂಡ ಜನಪ್ರಿಯವಾದರೆ, ದೊಡ್ಡ ಬಂಡವಾಳವನ್ನು ಬೇಡುತ್ತವೆ. ಪತ್ರಿಕೆಯನ್ನೂ ದೊಡ್ಡ ಬಂಡವಾಳಗಾರನೊಬ್ಬ ಕೊಂಡು ವಶಪಡಿಸಿಕೊಳ್ಳುತ್ತಾನೆ ಅಥವಾ ಪತ್ರಿಕೆಯ ಮೂಲಕವೇ ದೊಡ್ಡ ಬಂಡವಾಳಗಾರನಾಗುತ್ತಾನೆ.

ಜಾಹೀರಾತುಗಾರರು

ಮಾಲೀಕರ ಜೊತೆಯಲ್ಲಿಯೇ ಪತ್ರಿಕೆಯನ್ನು/ ಟಿ.ವಿ.ವಾಹಿನಿಗಳನ್ನು ನಿಯಂತ್ರಿಸುವವರು ಜಾಹೀರಾತುದಾರರು. ಒಂದು ಪತ್ರಿಕೆಯ ವೆಚ್ಚದ ಶೇ.85ರಿಂದ 90 ಭಾಗ ಜಾಹೀರಾತುಗಳಿಂದಲೇ ಪೂರೈಸಲ್ಪಡುತ್ತದೆ. ಪತ್ರಿಕೆಗಳನ್ನು ಖರೀದಿಸುವವರು ನೀಡುವ ಹಣ ಕೇವಲ 10 -15 ಭಾಗ ಮಾತ್ರ. ಟಿ.ವಿ.ಛಾನೆಲ್‌ಗಳ ವಿಷಯದಲ್ಲಿ ಜಾಹೀರಾತುಗಳು ಮತ್ತಷ್ಟು ಹೆಚ್ಚು ಪ್ರಭಾವಶಾಲಿಗಳು. ಬಹಳ ಛಾನೆಲ್‌ಗಳು 'ಫ್ರಿ' ಛಾನೆಲ್‌ಗಳು. ಅವುಗಳಿಗಾಗಿ ಹಣವನ್ನು ನೀಡಲೇಬೇಕಾಗಿಲ್ಲ. ಕೆಲವು ಛಾನೆಲ್‌ಗಳು ಮಾತ್ರ ಪೇ ಛಾನೆಲ್‌ಗಳು. ಟಿ.ವಿ. ಛಾನೆಲ್ ಬಳಕೆ ಮಾಡುವವರಿಂದ ಹಣ ಪಡೆಯುವಂತಹವುಗಳು. ಬಳಕೆದಾರರಿಗೆ ಫ್ರೀ ಛಾನೆಲ್ ಎಂದರೆ ಬಹಳ ಸಂತೋಷ. ಆದರೆ ಫ್ರೀ ಛಾನಲ್ ಎಂದರೆ ಪೂರ್ಣವಾಗಿ ಜಾಹಿರಾತುದಾರರ ಮೇಲೆ ಅವಲಂಭಿಸಿರುವುದು ಎಂದರ್ಥ. ಇಂತಹ ಪರಿಸ್ಥಿತಿಯಲ್ಲಿ ಸ್ಥಾಪಿಸಲು ಅತಿ ಹೆಚ್ಚು ಹಣ ಬೇಡುವ, ನಡೆಸಲು ಪೂರ್ಣವಾಗಿ ಜಾಹೀರಾತುಗಳ ಮೇಲೆ ಅವಲಂಬಿಸುವ ಟಿ.ವಿ.ವಾಹಿನಿಗಳು ಜಾಹಿರಾತುಗಳ ಮೇಲೆ ಪತ್ರಿಕೆಗಳಿಗಿಂತ ಹೆಚ್ಚು ಪರಾವಲಂಬಿಗಳು.

ಜಾಹೀರಾತುಗಳ ಮೇಲೆ ಅವಲಂಬನೆ ಜನಸಾಮಾನ್ಯರ ಅರಿವಿಗೆ ಬರುವುದು ಟಿ.ವಿ. ಛಾನೆಲ್‌ಗಳಲ್ಲಿ ಸಿನಿಮಾ, ಧಾರಾವಾಹಿಗಳ ನಡುವೆ, ಕ್ರಿಕೆಟ್ ಮೊದಲಾದ ಆಟಗಳ ನಡುವೆ ವೀಕ್ಷಕರ ಆಸಕ್ತಿಗೆ ಅಡ್ಡಗಾಲಾಗಿ, ಪದೇ ಪದೇ ಬರುವ ಜಾಹೀರಾತುಗಳಿಂದ. ಆದರೆ ಜಾಹೀರಾತುದಾರರು, ಪ್ರಾಯೋಜಕರುಗಳು, ಪತ್ರಿಕೆಗಳ/ ಟಿ.ವಿ.ಛಾನೆಲ್‌ಗಳ ಕಾರ್ಯಕ್ರಮಗಳು, ಸುದ್ದಿಗಳ ಸ್ವರೂಪವನ್ನೇ ನಿಯಂತ್ರಿಸುತ್ತಾರೆ ಎಂಬುದು ಸಾಮಾನ್ಯವಾಗಿ ಅರಿವಿಗೆ ಬರುವುದಿಲ್ಲ.

ಜಾಹೀರಾತುದಾರರಲ್ಲಿಯೂ ವಿವಿಧ ಪ್ರಬೇಧಗಳಿವೆ. ಬಹುರಾಷ್ಟ್ರೀಯ ಕಂಪನಿಗಳು ಅತಿ ದೊಡ್ಡ ಪ್ರಮಾಣದ ಜಾಹೀರಾತುಗಳನ್ನು ನೀಡುವಂತಹವು. ಅವರಿಗೆ ಭಾರತ ದೇಶ, ಭಾರತ ದೇಶದ ಸಾಮಾನ್ಯ ಜನತೆ, ಇಲ್ಲಿಯ ಭಾಷೆ, ಸಂಸ್ಕೃತಿ ಮುಖ್ಯವಲ್ಲ. ತಮ್ಮ ಉತ್ಪಾದನೆಗಳ ಬಳಕೆದಾರರು ಅವರನ್ನು ಸೆಳೆಯುವುದು. ತಮ್ಮ ಲಾಭವನ್ನು ಹೆಚ್ಚಿಸಿಕೊಳ್ಳುವುದು ಮಾತ್ರ ಮುಖ್ಯ. ಆದ್ದರಿಂದ ಯಾವ ಪತ್ರಿಕೆಗಳು/ಟಿ.ವಿ. ಛಾನೆಲ್‌ಗಳು ತಮ್ಮ ಸುದ್ದಿ ಲೇಖನಗಳು ಧಾರಾವಾಹಿಗಳಲ್ಲಿ ತಮ್ಮ ಹಿತಗ ವಿರುದ್ಧವಾದ ವಿಷಯಗಳನ್ನು ಪ್ರಸಾ ಮಾಡುತ್ತಾರೋ ಅವುಗಳಿಗೆ ಜಾಹೀರಾತು ಕ ಮಾಡುತ್ತಾರೆ. ಒಂದೊಂದು ಕಂಪನಿ ಅಥ ಗುಂಪಿನ ಜಾಹೀರಾತುಗಳೇ ಕೋಟಿಗಟ್ ನೂರಾರು ಕೋಟಿಗಟ್ಟಲೇ ಬೆಲೆಯುಳ್ಳವುಗಳ ಸಂದರ್ಭದಲ್ಲಿ ಇಡೀ ಪತ್ರಿಕೆ/ಟಿ.ವಿ. ಛಾನೆಲ್ ಅ ನಷ್ಟಕ್ಕೆ ದೂಡುವ, ಮುಳುಗಿಸಿಯೇ ಬಿಡು ಸಾಮರ್ಥ್ಯ ಲಭಿಸುತ್ತದೆ.

ಹಾಗೆಯೇ ನಮ್ಮ ದೇಶದ ಆದರೆ ಅತಿ ದೊ ಕಂಪನಿಗಳು ಕೂಡ ವಿವಿಧ ಪ್ರದೇಶಗಳು ಅಲ್ಲಿ ವೈವಿಧ್ಯತೆಗಳಿಗೆ ವಿರುದ್ಧವಾಗಿ ದೇಶಕ್ಕೆಲ್ಲಾ ಒಂ ಮಂತ್ರವನ್ನು ಪ್ರಯೋಗಿಸುವುದರಲ್ಲಿಯೆ ಆಸಕ್ತರಾಗಿರುತ್ತಾರೆ. ಪ್ರಾದೇಶಿಕ, ಭಾಷಾ, ಸಂಸ್ಕೃ ಧರ್ಮಗಳ ವೈವಿಧ್ಯತೆಗಳು ಅವರ ವಸ್ತುಗ ಮಾರಾಟಕ್ಕೆ, ಅದರಿಂದ ಸಿಗುವ ಲಾಭಕ್ಕೆ ಪ್ರತಿಕೂ ಎಂದು ಅವರ ಭಾವನೆ.

ಜಾಗತೀಕರಣದ ಖಾಸಗೀಕರಣದ ತುತ್ತೂರಿಗಳು

ಇಂತಹ ಸನ್ನಿವೇಶದಲ್ಲಿಯೇ ನಮ್ಮ ಬಹುಪಾಲು ಟಿ.ವಿ.ಛಾನೆಲ್‌ಗಳು ಹಾಗ ಪತ್ರಿಕೆಗಳು ಜಾಗತೀಕರಣದ ಖಾಸಗೀಕರಣದ ತುತ್ತೂರಿಗಳಾಗಿರುವುದ ಜಾಗತೀಕರಣದ ಪರವಾಗಿ ಅತಿ ದೊಡ್ಡದನಿಯ ಕೂಗಾಡಿದಷ್ಟೂ, ವರದಿ-ಲೇಖನಗಳನ ಪ್ರಕಟಿಸಿದಷ್ಟೂ ಈ ಜಾಹೀರಾತುದಾರರಿ ಪ್ರಿಯವಾಗುತ್ತದೆ. ಜಾಗತೀಕರಣ, ಖಾಸಗೀಕರ ವಿರೋಧಿಯಾದ ಯಾವುದೇ ಸುದ್ದಿಯನ ತುಳಿದುಹಾಕುತ್ತವೆ. ರೈತರ ಆತ್ಮಹತ್ಯೆ, ಚಳುವಳಿಗಳ ಕಾರ್ಮಿಕರನ್ನು ಕೆಲಸದಿಂದ ಕಿತ್ತು ಹಾಕುವುದು, ಅವ ಮುಷ್ಕರಗಳು, ಯುವಜನರು, ವಿದ್ಯಾರ್ಥಿಗ ನಿರುದ್ಯೋಗ ಸಮಸ್ಯೆಗಳು, ದಲಿತರು ಮಹಿಳೆಯರು ಅಲ್ಪಸಂಖ್ಯಾತರು ಇವರ ಮೇಲಿನ ದೌರ್ಜನ್ಯಗಳ ಅವರಿಗೆ ಮುಖ್ಯವಾಗುವುದಿಲ್ಲ. ಇವುಗಳಲ್ಲಿ ಪ್ರಸಾರವನ್ನು ಉಳಿಸಿಕೊಳ್ಳುವ ದೃಷ್ಟಿಯಿಂ ಪ್ರಕಟಿಸಿದರೂ ಬಹಳಷ್ಟು ಮೂಲೆಗೆ ತಳ್ಳಲ್ಪಡು

ಪತ್ರಿಕೆ - ಟಿ.ವಿ. ಗಳು ಪಕ್ಷಪಾತರಹಿತ ಮಾಧ್ಯಮಗಳೇ?

ರಾಜಕೀಯ ಪಕ್ಷಗಳು ಅಥವಾ ರಾಜಕೀಯ ಪಕ್ಷಗಳ ನಾಯಕರು ನಡೆಸುವ ಪತ್ರಿಕೆ/ ಟಿ.ವಿ ಛಾನೆಲ್‌ಗಳು ಇವೆ. ಆದರೆ ರಾಜಕೀಯ ಪಕ್ಷಗ ಅಥವಾ ಅದರ ನಾಯಕರ ಮಾಲೀಕತ್ವದ ಪ್ರತಿ ಛಾನೆಲ್‌ಗಳು ಮಾತ್ರ ಆಯಾಪಕ್ಷಗಳ ಬಗ್ಗೆ ಪಕ್ಷಪಾ ಉಳ್ಳವು ಉಳಿದ ಪತ್ರಿಕೆ/ಛಾನೆಲ್‌ಗಳ ಪಕ್ಷಪಾತರಹಿತ, ಸತ್ಯವನ್ನೇ ಹೇಳುವ ತಟಸ ಧೋರಣೆಯ ಪತ್ರಿಕೆ/ಟಿ.ವಿ.ಛಾನೆಲ್‌ಗಳು ಎನ್ನು ಘೋಷಣೆಯನ್ನು ಮಾಡುತ್ತವೆ ಅಥವಾ ವೇಷವನ ತೊಡುತ್ತವೆ. ಆದರೆ ಈ ಬಹಳಷ್ಟು ಛಾನೆಲ್‌ಗಳ ಬಂಡವಾಳಶಾಹಿಗಳ ಮುಖವಾಣಿಗಳೇ. ಅವುಗಳ ತಟಸ್ಥ ಧೋರಣೆಯೆಂಬುದು ಕೇವಲ ವಿವಿಧ ಬಂಡವಾಳಶಾಹಿ ಪಕ್ಷಗಳ ನಡುವೆ ನಾವು ಬೇಧ ಮಾಡುವುದಿಲ್ಲ. ನಿರ್ದಿಷ್ಟ ಪಕ್ಷದ ಮುಖವಾಣಿಯ ಎಂಬುದಷ್ಟೇ. ಆದರೆ ಬಹಳಷ್ಟು ಪತ್ರಿಕೆ ಜನಸಾಮಾನ್ಯರ ಹಿತಗಳಿಗೆ ವಿರುದ್ಧವಾದ ಶೋಷಿತ

→

ಪತ್ರಿಕೆಗಳು - ಟಿ.ವಿ. ವಾಹಿನಿಗಳು ಮತ್ತು ಸಿಪಿಐ(ಎಂ) ಬಗ್ಗೆ ಅಪಪ್ರಚಾರ

ಬಹುತೇಕ ಪತ್ರಿಕೆ ಹಾಗೂ ಟಿ.ವಿ.ವಾಹಿನಿಗಳ ಬಂಡವಾಳಶಾಹಿ ಸ್ವರೂಪದ ಬಗ್ಗೆ ಪ್ರಧಾನ ಲೇಖನದಲ್ಲಿ ವಿಶ್ಲೇಷಿಸಲಾಗಿದೆ.

ಕಾರ್ಮಿಕರ, ರೈತಾಪಿ ಮತ್ತಿತರೆ ದುಡಿಯುವ ಜನ ವಿಭಾಗಗಳು ಎಚ್ಚರಗೊಳ್ಳುವ ಸಂಘಟಿತರಾಗುವ, ತಮ್ಮ ಶೋಷಣೆಯ ವಿರುದ್ಧ ತಮ್ಮ ಬದುಕು ಹಾಗೂ ಬೆಳವಣಿಗೆಗಾಗಿ ಹೋರಾಟ ನಡೆಸುವ, ಆ ಮೂಲಕ ತಮ್ಮ ಪರಿಸ್ಥಿತಿಯನ್ನು ಸುಧಾರಿಸಿಕೊಳ್ಳುವ ಯಾವುದೇ ಚಟುವಟಿಕೆ ಬಂಡವಾಳಶಾಹಿ ಮತ್ತು ಪಾಳೆಯಗಾರಿ ವರ್ಗಗಳ ಲಾಭಕ್ಕೆ, ಶ್ರೀಮಂತಿಕೆಗೆ ಮೃತ್ಯು. ಹಾಗಿರುವಲ್ಲಿ ಕಾರ್ಮಿಕ ವರ್ಗದ ರೈತಾಪಿ ಜನತೆಯ ಚಳುವಳಿಗಳು, ಚಟುವಟಿಕೆಗಳಿಗೆ, ವಿಚಾರ, ಸಿದ್ದಾಂತಗಳಿಗೆ ತಮ್ಮ ಒಡೆತನದ ಪತ್ರಿಕೆ-ಟಿ.ವಿ.ಗಳಲ್ಲಿ ಪ್ರಚಾರ ನೀಡುವುದು ತಮ್ಮ ಬುಡಕ್ಕೆ ಕೊಡಲು ಪೆಟ್ಟು ಎಂಬುದ ಅವರ ಚಿಂತನೆ. ಹೀಗಾಗಿ ಪತ್ರಿಕೆ -ಟಿ.ವಿ.ಗಳಲ್ಲಿ ಹತ್ತಾರು ಸಾವಿರ ದುಡಿಯುವ ಜನರ ಸಭೆ, ಚಳುವಳಿಗಳೂ ಪ್ರಚಾರ ಪಡೆಯುವುದಿಲ್ಲ ಅಥವಾ ಒಂದು ಮೂಲೆಯಲ್ಲಿ ಕಾಣಿಸಿಕೊಳ್ಳುತ್ತವೆ. ಅದೇ ಸಮಯದಲ್ಲಿ ಕೇವಲ ಹತ್ತಿಪ್ಪತ್ತು ಜನ ಅಥವಾ ನೂರು ಜನರು ಪಂಚತಾರಾ ಹೋಟೆಲ್‌ಗಳಲ್ಲಿ ನಡೆಸುವ, ಚರ್ಚೆಗಳು, ಹತ್ತಿಪ್ಪತ್ತು ಜನ ಆಳುವ ಪಕ್ಷಗಳ ನಾಯಕರು ನಡೆಸುವ 'ಆಟಗಳು' ಪತ್ರಿಕೆಗಳ ತುಂಬಾ ವ್ಯಾಪಿಸಿರುತ್ತವೆ ಎಂಬುದು ಎಲ್ಲಾ ಚಳುವಳಿಕಾರರ ಅನುಭವ. ಈ ಚಳುವಳಿಗಳ ಬಗ್ಗೆ ಕೆಟ್ಟ ಅಭಿಪ್ರಾಯವನ್ನು ಮೂಡಿಸುವ ಕೆಲಸವೂ ಯಥೇಚ್ಛವಾಗಿ ನಡೆಯುತ್ತದೆ.

ಕಾರ್ಮಿಕ ವರ್ಗದ ಪಕ್ಷವಾಗಿ, ಖಾಸಗಿ ಬಂಡವಾಳಶಾಹಿಗಳಿರಲಿ, ಬುದ್ಧಿಜೀವಿ ಗಳಿರಲಿ ಬಂಡವಾಳಶಾಹಿ ಪಾಳೆಯಗಾರಿ ಸಂಸ್ಥೆಗಳಿರಲಿ, ರಾಜಕೀಯ ಪಕ್ಷಗಳಿರಲಿ, ಅವರ ನಿಯಂತ್ರಣದ ಸರ್ಕಾರಗಳಿರಲಿ, ನಿರಂತರವಾಗಿ ಬಂಡವಾಳಶಾಹಿ ವರ್ಗದ ಎಲ್ಲ ಜನ ವಿರೋಧಿ ಚಟುವಟಿಕೆಗಳು, ಹುನ್ನಾರಗಳನ್ನು ತನ್ನ ಹರಿತ ವೈಚಾರಿಕ ಶಕ್ತಿಯಿಂದ ಬಯಲಿಗೆಳೆಯುತ್ತಾ, ಸಂಘಟನಾ ಶಕ್ತಿಯಿಂದ ವಿರೋಧಿಸುತ್ತಾ ಜನರಲ್ಲಿ ಎಚ್ಚರ ಮೂಡಿಸುವತ್ತಾ, ಸಂಘಟನಾ ಶಕ್ತಿಯಿಂದ ವಿರೋಧಿಸುತ್ತಾ, ಜನರಲ್ಲಿ ಎಚ್ಚರ ಮೂಡಿಸುತ್ತಾ ಬರುತ್ತಿರುವ ಸಿಪಿಐ(ಎಂ) ಅನ್ನು ಪತ್ರಿಕಾ-ಟಿವಿಗಳು ಮೆಚ್ಚಲು ಸಾಧ್ಯವೇ? ಪತ್ರಿಕೆ-ಟಿ.ವಿ.ಗಳ ಬಗ್ಗೆ ಜನರಲ್ಲಿ ನೆಚ್ಚಿಗೆ ನಂಬಿಕೆಯನ್ನು ಮೂಡಿಸಲು ಎಷ್ಟು ಬೇಕೋ ಅಷ್ಟು ಮಾತ್ರ ಪ್ರಚಾರ ನೀಡಿ ಅದರ ಪ್ರಭಾವವನ್ನು ತಗ್ಗಿಸಲು ಅಪಪ್ರಚಾರ, ಸುಳ್ಳುಗಳು, ಅಪಹಾಸ್ಯ, ವ್ಯಂಗ್ಯಗಳ ಸುರಿಮಳೆಯನ್ನು ಯಥೇಚ್ಛವಾಗಿ ಕಾಣುತ್ತೇವೆ. ಸಿಪಿಐ(ಎಂ) ಪಕ್ಷವನ್ನು ಹಾಗೂ ಎಡಪಕ್ಷಗಳನ್ನು ಟೀಕಿಸಿದಷ್ಟೂ, ವ್ಯಂಗಕ್ಕೆ ಗುರಿ ಮಾಡಿದಷ್ಟೂ, ಅಪಹಾಸ್ಯ ಮಾಡಿದಷ್ಟೂ ಪತ್ರಿಕೆ-ಟಿ.ವಿ.ಗಳಿಗೆ ಬಂಡವಾಳಶಾಹಿ ವರ್ಗ ಬೆನ್ನತಟ್ಟಿ ಹುರಿದುಂಬಿಸುತ್ತದೆ. ಅದನ್ನು ಕಾರ್ಯತಃ ತೋರಿಸಲು ಜಾಹೀರಾತುಗಳ ಸುರಿಮಳೆಗೈಯುತ್ತಾರೆ. ಹೀಗಾಗಿ ಸಿಪಿಐ(ಎಂ) ಬಗ್ಗೆ ನಿರಂತರ ಅಪಪ್ರಚಾರ. ಬ್ಯಾಂಕ್‌ಗಳ ಹಾಗೂ ವಿಮಾ ಕಂಪನಿಗಳ ಖಾಸಗೀಕರಣಗಳನ್ನು ಆ ಮೂಲಕ ಹತ್ತಾರ ಲಕ್ಷ ಕೋಟಿ ರೂ.ಗಳ ಮೇಲೆ ವಿದೇಶಿ ಬಂಡವಾಳಿಗರು ಹಿಡಿತಸಾಧಿಸುವುದನ್ನು ಅಸಾಧ್ಯ ಮಾಡಿದ ಸಿಪಿಐ(ಎಂ) ಅನ್ನೂ, ಇಂತಹ ಅನೇಕ ಕ್ರಮಗಳನ್ನು ವಿರೋಧಿಸಿ, ಕೈಗೆ ಬಂದ ತುತ್ತು ಬಾಯಿಗಿಲ್ಲ ಎನ್ನುವಂತೆ ಮಾಡಿದ್ದನ್ನು ಅವರು ಸಹಿಸಲು ಸಾಧ್ಯವೇ?

ಸಿಪಿಐ(ಎಂ) ವಿರುದ್ಧ ಅಪಪ್ರಚಾರ ಮುಗಿಲು ಮುಟ್ಟಿದ್ದು ಅಮೇರಿಕಾದ ಜಗತ್ತಿನ ಅತಿದೊಡ್ಡ ಬಂಡವಾಳಶಾಹಿಗಳ ಹಿಡಿತಕ್ಕೆ ಭಾರತದ ಸಂಪತ್ತು ಸಿಲುಕುವುದನ್ನು ತಪ್ಪಿಸಲು ಯುಪಿಎ ಸರ್ಕಾರಕ್ಕೆ ಬೆಂಬಲ ವಾಪಸ್ ಪಡೆದ ಸಂದರ್ಭದಲ್ಲಿ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳೋಣ.

ಪಶ್ಚಿಮಬಂಗಾಳ, ಕೇರಳಗಳಲ್ಲಿ ಕರ್ನಾಟಕದಲ್ಲಿ, ಅಂತೆಯೇ ಇತರ ರಾಜ್ಯಗಳಲ್ಲಿ, ಸಿಪಿಐ(ಎಂ) ಇನ್ನೂ ದುರ್ಬಲವಾಗಿರುವ ಕಡೆ ಕಾರ್ಮಿಕ ವರ್ಗಕ್ಕೆ ಚಳುವಳಿಗಳಿಗೆ ಸಿಪಿಐ(ಎಂ) ಪಕ್ಷಕ್ಕೆ ಅಷ್ಟಿಷ್ಟು

ಪುಟ 15 ಕ್ಕೆ

→ ವರ್ಗಗಳ ಹಿತದ ಪ್ರತಿಪಾದನೆ ಮಾಡುವಂತಹ ಜನಸಾಮಾನ್ಯರ ಪ್ರಶ್ನೆ, ಸಮಸ್ಯೆ, ಅಭಿಪ್ರಾಯಗಳಿಗೆ ಅವುಗಳಲ್ಲಿ ಮನ್ನಣೆಯೇ ಸಿಗುವುದಿಲ್ಲ ಎಂದೇನಲ್ಲ. ಈ ಪತ್ರಿಕೆ/ಟಿ.ವಿ. ಛಾನೆಲ್‌ಗಳಿಗೆ ಪ್ರಸಾರವೂ ಅಥವಾ ವೀಕ್ಷಕರೂ ಮುಖ್ಯವಾದದ್ದರಿಂದ ಓದುಗ ವೀಕ್ಷಕರನ್ನು ಗಳಿಸುವಷ್ಟರ ಮಟ್ಟಿಗೆ ಮಾತ್ರ ಜನಸಾಮಾನ್ಯರ ಬಗ್ಗೆ ಆಸಕ್ತಿ. ಅವುಗಳಲ್ಲಿಯೂ ಕೂಡ ಬಹಳಷ್ಟನ್ನು ತಿರುಚಿ, ಜನಸಾಮಾನ್ಯರ ಚಿಂತನೆಯನ್ನು ದಿಕ್ಕುಗೆಡಿಸುವುದೇ ಗುರಿ. ಹೀಗಾಗಿ ಅರ್ಧಸತ್ಯಗಳು, ಪೂರ್ಣ ಸುಳ್ಳುಗಳು ಈ ಪತ್ರಿಕೆ ಮಾಧ್ಯಮಗಳ ಊಟ ಮತ್ತು ...ನ್‌ಗಳು.

ಹೀಗೆಂದ ಮಾತ್ರಕ್ಕೆ ಎಲ್ಲಾ ಪತ್ರಿಕೆ/ಟಿವಿಗಳನ್ನು ಒಂದೇ ತಕ್ಕಡಿಗೆ ಹಾಕಬೇಕಂದಲ್ಲ. ಇವೆಲ್ಲವೂ ಬಹುವಾಗಿ ಬಂಡವಾಳಶಾಹಿ ಹಿಡಿತಕ್ಕೆ ಸಿಲುಕಿರುವುದೇ ಎಂದರೂ ಅವುಗಳಲ್ಲಿ ವ್ಯತ್ಯಾಸಗಳಿವೆ. ಬಹುರಾಷ್ಟ್ರೀಯ ಕಂಪನಿಗಳೇ ನಡೆಸುವ ಟಿ.ವಿ.ಗಳು, ಬಹುರಾಷ್ಟ್ರೀಯ ಮತ್ತು ದೇಶೀಯ ಕಂಪನಿಗಳ ಜಂಟಿ ಸಹಯೋಗದ ಟಿ.ವಿಗಳು, ಪತ್ರಿಕೆಗಳು, ದೇಶದ ಅತಿದೊಡ್ಡ ಕಂಪನಿಗಳು ನಡೆಸುವ ಪತ್ರಿಕೆ/ಟಿ.ವಿ. ಛಾನೆಲ್‌ಗಳು, ಪ್ರಾದೇಶಿಕ ಬಂಡವಾಳಶಾಹಿಗಳು, ಕಂಪನಿಗಳು ನಡೆಸುವ ಛಾನೆಲ್‌ಗಳು ಎನ್ನುವ ಮುಖ್ಯ ವಿಭಾಗಗಳಿವೆ.

ಬಂಡವಾಳಶಾಹಿ ಮತ್ತು ಪಾಳೆಗಾರಿ ಸಮಾಜದ ಪ್ರಭಾವ

ಇಲ್ಲಿಯವರೆಗೆ ಚರ್ಚಿಸಿದ ಮಾಲೀಕತ್ವ ಮತ್ತು ಜಾಹೀರಾತುದಾರರ ನೇರ ಹಿಡಿತಗಳ ಜೊತೆಯಲ್ಲಿಯೇ ಮತ್ತೊಂದು ಪ್ರಮುಖ ಅಂಶವನ್ನು ಪರಿಗಣಿಸಬೇಕಾಗುತ್ತದೆ. ಪತ್ರಿಕೆ-ಟಿ.ವಿ ಎಂಬ ಬಂಡವಾಳಶಾಹಿ ಉದ್ಯಮ ತಮ್ಮ ವ್ಯವಹಾರವನ್ನು ನಡೆಸುತ್ತಿರುವುದು ಬಂಡವಾಳಶಾಹಿ - ಪಾಳೆಯಗಾರಿ ವರ್ಗಗಳ ಹಿಡಿತದಲ್ಲಿರುವ ಸಮಾಜದಲ್ಲಿ. ಹೀಗಾಗಿ ಮಾಲೀಕರಿಂದ ಹಿಡಿದು ಸಂಪಾದಕೀಯ ವಿಭಾಗದ ವಿವಿಧ ಹಂತಗಳು ಹಾಗೂ ವರದಿಗಾರರವರೆಗೂ ಜೀವಿಸುತ್ತಿರುವುದು ಬಂಡವಾಳಶಾಹಿ ಹಾಗೂ ಪಾಳೆಯಗಾರಿ ಮೌಲ್ಯಗಳು ಪ್ರಧಾನವಾಗಿರುವ ಸಮಾಜದಲ್ಲಿ. ಈ ಮೌಲ್ಯಗಳು, ಶಿಕ್ಷಣ ವ್ಯವಸ್ಥೆಯ ಮೂಲಕ ರಾಜಕೀಯ ವ್ಯವಸ್ಥೆಯ ಮೂಲಕ, ಸಿನೆಮಾ, ಸಾಹಿತ್ಯ, ಸಂಸ್ಕೃತಿಯ ಮೂಲಕ, ಸಮಾಜದಲ್ಲಿ ಹಬ್ಬಿರುವ ಅಭಿಪ್ರಾಯ, ಚಿಂತನೆಗಳ ಮೂಲಕ, ವಿದೇಶಿ ಪ್ರಭಾವಗಳ ಮೂಲಕ, ಜಾತಿ, ಧರ್ಮ, ಮಠಗಳೆಂಬ ಸಂಸ್ಥೆಗಳ ಮೂಲಕ ವರದಿಗಾರರು ಲೇಖನಗಳನ್ನು ಬರೆಯುವ, ಸಂಪಾದಕೀಯ ಸಿಬ್ಬಂದಿ ಹಾಗೂ ಮಾಲೀಕರೆನ್ನು ವ್ಯಾಪಿಸಿವೆ. ಜನಸಾಮಾನ್ಯರ ಜೀವನ, ಅವರ ಸಮಸ್ಯೆಗಳು, ಸಂಘರ್ಷಗಳು, ಚಳುವಳಿಗಳು, ಅದರಿಂದ ಹುಟ್ಟಿದ ಚಿಂತನೆ, ವಾದ, ಸಿದ್ಧಾಂತಗಳು ವರದಿಗಾರರು ಸಂಪಾದಕೀಯ ಸಿಬ್ಬಂದಿಯ ಮೇಲೆ ಪ್ರಭಾವ ಬೀರಿರಬಹುದು ಮತ್ತು ಆ ಮೂಲಕ ಆಳುವ ವರ್ಗದ ಸಿದ್ಧಾಂತ ಮತ್ತು ದುಡಿಯುವ ವರ್ಗದ ಸಿದ್ಧಾಂತಗಳ ನಡುವೆ ಸಂಘರ್ಷ ಪತ್ರಿಕೆ/ಟಿ.ವಿ.ಗಳಲ್ಲಿ ಬಿಂಬಿಸಲ್ಪಟ್ಟಿರಬಹುದು. ಆದರೂ ಸಮಾಜದ ಎಲ್ಲೆಡೆಯಲ್ಲಿಯೂ ವ್ಯಾಪಿಸಿರುವ ಬಂಡವಾಳಶಾಹಿ, ಪಾಳೆಯಗಾರಿ ಸಿದ್ಧಾಂತದ ಹಿಡಿತವೇ ಪ್ರಧಾನವಾದದ್ದು. ವರದಿಗಾರರು, ಸಂಪಾದಕರುಗಳು ತಮಗೆ ಅರಿವಿಲ್ಲದೇ, ಕೆಲವೊಮ್ಮೆ ತಮ್ಮನ್ನು ತಾವು ಜನಪರ ಎಂದು ಕರೆದುಕೊಳ್ಳುತ್ತಲೇ, ಬಂಡವಾಳಶಾಹಿ ಪಾಳೆಯಗಾರಿ ಚಿಂತನೆಗಳ ಪ್ರಸಾರಕರಾಗಿರುತ್ತಾರೆ.

ಪ್ರಭುತ್ವ ಶಕ್ತಿಯ ಪ್ರಯೋಗ

ಈ ಎಲ್ಲಕ್ಕೂ ಮೇಲೆ ಬಂಡವಾಳಶಾಹಿ, ಪಾಳೆಯಗಾರಿ ವರ್ಗಗಳ ಹಿಡಿತದಲ್ಲಿರುವ ಪ್ರಭುತ್ವವೂ ಪರೋಕ್ಷ ಪ್ರಭಾವವನ್ನು ಬೀರುತ್ತಿರುತ್ತದೆ ಮತ್ತು ನಿಯಂತ್ರಣವನ್ನು ಸ್ಥಾಪಿಸುತ್ತಿರುತ್ತದೆ. ಮಾಲೀಕರು, ಸಂಪಾದಕರು, ವರದಿಗಾರರು ಇವರುಗಳಿಗೆ ಹಲವಾರು ಕಾಯಿದೆಬದ್ಧ ಹಾಗೂ ವಿರೋಧವಾದ ಅನುಕೂಲಗಳನ್ನು ಕಲ್ಪಿಸಿ ಆಸೆಗಳನ್ನು ತೋರಿಸಿ ಅವರನ್ನು ಭ್ರಷ್ಟಗೊಳಿಸುವುದು ಒಂದು ವಿಧಾನ. ಮಾಲೀಕ, ಸಂಪಾದಕೀಯ ಸಿಬ್ಬಂದಿಗಳನ್ನು ಕೈಗಾರಿಕಾ, ವಾಣಿಜ್ಯ, ಮ್ಯಾನೇಜ್‌ಮೆಂಟ್ ಸಂಸ್ಥೆಗಳು, ರೋಟರಿ, ಲಯನ್ಸ್ ಕ್ಲಬ್‌ಗಳು, ಇತರ ಅನೇಕ ಕ್ಲಬ್‌ಗಳು, ಗೋಷ್ಠಿಗಳು, ಕೂಟಗಳು, ಸಂಘಗಳು, ಸಂಸ್ಥೆಗಳು ಇವುಗಳಲ್ಲಿ ಒಳಗೊಳಿಸಿ ನಿರಂತರವಾಗಿ ಅವರನ್ನು ಪ್ರಭಾವಿಸುತ್ತಿರುತ್ತವೆ.

ಪ್ರಭುತ್ವವು ಕಾನೂನು, ನಿಯಮಗಳ ಬಲದಿಂದ ಪ್ರಭುತ್ವಶಕ್ತಿಯ ಪ್ರಯೋಗದಿಂದ ಪೋಲೀಸು, ಕಂದಾಯ ಅಧಿಕಾರಿಗಳು, ತೆರಿಗೆ ಅಧಿಕಾರಿಗಳು ಮತ್ತಿತರ ಬಲದಿಂದ ವೈಯಕ್ತಿಕವಾಗಿ ಅಥವಾ ಇಡೀ ಪತ್ರಿಕಾ/ಟಿ.ವಿ. ಛಾನೆಲ್‌ಗಳ ಸಮೂಹವನ್ನೇ ಹಿಡಿತದಲ್ಲಿಡುತ್ತದೆ. ಬೆದರಿಸುತ್ತದೆ. ಆ ಮೂಲಕ ಒಂದು ಮಿತಿಯನ್ನು ಮೀರದಂತೆ ಲಕ್ಷ್ಮಣರೇಖೆ ಹಾಕುತ್ತದೆ.

ಹೀಗೆ ಪತ್ರಿಕೆ/ಟಿ.ವಿ. ಲೋಕದ ಸ್ವರೂಪ, ಅವುಗಳ ಮೇಲಿನ ನಿಯಂತ್ರಣ ಮತ್ತು ಅವುಗಳ ಜೀವವಾದ ಸಿಬ್ಬಂದಿಗಳ ಮೇಲಿನ ಪ್ರಭಾವಗಳನ್ನು ವಾಸ್ತವಿಕವಾಗಿ ಅಭ್ಯಸಿಸಿದರೆ ಮಾತ್ರ ಅವುಗಳಲ್ಲಿ ಬರುವ ಸುದ್ದಿ, ಮಾಹಿತಿ, ವಿಶ್ಲೇಷಣೆಗಳನ್ನು ನಾವು ಸರಿಯಾಗಿ ಅರ್ಥ ಮಾಡಿಕೊಳ್ಳಬಹುದು.

ಹೀಗೆ ಪತ್ರಿಕೆ/ಟಿ.ವಿ.ಗಳಲ್ಲಿ ಬರುವುದೆಲ್ಲವೂ ಸತ್ಯವಲ್ಲ. ಹಾಗೆಯೇ ಬರುವುದೆಲ್ಲವನ್ನೂ ನಿರಾಕರಿಸಲೂಬಾರದು. ಪ್ರತಿಯೊಂದನ್ನು ಅಳೆದು, ತೂಗಿ ಅರ್ಥ ಮಾಡಿಕೊಳ್ಳಬೇಕು. ಅದಕ್ಕೆ ಬೇಕಾದ ಈ ಸುದ್ದಿ ಮಾಹಿತಿ, ಅಭಿಪ್ರಾಯ ವಿಶ್ಲೇಷಣೆಗಳನ್ನು ಬಗೆದುನೋಡಿ ನಿಜವನ್ನು ಅರ್ಥ ಮಾಡಿಕೊಳ್ಳುವ ಹರಿತವಾದ ಚಿಂತನೆಯನ್ನು ಬೆಳೆಸಿಕೊಳ್ಳಬೇಕು.

ಪತ್ರಿಕೆ ಟಿ.ವಿಗಳಲ್ಲಿ ಬೇಧಗಳು

ಈ ಬಂಡವಾಳಶಾಹಿ ವಿಭಾಗಗಳಿಗೆ ತಕ್ಕಂತೆ ಆಯಾ ಮಾಲೀಕತ್ವದ ಟಿ.ವಿ. ಛಾನೆಲ್‌ಗಳ/ಪತ್ರಿಕೆಗಳ ವರ್ತನೆ ದೃಷ್ಟಿಕೋನಗಳಿರುತ್ತವೆ. ಉದಾಹರಣೆಗೆ ಸಿಎನ್‌ಎನ್, ಐಬಿಎನ್, ಸ್ಟಾರ್, ಸೋನಿ ಇತ್ಯಾದಿ ಅಮೇರಿಕಾ, ಜಪಾನ್, ಯುರೋಪ್ ಮೂಲದ ಭಾರತದ ಟಿ.ವಿ. ಛಾನೆಲ್‌ಗಳು ಭಾರತದ ಸಮಸ್ಯೆಗಳನ್ನು ನೋಡುವ ರೀತಿಯಲ್ಲಿಯೂ ಭಾರತದ್ದೇ ಆದ ಆದರೆ ಬಹುರಾಷ್ಟ್ರೀಯ ಕಂಪನಿಗಳ ಜಾಹೀರಾತುಗಳ ಮೇಲೆ ಅವಲಂಬಿಸಿರುವ ಎನ್‌ಡಿ ಟಿ.ವಿ, ಟೈಮ್ಸ್ ನೌ ಇತ್ಯಾದಿ ಛಾನೆಲ್‌ಗಳು ಮತ್ತು ಪತ್ರಿಕೆಗಳ ವಿವರಣೆಗಳಲ್ಲಿಯೂ ವ್ಯತ್ಯಾಸಗಳಿರುತ್ತವೆ. ಅದೇ ರೀತಿ ಪ್ರಾದೇಶಿಕ ಛಾನೆಲ್‌ಗಳು/ಪತ್ರಿಕೆಗಳು ಕೂಡ ಜಾಹೀರಾತುಗಳಿಗಾಗಿ ಬಹುರಾಷ್ಟ್ರೀಯ ಕಂಪನಿಗಳ, ದೇಶದ ಅತಿ ದೊಡ್ಡ ಕಂಪನಿಗಳ ಮೇಲೆ ಅವಲಂಬಿಸಿರುವುದರಿಂದ ಸುದ್ದಿ ಮೂಲಗಳಿಗಾಗಿಯೂ ರಾಷ್ಟ್ರಮಟ್ಟದ ಛಾನೆಲ್/ಪತ್ರಿಕೆಗಳ ಮೇಲೆಯೇ ಅವಲಂಬಿಸಿರುವುದರಿಂದ ಅವುಗಳ ಸುದ್ದಿ ವಿಶ್ಲೇಷಣೆಗಳಲ್ಲಿ ಸಾಮ್ಯತೆಯಿದ್ದರೂ ಕೂಡ ಭಾಷೆ, ಸಂಸ್ಕೃತಿ, ರಾಜ್ಯದ ಹಿತ ಮುಂತಾದವುಗಳಲ್ಲಿ ಹಲವು ವ್ಯತ್ಯಾಸಗಳನ್ನು ನೋಡಬಹುದು.

ಕಾಂ. ಅಚ್ಯುತಾನಂದನ್‌ರವರ ಮೇಲೆ ಶಿಸ್ತು ಕ್ರಮ ಮತ್ತು ಟಿ.ವಿ. ಹಾಗೂ ಪತ್ರಿಕೆಗಳು

ಕಾಂ ಅಚ್ಯುತಾನಂದನ್ ಮೇಲೆ ಇತ್ತೀಚೆಗೆ ಸಿಪಿಐ(ಎಂ)ನ ಕೇಂದ್ರ ಸಮಿತಿ ಜರುಗಿಸಿದ ಶಿಸ್ತು ಕ್ರಮದ ಬಗ್ಗೆ ಅವರನ್ನು ಪಾಲಿಟ್‌ಬ್ಯೂರೋ ದಿಂದ ಕೈ ಬಿಟ್ಟ ಬಗ್ಗೆ ಟಿ.ವಿ.ವಾಹಿನಿಗಳು, ಪತ್ರಿಕೆಗಳು ನಿರಂತರವಾಗಿ ಬಗೆ ಬಗೆಯಾಗಿ ವ್ಯಾಖ್ಯಾನ ಮಾಡಿವೆ. ಜನಪ್ರಿಯರಾದ ಪ್ರಾಮಾಣಿಕರಾದ ಅಚ್ಯುತಾನಂದನ್‌ರವರಿಗೆ ಶಿಕ್ಷೆ ನೀಡಲಾಗಿದೆ. ಭ್ರಷ್ಟತೆಯ ಆರೋಪ ಹೊತ್ತಿರುವ ಪಿಣರಾಯಿ ವಿಜಯನ್‌ರವನ್ನು ಸಿಪಿಐ(ಎಂ)ಕೇಂದ್ರ ಸಮಿತಿ ಬೆಂಬಲಿಸಿದೆ. ಕಾಂ. ಪ್ರಕಾಶ್‌ಕಾರಟ್‌ರವರು ಭ್ರಷ್ಟತೆ ಆರೋಪ ಹೊತ್ತಿರುವವರನ್ನು ಬೆಂಬಲಿಸಿದ್ದಾರೆ. ಸಿಪಿಐ(ಎಂ) ಈಗಾಗಲೇ ಕುಗ್ಗಿರುವ ತನ್ನ ಜನಪ್ರಿಯತೆಯನ್ನು ಮತ್ತಷ್ಟು ಕಳೆದುಕೊಳ್ಳುವಂತಹ ತೀರ್ಮಾನ ಮಾಡಿದೆ... ಇವು ಈ ಪತ್ರಿಕೆ, ಟಿ.ವಿ. ಚಾನೆಲ್‌ಗಳ ಅಂಬೋಣ.

ಸಿಪಿಐ(ಎಂ) ಪಕ್ಷವೇ ಪ್ರಾಮಾಣಿಕತೆಗೆ ಹೆಸರಾಗಿದ್ದು ಎಂಬುದು ದೇಶದಲ್ಲಿಯೇ ಜನಜನಿತವಾದ ವಿಷಯ. ಸಿಪಿಐ(ಎಂ) ಪಕ್ಷದ ಮುಖ್ಯಮಂತ್ರಿಗಳು, ಮಂತ್ರಿಗಳು, ಎಂ.ಪಿ.ಗಳು, ಶಾಸಕರು ಇವರುಗಳ ಮೇಲೆ ಇಲ್ಲಿಯವರೆಗೆ ಎಲ್ಲಿಯೂ ಭ್ರಷ್ಟಾಚಾರದ ಆಪಾದನೆಗಳು ಬಂದಿಲ್ಲ. ಅವರ ಆಸ್ತಿಪಾಸ್ತಿ ವಿವರಗಳನ್ನು ಚುನಾವಣೆ ಘೋಷಿತವಾಗಿರುವ ಸಂದರ್ಭದಲ್ಲಿ ಕಾಂಗ್ರೆಸ್, ಬಿಜೆಪಿ ಮತ್ತಿತರ ಬಂಡವಾಳಶಾಹಿ ಪಕ್ಷಗಳ ಸ್ಪರ್ಧಿಗಳು, ವಿಜೇತರು ಕೋಟ್ಯಾಧೀಶರುಗಳು, ಹಲವು ಕೋಟ್ಯಾಧಿಶರುಗಳಾಗಿರುವಾಗ, ಸಿಪಿಐ(ಎಂ)ನ ಸ್ಪರ್ಧಿಗಳು, ವಿಜೇತರು ಅತ್ಯಂತ ಸರಳ ಜೀವನ, ಪ್ರಾಮಾಣಿಕತೆಯ ಪ್ರತೀಕವಾಗಿರುವುದನ್ನು ಕೆಲವು ಬಾರಿಯಾದರೂ ಪತ್ರಿಕೆಗಳು ಜನರ ಗಮನಕ್ಕೆ ತಂದಿದ್ದಾವೆ.

ಸಿಪಿಐ(ಎಂ) ಪಕ್ಷದ ಇಂತಹ ಹಿನ್ನೆಲೆಯಲ್ಲಿ ಅಚ್ಯುತಾನಂದನ್ ಮಾತ್ರ ಪ್ರಾಮಾಣಿಕರು ಎಂಬುದೇ ಅರ್ಧ ಸತ್ಯ. ಈ ರೀತಿಯ ಪ್ರಚಾರವನ್ನೀಯುವ ಮೂಲಕ ಪತ್ರಿಕೆಗಳು- ಟಿ.ವಿ.ವಾಹಿನಿಗಳು ಪಕ್ಷದ ವಿರುದ್ಧ ಅಪಪ್ರಚಾರ ಮಾಡಲು ಪಕ್ಷದ ನಾಯಕರ ಹೆಸರನ್ನೇ ಬಳಸಿಕೊಳ್ಳುವ ಕುತಂತ್ರವನ್ನೂ ಹೂಡಿವೆ.

ದಿನಾಂಕ ಜುಲೈ 12ರ ಪಾಲಿಟ್‌ಬ್ಯೂರೋ ಹೇಳಿಕೆ, ಜನಶಕ್ತಿಯು ಈ ಸಂಚಿಕೆಯುಲ್ಲಿ ಪ್ರಕಟವಾಗಿರುವ ಕೇಂದ್ರ ಸಮಿತಿ ಹೇಳಿಕೆ ಕಾಂ:ಪಿಣರಾಯ್ ವಿಜಯನ್‌ರವರ ಮೇಲೆ ಸಿಬಿಐ ಹೊರಿಸಿರುವ ಭ್ರಷ್ಟಾಚಾರದ ಹೇಳಿಕೆ ಬಗ್ಗೆ ಈ ಸಂಗತಿಗಳನ್ನು ಜನರ ಗಮನಕ್ಕೆ ತಂದಿದೆ.

1. ಕೆನಡಾದ ಲಾವೆಲಿನ್ ಕಂಪನಿಯ ಜೊತೆ ಜಲ ವಿದ್ಯುತ್ ಕೇಂದ್ರಗಳ ಆಧುನೀಕರಣದ ಬಗ್ಗೆ ಒಪ್ಪಂದ ಮಾಡಿಕೊಂಡಿದ್ದು 91-96 ರ ನಡುವೆ ಇದ್ದ ಯುಡಿಎಫ್ ಸರ್ಕಾರ.

2. 96 ರ ಸರ್ಕಾರ ಇ.ಕೆ.ನಾಯನರ್‌ರವರ ಎಲ್‌ಡಿಎಫ್ ಮಂತ್ರಿಮಂಡಲದಲ್ಲಿ ವಿದ್ಯುತ್ ಸಚಿವರಾಗಿದ್ದ ಪಿಣರಾಯಿ ವಿಜಯನ್ ರವರು ಈ ಒಪ್ಪಂದವನ್ನು ಪುನರ್ ಪರಿಶೀಲಿಸಿ ಮೊತ್ತವನ್ನು ಸುಮಾರು 30 ಕೋಟಿ ರೂ. ತಗ್ಗಿಸಿದರು. ಮತ್ತು ಆ ಸಂಸ್ಥೆಯ ಮುತುವರ್ಜಿ ಮತ್ತು ಇತರ ಸಂಸ್ಥೆಗಳ ಹಣಕಾಸು ನೆರವಿನೊಂದಿಗೆ 100 ಕೋಟಿ ಮೌಲ್ಯದ ಕ್ಯಾನ್ಸರ್ ಆಸ್ಪತ್ರೆಯೊಂದನ್ನು ಸ್ಥಾಪಿಸಲು ಒಪ್ಪಿಸಿದರು.

3. ನಂತರ 2001ರಲ್ಲಿ ಮತ್ತೆ ಅಧಿಕಾರಕ್ಕೆ ಬಂದ ಯುಡಿಎಫ್ ಸರ್ಕಾರ ಈ ಒಪ್ಪಂದದಲ್ಲಿ ಎಲ್‌ಡಿಎಫ್ ಸರ್ಕಾರ ಅವ್ಯವಹಾರ ನಡೆಸಿದೆ ಎಂದು ಹುಯಿಲೆಬ್ಬಿಸಿ ತಮ್ಮ ಸರ್ಕಾರದ ಅಧೀನದಲ್ಲಿಯೇ ಇದ್ದ ವಿಜಿಲೆನ್ಸ್ ಕಮೀಷನರ್ (ಲೋಕಾಯುಕ್ತ ರೀತಿಯ ಅಧಿಕಾರಿ) ಗೆ ತನಿಖೆಗೆ ಒಪ್ಪಿಸಿದರು. ತನಿಖೆ ಪಿಣರಾಯ್ ವಿಜಯನ್ ಮತ್ತು ಆ ಕಾಲದ ಅಧಿಕಾರಿಗಳಿಂದ ಯಾವ ಭ್ರಷ್ಟಾಚಾರವೂ ಆಗಿಲ್ಲ ಎಂದು ಸಾಬೀತು ಮಾಡಿತು. 1991-96 ರ ನಡುವೆ ಇದ್ದ ಕಾಂಗ್ರೆಸ್‌ನ ಕೇಂದ್ರ ಸರ್ಕಾರ ಹಾಗೂ ಕೇರಳದ ಯುಡಿಎಫ್ ಸರ್ಕಾರದ ಮೇಲಿದ್ದ ಅಸಂಖ್ಯ ಹಗರಣ, ಅಪಕೀರ್ತಿಯಿಂದ ತಪ್ಪಿಸಿಕೊಳ್ಳಲು ಸಿಬಿಐಗೆ ತನಿಖೆಯನ್ನು ಮತ್ತೆ ಒಪ್ಪಿಸಲಾಯಿತು.

4. ಸಿಬಿಐ ಪಿಣರಾಯ್‌ರವರ ಮೇಲೆ ಆರೋಪ ಹೊರಿಸಿದರೂ ಕೂಡ ಯಾವುದೇ ರೀತಿ ಅವರಿಗೆ ಯಾವುದೇ ರೀತಿ ಅಕ್ರಮ ಹಣ ಸಂದಾಯವಾಗಿರುವುದನ್ನು ಸಾಬೀತು ಪಡಿಸಿಲ್ಲ. ಆದ್ದರಿಂದ ಇದು ಕೇವಲ ಸಿಬಿಐ ಅನ್ನು ದುರುಪಯೋಗಪಡಿಸಿಕೊಂಡು ಮಾಡಿರುವ ರಾಜಕೀಯ ಆರೋಪ. ಈ ಆರೋಪವನ್ನು ಸಿಪಿಐ(ಎಂ) ಪಕ್ಷ ಇಡಿಯಾಗಿ ರಾಜಕೀಯವಾಗಿ ಮತ್ತು ಕಾನೂನಾತ್ಮಕವಾಗಿ ಎದುರಿಸುತ್ತಿದೆ. ಆ ಮೂಲಕ ಜನತೆಗೆ ಕಾಂಗ್ರೆಸ್‌ನದು ಉದ್ದೇಶ ಹಾಗೂ ಸಿಪಿಐ(ಎಂ) ಪಕ್ಷದ ಹಾಗೂ ನಾಯಕರ ಪ್ರಾಮಾಣಕತೆ ಬಗ್ಗೆ ಮನವರಿಕೆ ಮಾಡಿಕೊಡುತ್ತದೆ.

ಆದರೆ ದೇಶದ ಪತ್ರಿಕೆ-ಟಿ.ವಿ.ಗಳು ಛಾನೆಲ್‌ಗಳು ಸಿಪಿಐ(ಎಂ) ಈ ಹೇಳಿಕೆ ನುತ್ತು ತಮ್ಮ ವಿಶ್ಲೇಷಣೆಗಳನ್ನು ನೀಡುವಾಗ ಈ ಮೇಲಿನ ಮಾಹಿತಿಗಳನ್ನು ಜನರಿಂದ ಮುಚ್ಚಿಟ್ಟು ಆಧಾರರಹಿತವಾದ ಅರ್ಧ ಸತ್ಯ ಮತ್ತು ಪೂರ್ಣ ಸುಳ್ಳುಗಳ ಆರೋಪವನ್ನು ಮಾಡುತ್ತಿದ್ದಾರೆ.

ಇನ್ನೂ ಕಾಂ. ಅಚ್ಯುತಾನಂದನ್‌ರವರ ಮೇಲಿನ ಶಿಸ್ತಿನ ಕ್ರಮಕ್ಕೆ ಸಂಬಂಧಿಸಿ ಚುನಾವಣೆಗಳ ಸಂದರ್ಭದಲ್ಲಿ ಮತ್ತು ನಂತರ ಲಾವೆಲಿನ್ ಪ್ರಕರಣ ಮತ್ತು ಇತರ ಕೆಲವು ವಿಷಯಗಳಲ್ಲಿಯೂ ಪಕ್ಷದ ಸಂಬಂಧಪಟ್ಟ ಸಮಿತಿಗಳ ತೀರ್ಮಾನಗಳನ್ನು, ಆ ಮೂಲಕ ಪಕ್ಷದ ಶಿಸ್ತನ್ನು ಉಲ್ಲಂಘಿಸಿ ಪಕ್ಷದ ವರ್ಚಸ್ಸಿಗೆ ಧಕ್ಕೆ ಬರುವಂತೆ ಹೇಳಿಕೆಗಳನ್ನು ನೀಡಿದ್ದಾರೆ. ಇದರಿಂದ ಜನರ ಮನಸ್ಸಿನಲ್ಲಿ ಗೊಂದಲ ಸೃಷ್ಟಿಯಾಗಿದೆ. ಬಂಡವಾಳಶಾಹಿ ಪಕ್ಷಗಳ, ಪತ್ರಿಕೆ-ಟಿ.ವಿ.ಗಳ ಅಪಪ್ರಚಾರವನ್ನು ಒಗ್ಗಟ್ಟಿನಿಂದ ಎದುರಿಸುವುದಕ್ಕೆ ಅಡಚಣೆಯನ್ನೊಡ್ಡಿದೆ. ಆದ್ದರಿಂದ ಅವರನ್ನೂ ಪಾಲಿಟ್‌ಬ್ಯೂರೋ ಸದಸ್ಯತ್ವದಿಂದ ಕೈ ಬಿಡಲಾಗಿದೆ ಎಂದು ಸಿಪಿಐ(ಎಂ) ತಿಳಿಸಿದೆ.

ಬಂಡವಾಳಶಾಹಿ ಪತ್ರಿಕೆ-ಟಿ.ವಿ.ಗಳಿಗೆ ಸಿಪಿಐ(ಎಂ) ನಲ್ಲಿರುವ ಶಿಸ್ತು ಅರ್ಥವಾಗದ ವಿಷಯ ಮತ್ತು ಅವರಿಗೆಂದೂ ದೊಡ್ಡ ತಲೆನೋವು ಕೂಡ. ಬಂಡವಾಳಶಾಹಿ ಪಕ್ಷಗಳಲ್ಲಿರುವಂತೆ ಒಬ್ಬರ ಮೇಲೊಬ್ಬರು ಕೆಸರು ಎರಚುತ್ತಾ ಇದ್ದರೆ ಅದ[illegible] ಗಂಟೆ-ಗಂಟೆಗೂ ದೊಡ್ಡದಾಗಿಸುತ್ತಾ ತಮ್ಮ ಪತ್ರಿಕೆ -ಟಿ.ವಿ.ಗಳ ಪ್ರಸಾರವನ್ನು ಹೆಚ್ಚಿಸಿಕೊಳ್ಳಬಹುದು. ಆದರೆ ಸಿಪಿಐ(ಎಂ)ನಲ್ಲಿ ಇಂತಹ ಪುಕ್ಕಟ್ಟೆ ಮನರಂಜನೆಗೆ ಅವಕಾಶವಿಲ್ಲವೇ! ಹೀಗಾಗಿ ಜನರ ನಿಜವಾದ ಸಮಸ್ಯೆಗಳಿಂದ ಅವರ ಗಮನವನ್ನು ಸೆಳೆದು ಈ ಯಕ್ಷಗಾನ ಬಯಲಾಟಗಳಿಂದ ಅವರನ್ನು ರಂಜಿಸಲು ಬರುವುದಿಲ್ಲವೆಂಬುದು ಅವರ ಸಮಸ್ಯೆ.

ಇನ್ನು ಪ್ರಕಾಶ್‌ಕಾರಟ್‌ರವರು ಪಿಣರಾಯ್ ಗುಂಪನ್ನೂ ಭ್ರಷ್ಟಾಚಾರವನ್ನು ಬೆಂಬಲಿಸಿದ್ದಾರೆ ಎನ್ನುವ ಆರೋಪ. ಮೇಲಿನ ಸಂಗತಿಗಳಲ್ಲದೆ ಸಿಪಿಐ(ಎಂ) ಪಕ್ಷದ ಸಾಮೂಹಿಕ ತೀರ್ಮಾನ, ಸಾಮೂಹಿಕ ನಾಯಕತ್ವವಿದೆ ಎಂಬ ಅಂಶವೂ ಕೂಡ ಬಂಡವಾಳಶಾಹಿ ಪತ್ರಿಕೆ ಮಾಧ್ಯಮಗಳಿಗೆ ಅರ್ಥವೇ ಆಗದ ವಿಷಯ. ಇಡೀ ಸಮಾಜದಲ್ಲಿ, ಯಾವುದೇ ಸಂಸ್ಥೆಯಲ್ಲಿ, ಬಂಡವಾಳಶಾಹಿ ರಾಜಕೀ[illegible] ಪಕ್ಷಗಳಲ್ಲಿ ಇಲ್ಲದ ಈ ಕಾರ್ಯವಿಧಾನ, ಸಂಘಟನಾ ತತ್ವ ಅವರಿಗೆ ಕಬ್ಬಿಣದ ಕಡಲೆ. ಹೀಗಾ[illegible] ಪಾಲಿಟ್‌ಬ್ಯೂರೋ ತೀರ್ಮಾನ ಅಥವಾ ಕೇಂದ್ರ ಸಮಿತಿ ತೀರ್ಮಾನದಲ್ಲಿ ಪ್ರಕಾಶ್‌ಕಾರಟ್‌ರವರ ಅಭಿಪ್ರಾಯವೂ ಒಂದು ಅಂಶವಷ್ಟೇ ಹೊರತು, ಸೋನಿಯಾಗಾಂಧಿಯವರ ಅಥವಾ ಇನ್ನಿತರ ಪಕ್ಷಗಳಲ್ಲಿರುವಂತೆ ಒಬ್ಬರ ಅಥವಾ ಒಬ್ಬಿಬ್ಬರ ಅಭಿಪ್ರಾಯಕ್ಕೆ ಇಡೀ ಪಕ್ಷವೇ ಕುಣಿಯುವುದಿಲ್ಲ ಎಂಬುದನ್ನು ಅರ್ಥಮಾಡಿಕೊಳ್ಳುವ, ಜನರಿಗೆ ವಿವರಿಸುವ ಹೊಣೆಗಾರಿಕೆ ಪತ್ರಿಕೆ/ಟಿ.ವಿ. ಛಾನೆಲ್‌ಗಳಿಗಿದೆ. ಆದರೆ ಈ ಮೂಲಭೂತ ಪತ್ರಿಕಾ ಧರ್ಮವನ್ನು ನಿರ್ವಹಿಸದಿರುವ ಪತ್ರಿಕೆಗಳು ಸಿಪಿಐ(ಎಂ) ಪಕ್ಷದ ವಿಷಯದಲ್ಲಿ ನಿರಂತರವಾಗಿ ಹಾಗೂ ಯಾವುದೇ ಅಪರಾಧಿ ಪ್ರಜ್ಞೆಯಿಲ್ಲದೆ ಉಲ್ಲಂಘಿಸುತ್ತಿದ್ದಾರೆ.

ಪತ್ರಿಕೆ-ಟಿ.ವಿ.ಛಾನೆಲ್‌ಗಳ, ಸತ್ಯಕ್ಕೆ ಹಾಗೂ ಪತ್ರಿಕಾ ಧರ್ಮಕ್ಕೆ ಬದ್ಧತೆಯಿಲ್ಲದ ಈ ವರ್ತನೆ ಸಿಪಿಐ(ಎಂ)ಗೆ ಮಾತ್ರವಲ್ಲ ಪತ್ರಿಕಾ ಸ್ವಾತಂತ್ರ್ಯ, ಅಭಿವ್ಯಕ್ತಿ ಸ್ವಾತಂತ್ರ್ಯ ಹಾಗೂ ಪ್ರಜಾಪ್ರಭುತ್ವಕ್ಕೆ ಎಸಗುತ್ತಿರುವ ಅಪಚಾರ.

ಕೇರಳ ಸಂಘಟನಾತ್ಮಕ ಪ್ರಶ್ನೆ ಕುರಿತು ಸಿಪಿಐ(ಎಂ) ಕೇಂದ್ರಸಮಿತಿ ಹೇಳಿಕೆ

ಜುಲೈ 11, 12, 2009 ರಂದು ಸಭೆ ಸೇರಿದ್ದ ಸಿಪಿಐ(ಎಂ) ಪಕ್ಷದ ಕೇಂದ್ರ ಸಮಿತಿಯು ತನ್ನ ಕೇರಳದ ಘಟಕದ ವಿದ್ಯಮಾನಗಳ ಕುರಿತು ಚರ್ಚಿಸಿ ಈ ಕೆಳಕಂಡಂತೆ ಹೇಳಿಕೆ ನೀಡಿದೆ.


ಸಿಪಿಐ(ಎಂ) ಪಕ್ಷದ ಕೇಂದ್ರಸಮಿತಿಯು ಪಕ್ಷದ ಸಂಘಟನಾ ತತ್ವ ಮತ್ತು ಶಿಸ್ತಿನ ಉಲ್ಲಂಘನೆಯ ಕಾರಣಕ್ಕಾಗಿ ಪಕ್ಷದ ಪೊಲಿಟ್ ಬ್ಯೂರೋದಿಂದ ಪಾಲಿಟ್ ಬ್ಯೂರೋ ಸದಸ್ಯ ವಿ.ಎಸ್.ಅಚ್ಯುತಾನಂದನ್ ಅವರನ್ನು ಕೈಬಿಡಲು ನಿರ್ಧರಿಸಿದೆ. ಕಾಂ.ಅಚ್ಯುತಾನಂದನ್‌ರವರು ಕೇರಳದಲ್ಲಿ ಪಕ್ಷದ ಬೆಳವಣಿಗೆಗೆ ದೊಡ್ಡ ಕೊಡುಗೆ ನೀಡಿದ ಅತ್ಯಂತ ಹಿರಿಯ ನಾಯಕರಾಗಿದ್ದಾರೆ. ವಿ.ಎಸ್.ಅಚ್ಯುತಾನಂದನ್‌ರವರು ಪಕ್ಷದ ಮುಖಂಡರಾಗಿ ಹಾಗೂ ಕೇರಳ ರಾಜ್ಯದ ಮುಖ್ಯಮಂತ್ರಿಯಾಗಿ ಅವರಿಂದ ನಿರೀಕ್ಷಿಸಲಾದ ಜವಾಬ್ದಾರಿಯನ್ನು ನಿರ್ವಹಿಸುತ್ತಾರೆಂದು ಪಕ್ಷದ ಕೇಂದ್ರಸಮಿತಿಯು ನಿರೀಕ್ಷಿಸುತ್ತದೆ.

ಪಕ್ಷದ ಕೇಂದ್ರ ಸಮಿತಿಯು ಕೇರಳದಲ್ಲಿ ಜಲವಿದ್ಯುತ್ ಯೋಜನೆಯ ನವೀಕರಣ ಮತ್ತು ಆಧುನೀಕರಣಕ್ಕೆ ಸಂಬಂಧಿಸಿದ ಎಸ್‌ಎನ್‌ಸಿ ಲ್ಯಾವನಿನ್ ಒಪ್ಪಂದದ ಕುರಿತು ಪಕ್ಷದ ಪಾಲಿಟ್ ಬ್ಯೂರೋ ಮಂಡಿಸಿದ ವರದಿಯನ್ನು ಪರೀಕ್ಷಿಸಿತು. ಈ ಒಪ್ಪಂದವನ್ನು 1995 ಮತ್ತು 96 ರಲ್ಲಿ ಆಗ ಅಧಿಕಾರದಲ್ಲಿದ್ದ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಸರಕಾರವು ಮಾಡಿಕೊಂಡಿತ್ತು. ಅನಂತರ ಅಧಿಕಾರಕ್ಕೆ ಬಂದ ಸಿಪಿಐ(ಎಂ) ನೇತೃತ್ವದ ಎಲ್‌ಡಿಎಫ್ ಸರಕಾರ ಒಪ್ಪಂದವನ್ನು ಜಾರಿಗೊಳಿಸಿತು.

1996 ಮತ್ತು 98 ರ ನಡುವೆ ಪಕ್ಷದ ರಾಜ್ಯಸಮಿತಿಯ ಕಾರ್ಯದರ್ಶಿ ಹಾಗೂ ಕೇರಳ ವಿದ್ಯುತ್ ಸಚಿವರಾಗಿದ್ದ ಕಾಂ. ಪಿಣರಾಯ್ ವಿಜಯನ್‌ರವರು ಯಾವುದೇ ರೀತಿಯ ಭ್ರಷ್ಟಾಚಾರದಲ್ಲಿ ಭಾಗಿಯಾಗಿಲ್ಲವೆಂಬ ಅಭಿಪ್ರಾಯವನ್ನು ಸಿಪಿಐ(ಎಂ) ಕೇಂದ್ರಸಮಿತಿ ಪುನರುಚ್ಚರಿಸುತ್ತದೆ. ಪಕ್ಷವು ಈ ಪ್ರಕರಣವನ್ನು ಕಾನೂನು ರೀತಿಯಲ್ಲಿ ಮತ್ತು ರಾಜಕೀಯವಾಗಿ ಎದುರಿಸಬೇಕೆಂದು ಮತ್ತೊಮ್ಮೆ ತೀರ್ಮಾನಿಸಿದೆ.

ಪಕ್ಷದ ಕೇಂದ್ರ ಸಮಿತಿಯು ತನ್ನ ಈ ತೀರ್ಮಾನವನ್ನು ಜಾರಿಗೊಳಿಸಲು ಅಗತ್ಯವಾದ ಕ್ರಮವನ್ನು ಕೈಗೊಳ್ಳಲು ಪಾಲಿಟ್ ಬ್ಯುರೋಗೆ ಅಧಿಕಾರವನ್ನು ನೀಡಿತು. ಪಕ್ಷದ ಕೇರಳ ರಾಜ್ಯ ಸಮಿತಿಯು ಇಡೀ ಪಕ್ಷವನ್ನು ಒಂದುಗೂಡಿಸಬೇಕು ಮತ್ತು ಜನತೆಯ ಬಳಿಗೆ ಹೋಗಬೇಕು ಹಾಗೂ ಇತ್ತೀಚಿನ ಲೋಕಸಭಾ ಫಲಿತಾಂಶಗಳ ವಿಮರ್ಶೆಯ ಹಿನ್ನೆಲೆಯಲ್ಲಿ ಕೈಗೊಳ್ಳಬೇಕಾದ ತೀರ್ಮಾನವನ್ನು ಜಾರಿಗೊಳಿಸಬೇಕು.

ಆರ್ಥಿಕದಲ್ಲಿ ಚೇತರಿಕೆಯ ಲಕ್ಷಣಗಳು ಕಾಣುತ್ತಿವೆ ಎಂದು ಭಾರತದ ಹಣಕಾಸು ಮಂತ್ರಿಗಳು ಹೇಳುತ್ತಿರುವಾಗಲೇ, ಜಗತ್ತಿನ ಎಂಟು ಶ್ರೀಮಂತ ದೇಶಗಳ ಮುಖಂಡರು ಅದು ಇನ್ನೂ ದೂರದ ಮಾತು ಎಂದು ಒಪ್ಪಿಕೊಳ್ಳಬೇಕಾಗುತ್ತದೆ ಎಂದಿದ್ದಾರೆ. ಅದಕ್ಕೆ ಸಾಕ್ಷಿಯೆಂಬಂತೆ ಅಮೆರಿಕಾದಲ್ಲಿ ಮುಳುಗಿದ ಬ್ಯಾಂಕುಗಳ ಸಂಖ್ಯೆ ಏಳು ತಿಂಗಳಲ್ಲಿ 53ಕ್ಕೇರಿದೆ. ಅಲ್ಲಿಯ ಮತ್ತು ಯುರೋಪಿನ ಉದ್ದಿಮೆಗಳಲ್ಲಿ ಉದ್ಯೋಗ ಕಡಿತಗಳು ಮುಂದುವರೆಯುತ್ತಿವೆ. ಭಾರತದಲ್ಲೂ ಪರಿಸ್ಥಿತಿ ಭಿನ್ನವಾಗಿಲ್ಲ. ಐಟಿ ಉದ್ದಿಮೆಯಲ್ಲಿ ಉದ್ಯೋಗ ಕಡಿತಗಳು ನಿಂತಿಲ್ಲ, ರಫ್ತು ಇಳಿಕೆ ನಿಂತಿಲ್ಲ. 40000 ಗೋವನ್ನರು ಕೆಲಸ ಕಳಕೊಂಡು ಮರಳುತ್ತಿದ್ದಾರೆ. ಈವರ್ಷವಿಡೀ ಇದೇ ಪರಿಸ್ಥಿತಿ ಎಂದಿದೆ ಅಂಕ್ಟಾಡ್. ಆದರೆ ಚೀನಾದ್ದು ಮಾತ್ರ ಭಿನ್ನ ಕಥೆ. ಇವು ಆರ್ಥಿಕ ಹಿಂಜರಿತದ ಅವಧಿಯ ಈ ವಾರದ ಸುದ್ದಿಗಳು.



ಅಷ್ಟು ಸುಲಭವಲ್ಲ ಆರ್ಥಿಕ ಚೇತರಿಕೆಯ ಕಸರತ್ತು

ಒಂಭತ್ತು ತಿಂಗಳಲ್ಲಿ 8982ಕೋಟಿರೂ.ಗಳ ರಫ್ತು ನಷ್ಟ

ಭಾರತ ಕಳೆದ ಆಗಸ್ಟ್ ನಂತರದ ಒಂಭತ್ತು ತಿಂಗಳಲ್ಲಿ 8982 ಕೋಟಿ ರೂ.ಗಳಷ್ಟು ಮೌಲ್ಯದ ರಫ್ತು ಆರ್ಡರುಗಳನ್ನು ಜಾಗತಿಕ ಆರ್ಥಿಕ ಹಿಂಜರಿತದಿಂದಾಗಿ ಕಳಕೊಂಡಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಮಂತ್ರಿಗಳು ರಾಜ್ಯ ಸಭೆಯಲ್ಲಿ ಹೇಳಿದ್ದಾರೆ. ತಮ್ಮ ಇಲಾಖೆ ನಡೆಸಿದ ಒಂದು ಸರ್ವೆಯಲ್ಲಿ ಇದು ಕಂಡು ಬಂದಿದೆ ಎಂದು ಅವರು ಹೇಳಿದ್ದಾರೆ. 17ರಫ್ತು ವಲಯಗಳ ಘಟಕಗಳಲ್ಲಿ ನಡೆಸಿದ ಈ ಸರ್ವೆಯ ಪ್ರಕಾರ ಇದರಿಂದಾಗಿ 1,34,593 ಉದ್ಯೋಗಗಳು ಕಡಿತಗೊಂಡಿವೆ. ಆದರೆ ಇದು ಕೂಡಾ ಒಟ್ಟು ಸಂಖ್ಯೆಯನ್ನು ಬಿಂಬಿಸಲಿಕ್ಕಿಲ್ಲ ಎಂದೂ ಅವರು ಹೇಳಿದ್ದಾರೆ.

40,000 ಗೋವನ್ನರು ಮರಳಿ ಮನೆಗೆ

ಕಳೆದ ಹತ್ತು ತಿಂಗಳಲ್ಲಿ ಕೊಲ್ಲಿ ದೇಶಗಳಲ್ಲಿ ಕೆಲಸ ಮಾಡುತ್ತಿದ್ದವರಲ್ಲಿ ಸುಮಾರು 40,000 ಗೋವನ್ನರು ಕೆಲಸ ಕಳೆದುಕೊಂಡು ತಂತಮ್ಮ ಊರುಗಳಿಗೆ ಹಿಂದಿರುಗಿದ್ದಾರೆ ಎಂದು ಆ ರಾಜ್ಯದ ಎನ್‌ಆರ್‌ಐ ಆಯುಕ್ತರು ತಿಳಿಸಿದ್ದಾರೆ. ಈ ಪುಟ್ಟ ರಾಜ್ಯಕ್ಕೆ ಇದು ದೊಡ್ಡ ಸಂಖ್ಯೆಯೇ. ಇವರಿಗೆ ಪರಿಹಾರ ಕ್ರಮಗಳ ಬಗ್ಗೆ ರಾಜ್ಯ ಸರಕಾರ ಯೋಚಿಸುತ್ತಿದೆ ಎಂದು ಅವರು ಹೇಳಿದ್ದಾರೆ. ಈಗಾಗಲೇ ಒಂದು ಲಕ್ಷ ನಿರುದ್ಯೋಗಿಗಳು ರಾಜ್ಯದಲ್ಲಿದ್ದು ಇದು ಈಗ ಹೆಚ್ಚಿನ ಹೊರೆ. ಅಷ್ಟೇ ಅಲ್ಲ, ಇವರಿಂದ ಬರುತ್ತಿದ್ದ ವಿದೇಶಿ ವಿನಿಮಯ ಕೂಡಾ ಅಷ್ಟರ ಮಟ್ಟಿಗೆ ಇಳಿದಂತಾಗಿದೆ.

ಗೋವಾ ವಲಸೆ ಅಧ್ಯಯನ, 2008ರ ಪ್ರಕಾರ ಗೋವಾದ 14 ಲಕ್ಷ ಜನಸಂಖ್ಯೆಯಲ್ಲಿ ಶೇ.12 ರಷ್ಟು ವಿದೇಶಗಳಲ್ಲಿ ಕೆಲಸ ಮಾಡುತ್ತಿರುವ ಸದಸ್ಯರನ್ನು ಹೊಂದಿದ್ದಾರೆ. ಇವರಲ್ಲಿ 60 ಶೇ.ರಷ್ಟು ಕೊಲ್ಲಿ ಪ್ರದೇಶದಲ್ಲಿಯೇ ಕೆಲಸ ಮಾಡುತ್ತಿದ್ದಾರೆ. ಇವರಿಂದ ರಾಜ್ಯಕ್ಕೆ 700 ಕೋಟಿ ರೂ. ಬರುತ್ತಿತ್ತು. ಇದು ರಾಜ್ಯದ ಒಟ್ಟು ಅಂತರಿಕ ಉತ್ಪನ್ನದ 6.3ಶೇ. ಆಗಿತ್ತು. ಆದ್ದರಿಂದ ಜಾಗತಿಕ ಆರ್ಥಿಕ ಹಿಂಜರಿತ ಈ ರಾಜ್ಯವನ್ನು ತೀವ್ರವಾಗಿ ತಟ್ಟಿದೆ ಎಂದು ಆಯುಕ್ತರು ಹೇಳಿದ್ದಾರೆ.

ಚೀನಾದ ಭಿನ್ನ ಕಥೆ

ಕಳೆದ ನವೆಂಬರ್ 2008ರಲ್ಲಿ ಚೀನಾ ಆರ್ಥಿಕ ಹಿಂಜರಿತವನ್ನು ಎದುರಿಸಲು 4 ಟ್ರಿಲಿಯನ್ ಯುವಾನ್(58600ಕೋಟಿ ಡಾಲರು)ಗಳನ್ನು ಮೂಲರಚನೆ ಮತ್ತು ಇತರ ಉತ್ಪಾದಕ ಚಟುವಟಿಕೆಗಳಲ್ಲಿ ತೊಡಗಿಸುವ ಯೋಜನೆಯನ್ನು ಪ್ರಕಟಿಸಿದಾಗ ಬಹಳಷ್ಟು ಪಾಶ್ಚಿಮಾತ್ಯ ವಿಶ್ಲೇಷಕರು ಅಸಾಧ್ಯ ಎಂದು ತಲೆ ಅಲ್ಲಾಡಿಸಿದರಂತೆ. ಆದರೆ ಮಾರ್ಚ್ 2009ರ ವೇಳೆಗಾಗಲೇ ವಿವಿಧ ಯೋಜನೆಗಳಲ್ಲಿ ಹೆಚ್ಚುವರಿ ಹೂಡಿಕೆಗಳ ಪ್ರಮಾಣ 4ಟ್ರಿಲಿಯನ್ ಯುವಾನ್‌ಗಳನ್ನು ದಾಟಿದೆ ಎಂದು ವರದಿಯಾಗಿದೆ. ಅಲ್ಲಿಯ ಕೇಂದ್ರ ಸರಕಾರ 1.3 ಟ್ರಿಲಿಯನ್ ಯುವಾನ್ ಮೌಲ್ಯದಷ್ಟು ತನ್ನದೇ ಯೋಜನೆಗಳನ್ನು ರೂಪಿಸಿದ್ದು ಉಳಿದ 2.7 ಟ್ರಿಲಿಯನ್ ಯುವಾನ್‌ಗಳಿಗೆ ಪ್ರಾಂತಗಳಿಗೆ ಯೋಜನೆಗಳನ್ನು ಸಲ್ಲಿಸುವಂತೆ ಕೇಳಲಾಗಿತ್ತು. ಇದಕ್ಕೆ ಅವರು ಬ್ಯಾಂಕ್ ಸಾಲವನ್ನೂ ಪಡೆಯಬಹುದುದೆಂದು ಹೇಳಲಾಗಿತ್ತು. ಆರು ವಾರದೊಳಗೆ ಇದಕ್ಕೆ ಸ್ಪಂದಿಸಿದ 18 ಪ್ರಾಂತ ಸರಕಾರಗಳು 25 ಟ್ರಿಲಿಯನ್ ಯುವಾನ್ ಮೌಲ್ಯದ, ಅಂದರೆ ಹತ್ತು ಪಟ್ಟು ಹೆಚ್ಚು ಮೌಲ್ಯದ ಯೋಜನೆಗಳನ್ನು ಸಲ್ಲಿಸಿದವು. ಅಲ್ಲಿಯ ಬ್ಯಾಂಕುಗಳೂ ಧಾರಾಳವಾಗಿ ಸಾಲ ಒದಗಿಸಿ ನೆರವಿಗೆ ಬಂದವು.

2009-10ರಲ್ಲೂ 13ಲಕ್ಷ ಉದ್ಯೋಗ ಕಡಿತ ಎನ್ನುತ್ತದೆ ವಿಶ್ವ ಸಂಘಟನೆ ಅಂಕ್ಟಾಡ್

ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಆರ್ಥಿಕ ಹಿಂಜರಿತದಿಂದಾಗಿ ಭಾರತದಂತಹ ಅಭಿವೃದ್ಧಿ ಹೊಂದುತ್ತಿರುವ ದೇಶಗಳ ರಫ್ತು ಉದ್ದಿಮೆಗಳಲ್ಲಿ ಉದ್ಯೋಗ ಕಡಿತ ಈ ವರ್ಷವೂ ಮುಂದುವರೆಯಲಿದೆ ಎಂದು ವಿಶ್ವ ಸಂಸ್ಥೆಯ ವಾಣಿಜ್ಯ, ವ್ಯಾಪಾರ ಅಭಿವೃದ್ಧಿ ಸಂಘಟನೆ ಅಂಕ್ಟಾಡ್ ಅಧ್ಯಯನವೊಂದು ಹೇಳಿದೆ. 2008-09ರಲ್ಲಿ 11.6 ಲಕ್ಷ ಉದ್ಯೋಗ ಕಡಿತದ ನಂತರ ಈ ವರ್ಷವೂ ಇನ್ನೂ 13ಲಕ್ಷ ಉದ್ಯೋಗಗಳು ಕಡಿತಗೊಳ್ಳಬಹುದು ಎಂದು ಅದು ಹೇಳಿದೆ, ಭಾರತ ಈ ರಫ್ತು ವಲಯದಲ್ಲಿ 7.4ಲಕ್ಷ ಉದ್ಯೋಗಗಳನ್ನು ಕಳಕೊಳ್ಳಬಹುದು, ಅದರ ರಫ್ತಿನಲ್ಲಿ 2.2ಶೇ. ಇಳಿಕೆಯಾಗಬಹುದು ಎಂದು ಅದು ಅಂದಾಜು ಮಾಡಿದೆ. ಆದರೆ 2010-11ರಲ್ಲಿ ಪರಿಸ್ಥಿತಿ ಸುಧಾರಿಸುತ್ತದೆ ಎಂಬುದು ಅದರ ಅಂದಾಜು.

ಇಂಗ್ಲೆಂಡಿನ ಟಾಟಾ ಕಾರು ಕಂಪೆನಿಯಲ್ಲಿಯೂ ಉದ್ಯೋಗ ಕಡಿತ

ಭಾರತದ ಟಾಟಾ ಗುಂಪು ವಹಿಸಿಕೊಂಡ ಜಾಗ್ವಾರ್ ಲ್ಯಾಂಡ್ ರೋವರ್ ಕಂಪನಿ ಭಾರೀ ನಷ್ಟದಲ್ಲಿದೆ ಎಂದು ಕಂಪನಿಯ ವಕ್ತಾರರು ಹೇಳಿದ್ದಾರೆ. ವಿಶ್ವದಲ್ಲಿ ಆದರಲ್ಲೂ ಯುರೋಪಿನಲ್ಲಿ ಕಾರಿನ ಬೇಡಿಕೆ ತೀವ್ರವಾಗಿ ಇಳಿದಿರುವುದರಿಂದ ಈ ಪ್ರಸಿದ್ಧ ಐಷಾರಾಮಿ ಕಾರುಗಳನ್ನು ತಯಾರಿಸುವ ಕಂಪನಿ ಈ ವರ್ಷ 32.2 ಕೋಟಿ ಪೌಂಡುಗಳಷ್ಟು (ಸುಮಾರು 250ಕೋಟಿ ರೂ.ಗಳಷ್ಟು) ನಷ್ಟ ಅನುಭವಿಸಿದೆಯಂತೆ. ಈಗಾಗಲೇ ವಾರಕ್ಕೆ ನಾಲ್ಕು ದಿನಗಳ ಕೆಲಸ ಮತ್ತು 2000 ಕಾರ್ಮಿಕರ ಲೇ ಆಫ್ ಮಾಡಿರುವ ಕಂಪನಿ ಸದ್ಯದಲ್ಲಿಯೇ ಇಂಗ್ಲೆಂಡಿನಲ್ಲಿರುವ ಮೂರು ಘಟಕಗಳನ್ನು ಮುಚ್ಚುವ, ಇನ್ನಷ್ಟು ಉದ್ಯೋಗಗಳನ್ನು ಕಡಿತ ಮಾಡುವ ಯೋಚನೆಯಲ್ಲಿದೆ ಎನ್ನಲಾಗಿದೆ.

ಕಾರುಗಳಿಗೆ ಬೇಡಿಕೆ 2011ರವರೆಗೂ ಇದೇ ರೀತಿ ಬಹಳ ಕೆಳಮಟ್ಟದಲ್ಲಿರುತ್ತದೆ. ಕಳೆದ ಹದಿಮೂರು ತಿಂಗಳಿಂದ ಯುರೋಪಿನಲ್ಲಿ ಕಾರುಗಳ ಬೇಡಿಕೆ ಇಳಿಯುತ್ತಲೇ ಇದೆ. ಆದ್ದರಿಂದ ಯುರೋಪಿನಲ್ಲೂ, ಜಪಾನಿನಲ್ಲೂ ಕಾರು ಉದ್ಯಮ ಚೇತರಿಸಿ ಕೊಳ್ಳುವ ನಿರೀಕ್ಷೆ ಸದ್ಯಕ್ಕೆ ಇಲ್ಲ ಎಂದು ಇನ್ನೊಂದು ದೊಡ್ಡ ಕಾರು ಕಂಪನಿ ರೆನಾಲ್ಟ್‌ನ ಅಧಿಕಾರಿಗಳು ಹೇಳುತ್ತಾರೆ.

ಆರ್ಥಿಕ ಚೇತರಿಕೆ ಇನ್ನೂ ದೂರದ ಮಾತು ಎನ್ನುತ್ತಾರೆ ಜಿ-8 ಮುಖಂಡರು

ಕಳೆದ ಜುಲೈ10ರಂದು ಇಟಲಿಯಲ್ಲಿ ಸಭೆ ಸೇರಿದ್ದ ಜಗತ್ತಿನ ಎಂಟು ಶ್ರೀಮಂತ ದೇಶಗಳ ಕೂಟ ಜಿ-8ರ ಮುಖ್ಯಸ್ಥರೂ ಪೂರ್ಣ ಆರ್ಥಿಕ ಚೇತರಿಕೆಗೆ ಇನ್ನೂ ಬಹಳ ಕಾಲ ಕಾಯಬೇಕಾದೀತು ಎಂದು ಒಪ್ಪಿಕೊಂಡಿದ್ದಾರೆ. ಅಮೆರಿಕಾದ ಅಧ್ಯಕ್ಷ ಒಬಾಮಾ "ನಮ್ಮ ಮಾರುಕಟ್ಟೆಗಳು ಸುಧಾರಿಸುತ್ತಿದ್ದರೂ, ಒಂದು ಜಾಗತಿಕ ಕುಸಿತವನ್ನು ತಡೆದಿರುವಂತೆ ಕಂಡರೂ ಇನ್ನೂ ಬಹಳಷ್ಟು ಜನಗಳು ಸಂಕಟ ಪಡುತ್ತಿದ್ದಾರೆ ಎಂಬುದು ನಮಗೆ ಗೊತ್ತು. ಆದ್ದರಿಂದ ಪೂರ್ಣ ಚೇತರಿಕೆ ಇನ್ನೂ ದೂರದ ಮಾತು, ನಮ್ಮ ಪ್ರೋತ್ಸಾಹಕ ಕ್ರಮಗಳನ್ನು ಕೊನೆಗೊಳಿಸುವುದು ಈಗಲೇ ಸಾಧ್ಯವಿಲ್ಲ, ಅದನ್ನು ಮುಮದುವರೆಸಲೇ ಬೇಕು, ಇಲ್ಲವಾದರೆ ಒಂದು ಬಲವಾದ ಚೇತರಿಕೆ ಸಾಧ್ಯವಿಲ್ಲ ಎಂದು ನಾವು ಒಪ್ಪಿದ್ದೇವೆ" ಎಂದು ಸಭೆಯ ನಂತರ ಪತ್ರಿಕಾ ಸಮ್ಮೇಳನದಲ್ಲಿ ಹೇಳಿದ್ದಾರೆ.

ಅಂತರ್ರಾಷ್ಟ್ರೀಯ ಹಣಕಾಸು ನಿಧಿ(ಐಎಂಎಫ್) ಕೂಡಾ ಜಾಗತಿಕ ಆರ್ಥಿಕ ಇನ್ನೂ ಹಿಂಜರಿತದಲ್ಲಿದೆ, ಚೇತರಿಕೆ ಬಹಳ ನಿಧಾನವಾಗಿ ಆರಂಭವಾಗಿದೆ, ದುರ್ಬಲವಾಗಿದೆ, ಆದ್ದರಿಂದ ಸರಕಾರಗಳ ಬೆಂಬಲ ಕ್ರಮಗಳು ಮುಂದುವರೆಯಬೇಕಾಗಿದೆ ಎಂದಿದೆ. ಈ ವರ್ಷ ಜಗತ್ತಿನ ಆರ್ಥಿಕ 1.3ಶೇ.ದಷ್ಟು ಕುಂಠಿತವಾಗುತ್ತದೆ ಎಂದು ಅದು ಹಿಂದೆ ಅಂದಾಜು ಮಾಡಿತ್ತು. ಅದನ್ನೀಗ 1.4ಶೇ.ಕ್ಕೆ ಹೆಚ್ಚಿಸಿದೆ. ಅಂದರೆ ನಿರೀಕ್ಷಿಸಿದ್ದಕ್ಕಿಂತ ಹೆಚ್ಚಿನ ಇಳಿಕೆ ಆಗಲಿದೆ. ಅಮೆರಿಕಾದ ಆರ್ಥಿಕ 2.6ಶೇ.ದಷ್ಟು, ಯುರೋಪಿನ ಆರ್ಥಿಕ 4.8ಶೇ.ದಷ್ಟು ಮತ್ತು ಜಪಾನಿನ ಆರ್ಥಿಕ 6ಶೇ.ದಷ್ಟು ಕುಂಠಿತಗೊಳ್ಳುತ್ತವೆ ಎಂದು ಐಎಂಎಫ್ ಹೇಳಿದೆ. ಆದರೂ ಜಾಗತಿಕ ಆರ್ಥಿಕ ಕುಂಠಿತತೆ ಕೇವಲ 1.4ಶೇ.ದಷ್ಟಿರಲು ಚೀನಾ ಮತ್ತು ಭಾರತದಂತಹ ಆರ್ಥಿಕಗಳು ಸ್ವಲ್ಪ ಮಟ್ಟಿನ ಬೆಳವಣಿಗೆ ಸಾಧಿಸಲು ಸಾಧ್ಯವಾಗಿರುವುದೇ ಕಾರಣ ಎನ್ನಲಾಗಿದೆ.

ಏಳು ತಿಂಗಳಲ್ಲಿ 53 ಅಮೆರಿಕನ್ ಬ್ಯಾಂಕುಗಳು ಮುಳುಗಿವೆ

ಬಂಡವಾಳಶಾಹಿ ಜಗತ್ತಿನಲ್ಲಿ ಚೇತರಿಕೆ ಇನ್ನೂ ದೂರದ ಮಾತು ಎಂಬುದಕ್ಕೆ ಸಾಕ್ಷಿಯೆಂಬಂತೆ ಜುಲೈ 10ರಂದು ಅಮೆರಿಕಾದ ಇನ್ನೊಂದು ಬ್ಯಾಂಕು ವ್ಯೊಮಿಂಗ್ ಬ್ಯಾಂಕ್ ಬಾಗಿಲು ಹಾಕಿತು. ಇದರೊಂದಿಗೆ ಈ ವರ್ಷದ ಏಳು ತಿಂಗಳಲ್ಲೇ ಮುಚ್ಚಿ ಹೋದ ಅಮೆರಿಕನ್ ಬ್ಯಾಂಕುಗಳ ಸಂಖ್ಯೆ 53 ಕ್ಕೇರಿದೆ. ಈ ತಿಂಗಳಲ್ಲೇ ಇದುವರೆಗೆ ಬಾಗಿಲೆಳೆದ ಬ್ಯಾಂಕುಗಳ ಸಂಖ್ಯೆ 9ಕ್ಕೇರಿದೆ. "ವಿಷಕಾರಿ" ಸಾಲಗಳು ತೀರುವ ವರೆಗೆ ಹಣಕಾಸು ವಲಯದ ಚೇತರಿಕೆ ಸಾಧ್ಯವಾಗದು ಎಂದು ಎರಡು ದಿನಗಳ ಹಿಂದೆ ಐಎಂಎಫ್ ಹೇಳಿತ್ತು. "ವಿಷಕಾರಿ" ಎಂದರೆ ಯಾವುದೇ ನಿಯಂತ್ರಣ, ಲಂಗುಲಗಾಮಿಲ್ಲದೆ ಅತಿ ಲಾಭದಾಸೆಯಿಂದ ಕೊಟ್ಟ ಸಾಲಗಳು.

ಈ ವ್ಯೊಮಿಂಗ್ ಬ್ಯಾಂಕಿನ ಆಸ್ತಿಗಳ ಮೊತ್ತ ಸುಮಾರು 7 ಕೋಟಿ ಡಾಲರುಗಳು, ಠೇವಣಿಗಳು 6.9 ಕೋಟಿ ಡಾಲರುಗಳು(ಸುಮಾರು 300ಕೋಟಿ ರೂ.ಗಳಿಗೂ ಹೆಚ್ಚು).

ಅಮೆರಿಕಾದ ದೊಡ್ಡ ಐಟಿ ಕಂಪನಿ ಸಿಸ್ಕೊ ಕೂಡಾ 1500 ಸುಮಾರು 25 ಕೋಟಿ ಡಾಲರುಗಳನ್ನು ಉಳಿಸಲು 1500ರಿಂದ 2000 ಉದ್ಯೋಗಗಳನ್ನು ಕಡಿತ ಮಾಡುವ ಯೋಚನೆ ಮಾಡುತ್ತಿದೆಯಂತೆ. 60000 ನೌಕರರಿರುವ ಏರ್ ಫ್ರಾನ್ಸ್ ಆರ್ಥಿಕ ಹಿಂಜರಿತ ವಿಮಾನಯಾನವನ್ನು ಬಲವಾಗಿ ತಟ್ಟಿರುವುದರಿಂದ ತನ್ನ ನೌಕರರ ಭಾಗಶಃ ನಿರುದ್ಯೋಗದ ಯೋಜನೆ ಹಾಕುತ್ತಿದೆಯಂತೆ.

ಅಧ್ಯಕ್ಷ ಲೂಲಾರ ಪ್ರಶ್ನೆ

"ಮಾರುಕಟ್ಟೆ ಎಲ್ಲಕ್ಕೂ ಔಷಧಿ ತಾನೇ? ಹಾಗಿದ್ದರೆ ಅಮೆರಿಕನ್ ಬ್ಯಾಂಕುಗಳು, ಜರ್ಮನ್ ಬ್ಯಾಂಕುಗಳು ವಿಫಲವಾದಾಗ ಅವು ಮಾರುಕಟ್ಟೆಗೆ ಏಕೆ ಹೋಗಲಿಲ್ಲ, ಪ್ರಭುತ್ವದ ಬಳಿಗೆ, ಸರಕಾರದ ಬಳಿಗೆ ಏಕೆ ಹೋದವು? 1980ರ, 1990ರ ದಶಕದಲ್ಲಿ ಐಎಂಎಫ್, ವಿಶ್ವಬ್ಯಾಂಕ್ ಬಳಿ ಬಡ ದೇಶಗಳ ಆರ್ಥಿಕ ಸಮಸ್ಯೆಗಳಿಗೆ ಮುಷ್ಕಳ ಪರಿಹಾರಗಳಿದ್ದವು. ಆದರೆ ಅಮೆರಿಕಾ, ಜಪಾನ್, ಯುರೋಪಿನ ಆರ್ಥಿಕಗಳಿಗೆ ಅವರ ಪರಿಹಾರಗಳೇನು?"

ಇದು ಜೂನ್ 15ರಂದು ಬ್ರೆಝಿಲ್‌ನ ಅಧ್ಯಕ್ಷ ಲೂಲಾ ದ ಸಿಲ್ವಾ 98ನೇ ಅಂತರ್ರಾಷ್ಟ್ರೀಯ ಕಾರ್ಮಿಕ ಸಮ್ಮೇಳನ (ಐಎಲ್‌ಸಿ)ದ ಪ್ಲೀನರಿ ಅಧಿವೇಶನದಲ್ಲಿ ಮಾತನಾಡುತ್ತಾ ಕೇಳಿದ ಪ್ರಶ್ನೆ. ಇಡೀ ಸಭೆ ದೀರ್ಘ ಚಪ್ಪಾಳೆಗಳ ಮೂಲಕ ಅವರಿಗೆ ಬೆಂಬಲ ಸೂಚಿಸಿತು. ಇದು ಐಎಲ್‌ಸಿ ಸಮ್ಮೇಳನಗಳಲ್ಲಿ ಒಂದು ಅಪರೂಪದ ದೃಶ್ಯ. ಸದ್ಯದ ಜಾಗತಿಕ ಆರ್ಥಿಕ ಸನ್ನಿವೇಶದ ಪ್ರತಿಬಿಂಬ ಕೂಡ. ಕೆಲವು ಭಾಷಣಕಾರರು ಅಮೆರಿಕನ್ ಬ್ಯಾಂಕುಗಳನ್ನು 'ದರೋಡೆಕೋರರು' ಎಂದಾಗ ದೀರ್ಘ ಚಪ್ಪಾಳೆಗಳ ಸ್ವಾಗತ ಅಲ್ಲಿ ನೆರೆದಿದ್ದವರ ಕ್ರೋಧವನ್ನು ಬಿಂಬಿಸಿದವು.

ಜಗದಗಲ

ಶರತ್‌ಚಂದ್ರ

ರಷ್ಯಾ - ಅಮೆರಿಕಾ ಶೃಂಗಸಭೆ

ರಷ್ಯಾ-ಅಮೆರಿಕಾ ಶೃಂಗಸಭೆ ಎಂಟು ವರ್ಷಗಳ ನಂತರ ನಡೆದು, ಎರಡೂ ದೇಶಗಳ ನಡುವೆ ಸಂಬಂಧಗಳಲ್ಲಿ ಕಂಡು ಬಂದಿದ್ದ ಗಟ್ಟಿ ಹಿಮ ಕರಗಿದೆ. ಎರಡೂ ದೇಶಗಳಲ್ಲಿ ಹೊಸ ಅಧ್ಯಕ್ಷರುಗಳು ಅಧಿಕಾರದಲ್ಲಿ ಬಂದಿರುವುದು. ಬುಶ್ ಆಡಳಿತ ಅವಧಿಯಲ್ಲಿ ಪಾತಾಳ ಕಂಡಿದ್ದ ಸಂಬಂಧಗಳು ಸುಧಾರಿಸುವ ಭರವಸೆ ಮೂಡಿಸಿತ್ತು. ಬುಶ್ ಕಾಲದ 'ಏಕ-ಧ್ರುವೀಯ' ನೀತಿ ಬಿಟ್ಟು ರಷ್ಯಾದ ಜೊತೆ ಸಂಬಂಧದಲ್ಲಿ ಹೊಸದಾಗಿ ಆರಂಭ ಮಾಡುವ ಒಬಾಮ ಹೇಳಿಕೆ ಇನ್ನಷ್ಟು ಆಶಾಭಾವನೆಗೆ ಎಡೆಮಾಡಿಕೊಟ್ಟಿತ್ತು. ಶೃಂಗಸಭೆಯಲ್ಲಿ ನಾಟಕೀಯ ಬೆಳವಣಿಗೆಗಳು ಆಗಲಿಲ್ಲ. ವ್ಯೂಹಾತ್ಮಕ ಶಸ್ತ್ರಾಸ್ತ್ರಗಳಲ್ಲಿ ಕಡಿತದ (Strategic Army Limitization Agrement START) ಒಪ್ಪಂದ START-1 ನ್ನು ಪುನರ್ ನವೀಕರಿಸಲಾಗಿದೆ. ಆ ಒಪ್ಪಂದ ಇನ್ನೂ ಆರು ತಿಂಗಳಲ್ಲಿ ಮುಗಿಯುವುದಿತ್ತು. ಅಷ್ಟರೊಳಗೆ ಹೊಸ ಒಪ್ಪಂದ ತಯಾರಿಸುವ, ಅದರ ಸ್ಥೂಲ ರೂಪುರೇಷೆಗಳ ಬಗ್ಗೆ ಸಹಮತ ರೂಪಿಸಲು ಸಾಧ್ಯ ಆಗಿದೆ. ವ್ಯೂಹಾತ್ಮಕ ಮತ್ತು ಅಣ್ವಸ್ತ್ರಗಳ ಕಡಿತದ ಬಗ್ಗೆ ಒಪ್ಪಂದ ಆಗಿದೆ. ಇನ್ನೂ ಹಲವು ವಿಷಯಗಳ ಬಗ್ಗೆ ವಿಚಾರ-ವಿನಿಮಯ ನಡೆದಿದ್ದು, ಮಾತುಕತೆ ಮುಂದುವರೆಸಲು ನಿರ್ಧರಿಸಲಾಗಿದೆ. ಅಫ್‌ಘಾನಿಸ್ತಾನಕ್ಕೆ ಹೋದ ಅಮೆರಿಕಾದ ವಿಮಾನಗಳಿಗೆ ರಷ್ಯಾದ ಮೂಲಕ ಹೋಗಲು ಅನುಮತಿ ಕೊಡಲು ರಷ್ಯಾ ಒಪ್ಪಿದೆ.

ಇನ್ನೊಂದು ಶಸ್ತ್ರಾಸ್ತ್ರ ಪೈಪೋಟಿಗೆ ಬ್ರೇಕ್?

ಇನ್ನಾವುದೇ ಪ್ರಮುಖ ವಿವಾದಿತ ವಿಷಯಗಳ ಬಗ್ಗೆ ಒಪ್ಪಂದ ಆಗಿಲ್ಲ. ಆದರೂ ರಷ್ಯಾ-ಅಮೆರಿಕಾ ಶೃಂಗಸಭೆ ನಡೆಯಿತು. ಮಾತುಕತೆ ಮುಂದುವರೆಸುವ ಬಗ್ಗೆ ಒಮ್ಮತ ಮೂಡಿತು. ಈಗಿನ ಪರಿಸ್ಥಿತಿಯಲ್ಲಿ ಇದು ದೊಡ್ಡ ಸಕಾರಾತ್ಮಕ ಬೆಳವಣಿಗೆ. ಬುಶ್ ಆಡಳಿತದ ಕಾಲದಲ್ಲಿ ಹಲವು ಪ್ರಯತ್ನಗಳಾದರೂ ಇನ್ನಿತರ ಶೃಂಗಸಭೆ ಅಥವಾ ಮಾತುಕತೆಗೆ, ಬುಶ್ ಸಂಪೂರ್ಣವಾಗಿ ವಿರೋಧಿಸಿದ್ದರು. ಹೊಸದಾಗಿ ಪುನರ್ ನವೀಕರಿಸಲಾದ ಒಪ್ಪಂದದಲ್ಲಿ ಅಣ್ವಸ್ತ್ರ ಸಜ್ಜಿತ ಸಿಡಿತಲೆಗಳ (War heads) ಸಂಖ್ಯೆಯ ಮಿತಿಯನ್ನು ಈಗಿನ 1700-2200 ರಿಂದ 1500 -1675ಕ್ಕೆ ಇಳಿಸಲಾಗಿದೆ. ಈ ಮಿತಿಯೊಳಗೆ ಎರಡೂ ದೇಶಗಳ ಅಣ್ವಸ್ತ್ರ ಸ್ಟಾಕನ್ನು ತರಲು ಏಳು ವರ್ಷಗಳ ಅವಕಾಶ ಇದೆ. ಆ ಮೇಲೂ ಎರಡೂ ದೇಶಗಳ ಬಳಿ ಇರುವ ಅಣ್ವಸ್ತ್ರಗಳು ಇಡೀ ಜಗತ್ತನ್ನು ಹಲವು ಬಾರಿ ನಾಶ ಮಾಡಲು ಸಾಕು. ಆದ್ದರಿಂದ ಇದು ಅಣು ನಿಶಸ್ತ್ರೀಕರಣದತ್ತ ಹೆಜ್ಜೆ ಏನಲ್ಲ. ಜಗತ್ತಿನಲ್ಲಿ ಅಣು ಯುದ್ಧದ ಅಪಾಯ ಕಡಿಮೆ ಮಾಡುವ ಮಹತ್ತರ ಹೆಜ್ಜೆ ಏನಲ್ಲ. ಆದರೂ ಅಮೆರಿಕಾದ ಹಲವು ಕ್ರಮಗಳಿಂದ ವ್ಯೂಹಾತ್ಮಕ ಶಸ್ತ್ರಾಸ್ತ್ರಗಳಲ್ಲಿ ಇನ್ನೊಂದು ಬಿರುಸಿನ ಪೈಪೋಟಿ ಮತ್ತು ಹೆಚ್ಚಳದತ್ತ ಓಟಕ್ಕೆ ಕನಿಷ್ಠ ಬ್ರೇಕ್ ಹಾಕಿದೆ.

ವಿವಾದಿತ ವಿಷಯಗಳ ಬಗ್ಗೆ ಮಾತುಕತೆ

ಇತರ ಹಲವು ಪ್ರಮುಖ ವಿಷಯಗಳ ಬಗ್ಗೆ ಮಾತುಕತೆ ಆರಂಭ ಆಗಿರುವುದು ಅಷ್ಟೇ ಮಹತ್ವದ ಬೆಳವಣಿಗೆ. ಜಾಗತಿಕ ಕ್ಷಿಪಣಿ ನಿರೋಧಕ ವ್ಯವಸ್ಥೆ ರೂಪಿಸುವ ಅಮೆರಿಕಾದ ಯೋಜನೆ ಮತ್ತು ಇದರ ಭಾಗವಾಗಿ ಜೆಕೊಸ್ಲೋವಾಕಿಯ ಮತ್ತು ಪೋಲೆಂಡ್‌ಗಳಲ್ಲಿ ಸ್ಥಾವರ ನಿರ್ಮಿಸುವ ಯೋಜನೆಯನ್ನು ರಷ್ಯಾ ಬಲವಾಗಿ ವಿರೋಧಿಸುತ್ತದೆ ಮತ್ತು 'ಆಕ್ರಾಮಕ' ಕ್ರಮ ಎಂದು ಪರಿಗಣಿಸುತ್ತದೆ. ಇದು ಈಗಿನ ಇರುವ ವ್ಯೂಹಾತ್ಮಕ (Strategic) ಶಸ್ತ್ರಾಸ್ತ್ರಗಳ ಸಮಬಲದ ಸಮತೋಲನ ಕೆಡಿಸುವ ಮತ್ತು ಹೊಸ ಶಸ್ತ್ರಾಸ್ತ್ರ ಪೈಪೋಟಿ ಆರಂಭಿಸಲು ಪ್ರಚೋದಿಸುವ ಕ್ರಮ ಎನ್ನುತ್ತದೆ ರಷ್ಯಾ. ಮಾಜಿ ಸೋವಿಯತ್ ಒಕ್ಕೂಟದ ದೇಶಗಳನ್ನು ಸೇರಿಸಿಕೊಂಡು ರಷ್ಯಾದ ಗಡಿಯವರೆಗೆ 'ನಾಟೋ ಮಿಲಿಟರಿ ಕೂಟ' ವನ್ನು ವಿಸ್ತರಿಸುವ ಕ್ರಮ ಸಹ ಅಹೋರಾತ್ರಿ 'ಆಕ್ರಾಮಕ' ಎಂದು ಪರಿಗಣಿಸುತ್ತದೆ. ಜಾರ್ಜಿಯಾ, ಉಕ್ರೇನ್‌ಗಳಲ್ಲಿ ಅಮೆರಿಕಾ ಮಧ್ಯ ಪ್ರವೇಶದಿಂದ ಆದ 'ಬಣ್ಣದ ಕ್ರಾಂತಿ' ಗಳ ಮೂಲಕ ಬಾಯಿಬಡುಕ ಸರ್ಕಾರ ಸ್ಥಾಪಿಸುವುದೂ ರಷ್ಯಾ ತನ್ನ ಭದ್ರತೆಗೆ ಅಪಾಯ ಎನ್ನುತ್ತದೆ. ಅದೇ ರೀತಿ. ಜಾರ್ಜಿಯಾ ಅಮೆರಿಕಾ ಕುಮ್ಮಕ್ಕಿನಿಂದ ರಷ್ಯಾದ ಬಂಡುಕೋರ ಪ್ರಾಂತ್ಯದ ಮೇಲೆ ಸಾರಿದ ದಾಳಿ ಸಹ ರಷ್ಯಾದ ಕೋಪಕ್ಕೆ ಕಾರಣವಾಗಿದೆ. ಈ ಬಗ್ಗೆಯೂ ಮಾತುಕತೆ ಮುಂದುವರೆಸುವ ಬಗ್ಗೆ ಒಮ್ಮತ ಮೂಡಿದೆ. ಅಲ್ಲದೆ ರಷ್ಯಾ-ಅಮೆರಿಕಾ ಸಂಬಂಧಗಳನ್ನು ಘರ್ಷಣೆಯ ಹಾದಿಯಿಂದ ಸಹಕಾರದ ಹಾದಿಗೆ ಬದಲಾಯಿಸಿದೆ. ಒಂದು ಕಾಲದಲ್ಲಿ ಅಮಾನತಿನಲ್ಲಿ ಇಡಲಾಗಿದ್ದ ಸರ್ಕಾರಗಳ ನಡುವಣ ಕಮೀಷನ್ ಪುನಃ ಸ್ಥಾಪಿಸಿ ಕೆಲಸ ಮಾಡಲು ನಿರ್ಧರಿಸಲಾಗಿದೆ. ಎಂಟು ಇತರ ವಿಷಯಗಳ ಬಗ್ಗೆ ಒಪ್ಪಂದಗಳನ್ನು ಸಹಿ ಮಾಡಲಾಯಿತು. ಒಟ್ಟಾರೆ ಪೂರ್ಣ ಸಂಘರ್ಷದ ಹಾದಿಯಲ್ಲಿದ್ದ ಸಂಬಂಧಗಳಿಗೆ ಬ್ರೇಕ್ ಹಾಕಲಾಗಿದೆ. ಒಟ್ಟಾರೆಯಾಗಿ ಪೂರ್ಣ ಸಂಘರ್ಷದ ಹಾದಿಯಲ್ಲಿದ್ದ ಸಂಬಂಧಗಳಿಗೆ ಬ್ರೇಕ್ ಹಾಕಲಾಗಿದೆ.

ಒಬಾಮಾ ಹೊಸ ವಿದೇಶ ನೀತಿ ಎಲ್ಲಿ?

ಆದರೆ ಶೃಂಗಸಭೆಯ ಮಾತುಕತೆಗಳ ಲಹರಿ, ಅಮೇರಿಕಾ ಧೋರಣೆಯಲ್ಲಿ ಒಬಾಮಾರ ವಿದೇಶ ನೀತಿ ತಂಡ ಮಾಸ್ಕೋದಲ್ಲಿ 'ಏಕ-ಧ್ರುವೀಯ ಜಗತ್ತಿನ' ಹಳೆಯ ಹಾಡು ಮರೆತಂತಿರಲಿಲ್ಲ. ಹೊಸದಾಗಿ ಆರಂಭ ಮಾಡುವತ್ತ ಯಾವುದೇ ಪ್ರಯತ್ನ, ರಿಯಾಯಿತಿ ಕಾಣಲಿಲ್ಲ. ರಷ್ಯಾದ ತಂಡ ತೋರಿಸಿದ ಹಲವು ರಿಯಾಯಿತಿ, ಹೊಸ ಆರಂಭಕ್ಕೆ ತವಕದಿಂದ ಮಾತ್ರವೇ ಕೆಲವು ಒಪ್ಪಂದಗಳು ಸಾಧ್ಯವಾಯಿತು. ವೇಗವಾಗಿ ಬದಲಾಗುತ್ತಿರುವ ವಿಶ್ವದಲ್ಲಿ ಒಬಾಮಾ ವಿದೇಶ ನೀತಿ ಕೂಡ 'ಬದಲಾವಣೆಗೆ' ಒಲವು ತೋರದಿದ್ದರೆ...?

ಎಡ ಪಂಥ

ಹಸಿವೆಂಬ ಕೆಂಡದೊಳು ಬೆಂದವರು ಕೂಡಿ
ಎಡಪಂಥ ಸಂಘಟನೆ ಕಟ್ಟಿದ್ದು ನೋಡಿ
ನಮ್ಮನ್ನು ಇದುವರೆಗೆ ಆಳಿದವರಲ್ಲ
ಹಸಿವೆಂದರೇನೆಂದು ಕಂಡವರೆ ಅಲ್ಲ.

\- ವಿಡಂಬಾರಿ

ಚೀನಾದ ಉರುಂಕಿಯಲ್ಲಿ ಜನಾಂಗೀಯ ಹಿಂಸೆಗೆ ಪ್ರಚೋದನೆ



ಚೀನಾದ ಪಶ್ಚಿಮ ಭಾಗದ ಮುಸ್ಲಿಂ ಬಹುಸಂಖ್ಯಾತ ಪ್ರಾಂತ್ಯ ಕ್ಸಿನ್‌ಜಿಯಾಂಗ್‌ನಲ್ಲಿ ಭಾರಿ ದಂಗೆಗಳು ಸಂಭವಿಸಿದ್ದು, ಇನ್ನೂ ಮುಂದುವರೆಯುತ್ತಿವೆ. ಮುಖ್ಯವಾಗಿ ಉರುಂಕಿಯಲ್ಲಿ ಭಾರಿ ದಂಗೆ ಹಿಂಸಾಚಾರ ಸಂಭವಿಸಿದ್ದು, ಭಾರಿ ಸಾವು-ನೋವು, ತೀವ್ರ ಪೋಲಿಸ್ ಕಾರ್ಯಾಚರಣೆ ನಡೆದ ವರದಿಗಳು ಬಂದಿವೆ. 150 ಕ್ಕೂ ಹೆಚ್ಚು ಜನ ಸತ್ತಿದ್ದು, ಸಾವಿರಕ್ಕೂ ಹೆಚ್ಚು ಜನ ಗಾಯಗೊಂಡಿದ್ದಾರೆ. ಅಮೇರಿಕಾದಲ್ಲಿ ನೆಲೆಸಿರುವ ಅನಿವಾಸಿ ಪ್ರತ್ಯೇಕವಾದಿ ಉಯ್ಗುರ್ ಮುಸ್ಲಿಂ ಸಮುದಾಯದ ಕೆಲವರ ಪ್ರಚೋದನೆಯಿಂದ ಈ ದಂಗೆಗಳು ನಡೆದಿವೆ. ಅವರ ಪ್ರಚೋದನೆಯ ಮೇರೆಗೆ ಕೆಲವು ಉಯ್ಗುರ್ ಮುಸ್ಲಿಂ ಕಿಡಿಗೇಡಿಗಳು ಚೀನಾದ ಬಹುಸಂಖ್ಯಾತ ಹನ್ ಸಮುದಾಯ ಜನರ ಮೇಲೆ ಮತ್ತು ಸಾರ್ವಜನಿಕ ಆಸ್ತಿಪಾಸ್ತಿಗಳ ಮೇಲೆ ಬಾರಿ ದಾಳಿ -ಹಿಂಸಾಚಾರ ನಡೆಸಿದರು. ಈ ತೀವ್ರ ಹಿಂಸಾಚಾರದ ಮತ್ತು ಅರಾಜಕತೆ ತಡೆಯಲು ಭದ್ರತಾ ಪಡೆಗಳು ತೀವ್ರ ಕ್ರಮ ಕೈಗೊಳ್ಳಬೇಕಾಯಿತು ಎಂದು ಚೀನಾದ ಪ್ರಾಂತೀಯ ಆಡಳಿತ ತಿಳಿಸಿದೆ. ಇದು ಅಮೆರಿಕಾದಲ್ಲಿ ನೆಲೆಸಿರುವ ಅನಿವಾಸಿ ಉಯ್ಗುರ್ ಮುಸ್ಲಿಮರ ಚಿತಾವಣೆ ಎನ್ನುವುದಕ್ಕೆ ತನ್ನ ಬಳಿ ಪುರಾವೆ ಇದೆ ಎಂದು ಹೇಳಿಕೆ ನೀಡಿದೆ.

ಸೋವಿಯತ್ ಒಕ್ಕೂಟದ ವಿಭಜನೆಯ ನಂತರ 1990ರ ದಶಕದಿಂದಲೇ ಮಧ್ಯ ಏಷ್ಯಾದ ಪ್ರಾಕೃತಿಕ ತೈಲ ಸಂಪತ್ತಿನ ಮೇಲೆ ಹಿಡಿತ ಸಾಧಿಸಲು ಈ ಪ್ರದೇಶದಲ್ಲಿ ಬಹುಸಂಖ್ಯಾತರಾಗಿರುವ ಮುಸ್ಲಿಮರಲ್ಲಿ ಪ್ರತ್ಯೇಕತಾವಾದ, ಜನಾಂಗೀಯವಾದಕ್ಕೆ ಕುಮ್ಮಕ್ಕು ಕೊಡುವ ಕಾರ್ಯಕ್ರಮವನ್ನು ಅಮೇರಿಕಾದ ಸಿಐಎ ಹೊಂಚಿಕೊಂಡಿತ್ತು. ಎಲ್ಲ ಕಡೆಯಂತೆ ಇಲ್ಲೂ ಇಸ್ಲಾಮಿಕ್ ಮೂಲಭೂತವಾದಿ ಗುಂಪುಗಳನ್ನು ಹುಟ್ಟು ಹಾಕಲಾಗಿತ್ತು. ಅಲ್ಲದೆ ಇತರ ಗುಂಪುಗಳಾಗಿ ಬೆಂಬಲಾರ್ಥವಾಗಿ ಅಮೇರಿಕಾಕ್ಕೆ ವಲಸೆ ಹೋದ ಇತರ ಜನಗಳಿಗೆ ಪೂರ್ಣಬೆಂಬಲ ನೀಡುತ್ತಿತ್ತು. ಸೋವಿಯತ್ ಒಕ್ಕೂಟದಂತೆ ಮುಂದೊಂದು ದಿನ ಚೀನಾದಲ್ಲೂ ಪ್ರತ್ಯೇಕತೆ ಆಧಾರದ ಮೇಲೆ ವಿಭಜನೆ ತರಲು 'ಮಾಸ್ಟರ್ ಪ್ಲಾನ್' ಹಾಕಿತ್ತು. ಅವರ ಫಲವೇ ಈಗಿನ ದಂಗೆಗಳು ಎಂತ ಕಾಣುತ್ತದೆ.

ಪ್ರತಿಭಟನಾ ಪಾಪ್ ಸಂಗೀತ

ಪಾಕಿಸ್ತಾನದ ಸಂಗೀತಗಾರ ಲಾಲ್ ತನ್ನ ಆಲ್ಬಮ್ ಉಮೀದ್-ಇ-ಸೆಹರ್-2009 ಮೂಲಕ ಭಾರಿ ಸಂಚಲನ ಸೃಷ್ಟಿಸಿದರು. ವಜಾಗೊಂಡಿದ್ದ ನ್ಯಾಯಾಧೀಶರ ನೇಮಕ ಹಾಗೂ ಪ್ರಜಾಪ್ರಭುತ್ವದ ಉಳಿವಿಗಾಗಿ ಪಾಕಿಸ್ತಾನದಲ್ಲಿ ನಡೆಯುತ್ತಿದ್ದ ಜನಾಂದೋಲನಕ್ಕೆ ಈ ಆಲ್ಬಮ್ ಹೊಸ ಬೆಳಕಿನ ಆಶಾಕಿರಣವನ್ನು ಮೂಡಿಸಿತು. ಲಾಲ್ ಪಾಕಿಸ್ತಾನದ ಕಮ್ಯೂನಿಸ್ಟ್ ಮಜ್ದೂರ್ ಕಿಸಾನ್ ಪಕ್ಷದ ಸಂಪರ್ಕವನ್ನು ಹೊಂದಿದ್ದು ಅವರ ಹಾಡುಗಳು ಪಕ್ಷದ ಕಾರ್ಯಕರ್ತರನ್ನು ಸಹ ಉನ್ನತ ಮಟ್ಟಕ್ಕೇರಿಸಿದವು. ಹಿಂದೆ ಮುಷರಫ್ ವಜಾ ಮಾಡಿದ್ದ ನ್ಯಾಯಾಧೀಶರನ್ನು ಮತ್ತೆ ನೇಮಕ ಮಾಡಬೇಕೆಂಬ ಚಳವಳಿಯಲ್ಲಿ ಲಾಲ್ ಅವರ ಹಾಡುಗಳು ಜನಪ್ರಿಯತೆಯ ತುತ್ತತುದಿಗೆ ಏರಿದವು.

ಅವರ ಹಾಡು 'ಕಲ್ ಔರ್ ಆಜ್ ಕಲ್-ನೆನ್ನೆ, ಇವತ್ತು ಮತ್ತು ನಾಳೆ' ವಕೀಲರ ಚಳವಳಿಯ ಕ್ರಾಂತಿ ಗೀತೆಯಾಯಿತು. ಅವರ ಬಹುತೇಕ ಹಾಡುಗಳು ...ದ ಹಬೀಬ್ ಜಲಿಬ್ ಮತ್ತು ಫೈಜ್ ಅಹಮದ್ ಫೈಜ್ ಅವರ ಕವಿತೆಗಳಾಗಿದ್ದವು. ಕಲ್ ಔರ್ ಆಜ್ ಕಲ್ ಆಲ್ಬನ್‌ನ ಶೀರ್ಷಿಕೆ ಹಾಡು ಭಾರಿ ಪ್ರಭಾವ ಬೀರಿತ್ತು. ಉಮೀದ್-ಇ-ಸೆಹರ್ ಆಲ್ಬಮ್ ಮಂಕಾಗುತ್ತಿರುವ 'ಪ್ರತಿಭಟನಾ ಸಂಗೀತ' ಚಳವಳಿಗಳಿಗೆ ಪುನಶ್ಚೇತನ ನೀಡುವಂತಿದೆ. ಹಿಂದೆ ಪ್ರತಿಭಟನೆಗಳ ಹೆಸರಾಂತ ಗಾಯಕರಾದ ಬ್ರೂಸ್ ಸ್ಪ್ರಿಂಗ್‌ಸ್ಟೀನ್ ಮತ್ತು ನೀಲ್ ಯಂಗ್ ರಂತವರು ಭಯೋತ್ಪಾದನೆ ವಿರುದ್ಧ ಸಮರ'ದ ವಿರುದ್ಧ ಹಾಡು ಕಟ್ಟಿದರು. ಅಮೆರಿಕದ ಸಮಕಾಲೀನ ಚಳವಳಿಗಳ ಹಾಡುಗಾರರಾದ ಅಲಿಕಾ ಬೆಥ್ ಮೂರೆ ಮತ್ತು ...ಕಿಎ ಪಿಂಕ್ಸ್ ಅವರ 'ವೆನ್ ದ ಪ್ರೆಸಿಡೆಂಟ್ ಟಾಕ್ಸ್ ಟು ಗಾಡ್' ಈ ಶತಮಾನದ ತುಂಬಾ ಪ್ರಭಾವಶಾಲಿ ಹಾಡುಗಳೆಂದು ಜನಪ್ರಿಯವಾಗಿವೆ.

... ಹಾಡುಗಳು ಐತಿಹಾಸಿಕವಾಗಿ ಆರಂಭದಿಂದಲೇ ವಿವಾದಕ್ಕೆ ಗುರಿಯಾದುದ್ಧಾಗಿದೆ. 1963ರಲ್ಲಿ ಬಿಡುಗಡೆಯಾದ ಬಾಬ್ ಡೈಲನ್ ಅವರ 'ಬ್ಲೋಯಿನ್ ಇನ್ ದಿ ವಿಂಡ್', 1979ರಲ್ಲಿ ಬಿಡುಗಡೆಯಾದ ಪಿಂಕ್ ಫ್ಲಾಯ್ಡ್ ಅವರ 'ಅನದರ್ ಬ್ರಿಕ್ ಇನ್ ದಿ ವಾಲ್' ಆಲ್ಬಮ್‌ಗಳು 60 ಮತ್ತು 70ರ ದಶಕದಲ್ಲಿ ಸಾಮಾಜಿಕವಾಗಿ ತುಳಿತಕ್ಕೊಳಗಾದವರ ಹೋರಾಟದ ಹಾಡುಗಳಾಗಿವೆ. ಎಲ್ಲ ಕಾಲಗಳಿಗೂ ಅತ್ಯಂತ ಶ್ರೇಷ್ಠವಾದ ಸಂಗೀತ ಮೇಳ ಎಂದರೆ 1969ರಲ್ಲಿ ನ್ಯೂಯಾರ್ಕ್‌ನಲ್ಲಿ ಜರುಗಿದ 'ವುಡ್‌ಸ್ಟಾಕ್ ಮ್ಯೂಸಿಕ್ ಮತ್ತು ಕಲಾ ಮೇಳ'. ಇದು ವಾಣಿಜ್ಯ ಮೇಳವಾಗಿ ಆರಂಭಗೊಂಡರು ಬರಬರುತ್ತಾ ಯುವಜನ ಚಳವಳಿಯಾಗಿ ಮಾರ್ಪಟ್ಟಿತು. ವಿಯಟ್ನಾಮ್‌ನಲ್ಲಿನ ಯುದ್ಧ ನಿರ್ಣಾಯಕ ಹಂತದಲ್ಲಿದ್ದಾಗ ಮತ್ತು ಅಮೆರಿಕದಲ್ಲಿ ವರ್ಣಬೇಧ ನೀತಿ ದೊಡ್ಡ ರೋಗವಾಗಿ ಹಿಂಡುತ್ತಿದ್ದ ಸಂದರ್ಭದಲ್ಲಿಯೂ ಈ ಮೇಳ ಯಾವುದೇ ಹಿಂಸಾಚಾರಗಳಿಲ್ಲದೆ ಸುಸೂತ್ರವಾಗಿ ನಡೆಯಿತು.

ಮುಂಬೈನಲ್ಲಿ ಸ್ಥಳೀಯ ಕಾಲೇಜು ಆಡಳಿತ ಮಂಡಳಿಯೊಂದು ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಬ್ಯಾಂಡ್ ಪ್ರವೇಶ ನಿಷೇಧಿಸಿದಾಗ ಆಯೋಜಿಸಿದ್ದ ಇಂಡಿಪೆಂಡೆನ್ಸ್ ರಾಕ್ ಫೆಸ್ಟಿವಲ್ ಭಾರತದ ರಾಕ್ ಇತಿಹಾಸದಲ್ಲಿ ಕೆಂಪು ದಿನವಾಗಿದೆ. ಸಂಪ್ರದಾಯವಾದಿಗಳು ಈ ಪಂಕ್ ರಾಕ್ ಸಂಗೀತವನ್ನು ವಿಧ್ವಂಸಕ ಕೃತ್ಯ ಎಂದು ಟೀಕಿಸಿದರು. ಪಂಕ್ ರಾಕ್ ಸಂಗೀತ ರಾಜಕೀಯ ಮತ್ತು ಸರ್ಕಾರದ ವಿರುದ್ಧದ ಪ್ರಭಾವಶಾಲಿ ಸಾಹಿತ್ಯವನ್ನು ಹೊಂದಿದೆ.

ಭಾರತದಲ್ಲಿ ಟೈಮ್ಸ್ ಮ್ಯೂಸಿಕ್ ಚಳವಳಿ ಹಾಡುಗಳ ಆಲ್ಬಮ್ 'ವ್ಯೋಮ್' ನ್ನು 2007ರಲ್ಲಿ ಬಿಡುಗಡೆ ಮಾಡಿತು. ಈ ಆಲ್ಬಮ್ ಕಬೀರರ ವಚನಗಳು, ದುಷ್ಯಂತ್ ಕುಮಾರ್ ಅವರ ಪ್ರಗತಿಪರ ಪದ್ಯಗಳು, ರಾಜಸ್ಥಾನ ಮಹಿಳೆಯರ ಜಾನಪದ ಗೀತೆಗಳು, ನರ್ಮದಾ ಕಣಿವೆಯ ಬುಡಕಟ್ಟು ಜನಾಂಗದ ಹಾಡುಗಳು ಮತ್ತು ಸಮಕಾಲೀನ ಪಂಜಾಬಿ ನಾಟಕಗಳನ್ನು ಒಳಗೊಂಡಿದೆ.

2009ರ ಲೋಕಸಭೆ ಚುನಾವಣೆ ಸಂದರ್ಭದಲ್ಲಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ಬಿಡುಗಡೆ ಮಾಡಿದ್ದ ಆಲ್ಬಮ್‌ನಲ್ಲಿ ಮಹಿಳಾ ಮೀಸಲಾತಿಗೆ ಸಂಬಂಧ 100 ಮೇ 33 ಲೇಕೆ ರಹೇಂಗೆ (ಶೇಕಡ 100ರಲ್ಲಿ 33 ಪಾಲು ಪಡೆಯೋಣ), ಮೆಹಂಗಿ ರೋಟಿ, ಸಸ್ತಿ ಜಾನ್ (ರೋಟಿ ದುಬಾರಿ ಪ್ರಾಣ ಅಗ್ಗ) ನಂತಹ ಹಾಡುಗಳು ವ್ಯವಸ್ಥೆ ವಿರೋಧಿಯಾಗಿವೆ. ಇವು ಭಾರತದಲ್ಲಿ ಚುನಾವಣೆ ಸಂದರ್ಭದಲ್ಲಿ ಬಿಡುಗಡೆಯಾದ ಹಿಂದಿ ರಾಕ್ ಸಂಗೀತಗಳಾಗಿವೆ. ಹಲವಾರು ಸಮಾಜವಾದಿ ಪಕ್ಷಗಳ ಕ್ರಾಂತಿ ಗೀತೆಗಳಾದ ಹಾಗೂ ಹಲವಾರು ಭಾಷೆಗಳಿಗೆ ತರ್ಜುಮೆಯಾಗಿರುವ 'ದಿ ಇಂಟರ್‌ನ್ಯಾಷನಲ್' ಜಗತ್ತಿನ ಬಹುಜನಪ್ರಿಯ ಹಾಡಾಗಿದೆ. ಇದನ್ನು ಆಯಾ ದೇಶದ ರಾಜಕಾರಣಕ್ಕೆ ಅನುಗುಣವಾಗಿ ಭಾಷಾಂತರ ಮಾಡಿದ್ದರೂ ಲಯ ಮಾತ್ರ ಒಂದೇ ಆಗಿದೆ.

ಲಾಲ್ ಪಾಕಿಸ್ತಾನದಲ್ಲಿ ಇತ್ತೀಚೆಗೆ 'ಜಾಗೋ ಜಾಗೋ' ಎಂಬ ದಕ್ಷಿಣ ಏಷ್ಯಾದ ತಬಲ, ಹಾರ್ಮೋನಿ, ಕೊಳಲಿನಂತಹ ವಾದ್ಯಗಳನ್ನು ಬಳಸಿಕೊಂಡು ರಚಿಸಲಾದ ಉರ್ದು ಆವೃತ್ತಿಯ ಸಂಗೀತವನ್ನು ಬಿಡುಗಡೆ ಮಾಡಿದೆ. ಇದನ್ನು ಮಾಡುವಾಗ ಮೂಲ ಕ್ರಾಂತಿಗೀತೆಯ ಸ್ಪೂರ್ತಿಯನ್ನು ಉಳಿಸಿಕೊಳ್ಳುವುದರೊಂದಿಗೆ ದಕ್ಷಿಣ ಏಷ್ಯಾದಲ್ಲಿ ಭಾರಿ ಮನ್ನಣೆ ಪಡೆಯುವಂತೆ ಪುನರ್ ರೂಪಿಸಲಾಗಿದೆ.

ಪ್ರತಿಭಟನಾ ಸಂಗೀತ ಸದಾ ಪ್ರಗತಿಪರ ರಾಜಕಾರಣದ ಅವಿಭಾಜ್ಯ ಅಂಗವಾಗಿರುವುದರಿಂದ ಈ ಹಾಡುಗಳನ್ನು ಪುನರ್ ರೂಪಿಸಿರುವುದು ಯುವಜನರಿಗೆ ಹಲವಾರು ಹಾದಿಗಳನ್ನು ತೆರೆದಿಟ್ಟಿದೆ. ಸಂಗೀತದ ವಿತರಣೆಯನ್ನು ಇಂಟರ್‌ನೆಟ್ ಕ್ರಾಂತಿಕಾರಿಗೊಳಿಸಿದ್ದು ಜಗತ್ತಿನಾದ್ಯಂತೆ ಲಭ್ಯವಾಗುವಂತೆ ಮಾಡಿದೆ.

ಅಮೇರಿಕಾದ ಪಾಪ್ ಹಾಡುಗಾರ ಮೈಕೆಲ್ ಜಾಕ್ಸನ್ ತೀರಿಕೊಂಡು ಎಷ್ಟೋ ದಿನಗಳಾದರೂ ಆತನನ್ನು ಮುತ್ತಿಕೊಂಡಿರುವ ವಿವಾದಗಳಿಗೆ ಬಹುಶಃ ಈಗಲೇ ಸಾವಿಲ್ಲ. ಅದಿನ್ನು ಬಹಳ ದಿನಗಳ ಕಾಲ ಮಾರ್ದನಿಸುತ್ತಾ ಇರಬಹುದು. ಮೈಕೆಲ್ ಜಾಕ್ಸನ್ ಪ್ರತಿನಿಧಿಸುವುದು ಒಂದು ಬಗೆಯ ಪಾಪ್ ಸಂಗೀತ ಪ್ರಕಾರ. ಆದರೆ ಪಾಪ್ ಸಂಗೀತ ಎಂದರೆ ಅದೊಂದೇ ಬಗೆ ಅಲ್ಲ. ಜನಪರ ಹೋರಾಟ, ಪ್ರಗತಿಪರ ಆಂದೋಲನಗಳಿಗೆ ಜೀವ ತುಂಬಿದ ಪ್ರತಿಭಟನಾ ಪಾಪ್ ಸಂಗೀತ ಪರಂಪರೆಯೂ ಇದೆ



ಖ್ಯಾತ ಪಾಪ್ ಗಾಯಕ ಬಾಬ್ ಡೈಲನ್

ಪತ್ರಿಕೆಗಳು - ಟಿ.ವಿ. ವಾಹಿನಿಗಳು ಮತ್ತು ಸಿಪಿಐ(ಎಂ) ಬಗ್ಗೆ ಅಪಪ್ರಚಾರ

ಪುಟ 11 ರಿಂದ

ಪ್ರಚಾರ ಆಗಾಗ್ಗೆ ಸಿಗುವುದನ್ನು ನೋಡಿದ ನಮಗೆ ಪತ್ರಿಕೆ-ಟಿ.ವಿ.ಗಳ ಬಗ್ಗೆ ಅವು ಇರುವುದೇ ಎಲ್ಲರಿಗಾಗಿ ಎಂಬ ಭ್ರಮೆ ಹುಟ್ಟುತ್ತದೆ. ಅದರಲ್ಲಿ ಇರುವ ಹಲವಾರು ಸಂಗತಿಗಳನ್ನು ನಮಗೆ ಅರಿವಿಲ್ಲದೆಯೇ ನಂಬಲಾರಂಭಿಸುತ್ತೇವೆ.

ನಮ್ಮ ಇಂದಿನ ಶಕ್ತಿ ಹಾಗೂ ಚಳುವಳಿಗಳು ಅಪರೂಪವಾಗಿ ಕೆಲ ಸಂದರ್ಭಗಳ ಹೊರತು ...ರು ಬಂಡವಾಳಶಾಹಿಗೆ ಇನ್ನೂ ದೊಡ್ಡ ಆತಂಕಗಳನ್ನು ಹುಟ್ಟಿಸಿಲ್ಲ ಎಂಬುದಷ್ಟು ನಮಗೆ ...ಲ್ಲಿಯ ಪತ್ರಿಕೆ-ಟಿ.ವಿ.ಗಳಲ್ಲಿ ಸಿಗುತ್ತಿರುವ ಪ್ರಚಾರಕ್ಕೆ ಆಧಾರ. ಕಮ್ಯೂನಿಸ್ಟ್ ಚಳುವಳಿ ಹಾಗೂ ಸಿಪಿಐ(ಎಂ) ಪಕ್ಷ, ಬೆಳೆದು ಕೇರಳ, ಪಶ್ಚಿಮ ಬಂಗಾಳಗಳಲ್ಲಿ ಅಲ್ಲಿಯ ಬಂಡವಾಳಶಾಹಿಗೆ ಹಾಗೂ ಅಲ್ಲಿಯ ನಮ್ಮ ಬಲದಿಂದ ದೇಶದ ಬಂಡವಾಳಶಾಹಿಗೆ ಆತಂಕವೊಡ್ಡಬಲ್ಲ ಸಾಮರ್ಥ್ಯ ಗಳಿಸಿರುವುದರಿಂದ ಅಲ್ಲಿ ಪತ್ರಿಕೆ, ಟಿ.ವಿ.ಗಳ ವರ್ತನೆ ತೀರ ವಿರುದ್ದವಾದದ್ದು. ಕರ್ನಾಟಕದಲ್ಲಿ ಯಾವ ಸರ್ಕಾರ ಮತ್ತು ರಾಜಕೀಯ ಪಕ್ಷ ಆಡಳಿತಕ್ಕೆ ಬರುತ್ತದೋ ಆ ಎಲ್ಲ ಸರ್ಕಾರಗಳ, ಪಕ್ಷಗಳ ಮುಖ್ಯಸ್ಥರು ಹೇಳಿದ್ದು, ಹೇಳದೆ ಇದ್ದುದೆಲ್ಲ ಮುಖಪುಟದಿಂದ ಇಡೀ ಪತ್ರಿಕೆಯುಲ್ಲೂ ವ್ಯಾಪಿಸಿರುತ್ತದೆ. ಆದರೆ ಪಶ್ಚಿಮ ಬಂಗಾಳ, ಕೇರಳಗಳಲ್ಲಿ ಸರ್ಕಾರದ ಕಾರ್ಯಕ್ರಮ ಮುಖ್ಯಮಂತ್ರಿ, ಮಂತ್ರಿಗಳ ಹೇಳಿಕೆಗಳು ಕ್ರಮಗಳಿಗೆ ಸಿಪಿಐ(ಎಂ) ಪಕ್ಷ ಮತ್ತು ಎಡರಂಗದ ಹೇಳಿಕೆ, ಚಟುವಟಿಕೆಗಳಿಗೆ ವಸ್ತುನಿಷ್ಠ ಪ್ರಚಾರವೇ ಇಲ್ಲ. ಬದಲಾಗಿ ಪ್ರತಿಯೊಂದನ್ನು ವ್ಯಂಗ್ಯ ಅಪಹಾಸ್ಯ ಮಾಡುತ್ತಾ ಸುಳ್ಳುಗಳ ಸುರಿಮಳೆ ಸುರಿಸುತ್ತಾ ವಿಷಕಾರಿ ಅಪಪ್ರಚಾರ ಮಾಡುವುದೇ ಪತ್ರಿಕೆ-ಟಿ.ವಿ.ಗಳ ಪ್ರಧಾನ ಕೆಲಸವಾಗಿದೆ. ವಿರೋಧ ಪಕ್ಷಗಳಲ್ಲಿ ಇರುವ ವೈಚಾರಿಕ ಕೊರತೆಗೆ ತಮ್ಮ ವಿಶ್ಲೇಷಣೆ ಲೇಖನಗಳಿಂದ ಶಕ್ತಿ ನೀಡುತ್ತಾ ಬಂಡವಾಳಶಾಹಿ ಪಕ್ಷಗಳು ಮತ್ತು ಪತ್ರಿಕೆ ಟಿ.ವಿ.ವಾಹಿನಿಗಳು ಒಂದು ಪ್ರಬಲ ದುಷ್ಟಕೂಟವಾಗಿದ್ದಾರೆ. ಈ ಪತ್ರಿಕೆ- ಟಿ.ವಿ.ಗಳ 'ನಿಷ್ಪಕ್ಷಪಾತ, ತಟಸ್ಥ ಧೋರಣೆ ಅಲ್ಲಿ ಬಯಲಾಗಿದೆ.'

ಮಹಿಳೆ : ಸಾಧನೆಯ ದಾಪುಗಾಲು ಇಲ್ಲಿ... ಅಲ್ಲಿ

ಪುಟ 16 ರಿಂದ

ಇವೆಲ್ಲ ಸರಿ, ಈ ಮಹಿಳಾ ದೇಶದಲ್ಲಿ ಪುರುಷರು ಏನು ಮಾಡುತ್ತಾರೆ ಎನ್ನೋದೇ ಮುಂದಿನ ಪ್ರಶ್ನೆ ಅಂಗಡಿ, ಹೋಟೆಲ್‌ಗಳಲ್ಲಿ ಅಲ್ಲೊಬ್ಬ, ಇಲ್ಲೊಬ್ಬ ಪುರುಷರ ದರ್ಶನ ಆದರೂ, ಉಳಿದವರೆಲ್ಲ ಎಲ್ಲಿಗೆ ಹೋದರು ಎಂಬ ಪ್ರಶ್ನೆಗೆ ಸ್ಪಷ್ಟ ಉತ್ತರ ಕೊನೆಗೂ ನಮಗೆ ಸಿಕ್ಕಿಲ್ಲ. ಪುರುಷರೆಲ್ಲ ಹೆಚ್ಚಾಗಿ ಕಾರ್ಖಾನೆಗಳಲ್ಲಿ ಹಾಗೂ ಮನೆಗಳಲ್ಲಿ ಕೆಲಸ ಮಾಡುತ್ತಾರೆ ಎಂದು ನಮ್ಮ ಗೈಡ್ ಹೇಳಿದರೂ, ಅದನ್ನು ಕಂಡುಹಿಡಿಯೋದು ಸಾಧ್ಯ ಆಗಲಿಲ್ಲ ಎನ್ನೋ ಕೊರಗು ಮಾತ್ರ ನಮ್ಮನ್ನು ಕಾಡುತ್ತಿದೆ!

JANASHAKTHI KANNADA VARA PATRIKE JULY 26, 2009 Price : Rs. 5/- No. KARKAN /2006/17926 Postal Reg. No. RNP/KA/BG5/2078/2007-

ಮಹಿಳೆ : ಸಾಧನೆಯ ದಾಪುಗಾಲು ಇಲ್ಲಿ... ಅಲ್ಲಿ

ಮಹಿಳೆಯರು, ಭಾರತದ ಮಹಿಳೆಯರು ತಾವು ಪುರುಷರಿಗಿಂತ, ಯಾರಿಗಿಂತಲೂ ಕಡಿಮೆ ಏನಿಲ್ಲ. ಹಲವಾರು ವಿಷಯಗಳಲ್ಲಿ ನಾವು ಪುರುಷರಿಗೂ ಒಂದು ಕೈ ಮುಂದೆ ಎಂದು ಸಾಬೀತು ಮಾಡುತ್ತಲೇ ಬಂದಿದ್ದಾರೆ. ಇಷ್ಟಾದರೂ ಮಹಿಳೆಯರನ್ನು ನಾಲ್ಕು ಗೋಡೆಗಳ ನಡುವೆ, ಅಡುಗೆ ಮನೆಯ ಚೌಕಟ್ಟಿನೊಳಗೆ ಬಂಧಿಸಿಡುವ ಮೌಲ್ಯಗಳು ಇನ್ನು ನಮ್ಮ ಸಮಾಜದಲ್ಲಿ ತುಂಬಾ ವ್ಯಾಪಕವಾಗಿವೆ. ಮಾತ್ರವಲ್ಲ ದುಡಿಯುವ ಮಹಿಳೆಯರ ದುಡಿಮೆಯನ್ನು ಗುರುತಿಸುವ ದೃಷ್ಟಿಯನ್ನು ಸಮಾಜದಲ್ಲಿ ಇಲ್ಲ. ಹೋಗಲಿ ಕ್ರೀಡಾರಂಗದಲ್ಲಿ ಏನಾದರೂ ಸಾಧಿಸಿದರೆ ಅದನ್ನಾದರೂ ಗುರುತಿಸುವ ಸ್ಥಿತಿ ಇದೆಯೇ? ಇತ್ತೀಚೆಗೆ ರಷ್ಯಾ ದೇಶದ ಕಜಾನ್‌ನಲ್ಲಿ ನಡೆದ ಚಾಂಪಿಯನ್ ಚಾಲೆಂಜರ್ಸ್ ಮಹಿಳಾ ಹಾಕಿ ಅಂತರಾಷ್ಟ್ರೀಯ ಟೂರ್ನಿ ಗೆದ್ದುಬಂದ ಸುರೀಂಧರ್ ಕೌರ್ ನೇತೃತ್ವದ ಮಹಿಳಾ ಹಾಕಿ ತಂಡವನ್ನು ಸ್ವಾಗತಿಸಲು ವಿಮಾನ ನಿಲ್ದಾಣದಲ್ಲಿ ಯಾರೊಬ್ಬರೂ ಇರಲಿಲ್ಲವಂತೆ.

ನೆರೆಯ ದೇಶ ಚೀನಾದಲ್ಲಿ ಕೆಲವು ಕೊರತೆಗಳ ನಡುವೆಯೂ ಚೀನಾ ದೇಶದಲ್ಲಿ ಆರ್ಥಿಕ, ಸಾಮಾಜಿಕ ಕ್ಷೇತ್ರದಲ್ಲಿ ಮಹಿಳೆಯರು ಸಾಧಿಸಿರುವ ಪ್ರಗತಿ ಅಗಾಧವೇ. ಸುಚೇತನಾ ನಾಯ್ಕ ಅವರು ಚೀನಾದ ಸಾರ್ವಜನಿಕ ಜೀವನದಲ್ಲಿ ಮಹಿಳೆಯರ ಪಾತ್ರದ ಬಗ್ಗೆ ತಾವು ನೋಡಿದ್ದನ್ನು ಬರೆದಿದ್ದಾರೆ ಜುಲೈ 7, 09 ರ ಪ್ರಜಾವಾಣಿಯಲ್ಲಿ. ಲೇಖನದ ಆಯ್ದ ಭಾಗ ಹೀಗಿದೆ.

ಚೀನಾ ಚೆಲುವೆಯರ ಚಿತ್ತಾರ

....ಮಾಲಿನ್ಯದ ಗಂಧಗಾಳಿಯೇ ಇಲ್ಲದೇ ಶುಭ್ರ ವಾತಾವರಣದ ಚೀನಾದ ಪ್ರಮುಖ ನಗರಿಗಳ ತುಂಬೆಲ್ಲ, ಗಿಡ್ಡನೆಯ ಅಂಗಿತೊಟ್ಟು, ಪಿಳಿ ಪಿಳಿ ಕಣ್ಣುಬಿಡುತ್ತಾ ತೆಳ್ಳನೆಯ ನಡುವಿನ ಈ ಶ್ವೇತ ಸುಂದರಿಯರನ್ನು ನೋಡುವುದೇ ಒಂದು ರೀತಿಯ ಸಂತಸ.

ಮಾರುಕಟ್ಟೆಯೇ ಇರಲಿ, ಯಾವುದೇ ಸ್ಟಾರ್ ಹೋಟೆಲ್‌ಗಳಾಗಲಿ, ಷಾಪಿಂಗ್ ಕಾಂಪ್ಲೆಕ್ಸ್‌ಗಳೇ ಇರಲಿ, ಔಷದ ಅಂಗಡಿಯೇ ಇರಲಿ, ಲಾಡ್ಜ್‌ಗಳೇ ಇರಲಿ ಎಲ್ಲೆಂದರಲ್ಲಿ ಈ ತಳುಕುಬಳುಕಿನ ಸುಂದರಿಯರದ್ದೇ ಕಾರುಬಾರು. ಅದು ಎಷ್ಟರಮಟ್ಟಿಗೆ ಎನ್ನುತ್ತೀರಾ, ಈ ದೇಶದಲ್ಲಿ ಗಂಡಸರೇ ಇಲ್ಲವೇ ಎನ್ನುವಷ್ಟರಮಟ್ಟಿಗೆ ಇದು ಮಹಿಳಾ ದೇಶ ಎಂದರೂ ಅತಿಶಯೋಕ್ತಿ ಆಗಲಾರದು....



ಇವರು ಚಾಲಕರೂ ಹೌದು!

ಮಹಿಳೆ ಕಾಲಿಡದ ಕ್ಷೇತ್ರ ಯಾವುದಪ್ಪಾ ಎಂದು ಇಲ್ಲಿಯವರನ್ನು ಕೇಳಿದರೆ, ತತ್‌ಕ್ಷಣ 'ಭಾರಿ ವಾಹನ ಓಡಿಸುವುದು' ಎಂದು ಹೇಳಿಬಿಡಬಹುದು, ಆದರೆ ಚೀನಾದಲ್ಲಿ ಅದನ್ನೂ ಹೇಳೋ ಹಾಗಿಲ್ವೇ, ಕಾರಣ, ಬಹುತೇಕ ಸಿಟಿ ಬಸ್‌ಗಳಲ್ಲಿ ಚಾಲಕರೂ ಇವರೇ.; ಅಷ್ಟೇ ಏಕೆ ಟೂರಿಸ್ಟ್‌ಗಳ ಭಾರ ಕೂಡ ಇವರ ಮೇಲೆಯೇ. ಈ ವಾಹನಗಳಿಗೆ ಇವರದ್ದೇ ಚಾಲನೆ ಒಂದೆಡೆಯಾದರೆ, ಟೂರಿಸ್ಟ್‌ಗಳಿಗೆ ಸ್ಥಳಗಳ ಪರಿಚಯ ಮಾಡುವ ಗೈಡ್‌ಗಳೂ ಇವರೇನೇ.

ಇದಷ್ಟೇ ಅಲ್ಲ. ರೈಲು ಓಡಿಸುವಲ್ಲೂ (ಬಾಯಿಯಿಂದ ರೈಲು ಬಿಡುವುದಲ್ಲ ಮತ್ತೆ!) ಇವರದ್ದು ಎತ್ತಿದ ಕೈ. ಅತ್ಯಂತ ವೇಗವಾಗಿ ಸಾಗುವ ರೈಲುಗಳಲ್ಲಿ ಇವರದ್ದೇ ಕಾರುಬಾರು. ಇಲ್ಲಿ ಚಾಲಕರೂ ಅವರೇ, ನಿರ್ವಾಹಕರೂ ಅವರೇ, ಕೆಲಸ ನಿರ್ವಹಿಸುವ ಸಿಬ್ಬಂದಿಯೂ ಅವರೇ.

ಭಾರತ ಹಾಗೂ ಚೀನಾ ಸರ್ಕಾರಗಳ ಯುವ ಮತ್ತು ಕ್ರೀಡಾ ಇಲಾಖೆಗಳ ಜಂಟಿ ಸಹಯೋಗದಲ್ಲಿ ಭಾರತದಿಂದ 100 ಯುವಕ ಯುವತಿಯರ ನಿಯೋಗ ಚೀನಾಕ್ಕೆ ಈಚೆಗೆ ತೆರಳಿದ್ದ ಸಂದರ್ಭದಲ್ಲಿ ದರ್ಶನಗೊಂಡ ಈ ಸುಂದರಿಯರ ಚಾಣ್ಮೆ ಕಂಡು ಭಲೇ ಎನ್ನುವಂತಾಯಿತು. ಚಪ್ಪಾಳೆ ತಟ್ಟುತ್ತಾ ರಸ್ತೆ ಮೇಲೆ ಸಾಗುವ ಜನರ ಗಮನ ತಮ್ಮ ಮಳಿಗೆಗಳತ್ತ ಸೆಳೆಯುವಂತೆ ಮಾಡುವಲ್ಲಿ ಈ ವನಿತೆಯರು ನಿಸ್ಸೀಮರು (ನಮ್ಮಲ್ಲಾದರೆ ಗಮನ ಸೆಳೆಯುವ ಇಂತಹ ಲಲನೆಯರು, ಕಾಣಸಿಗುವುದು ರಾತ್ರಿ ವೇಳೆ ರಸ್ತೆ ಬದಿಯಲ್ಲಿ ನಿಂತು ಎನ್ನುವುದು ಮಾತ್ರ ವಿಪರ್ಯಾಸ!)...



ಹೋಟೆಲ್‌ಗಳಲ್ಲೂ ಸೈ

ಇದು ಮಾರುಕಟ್ಟೆ ಮಾತಾಯಿತು. ಹೋಟೆಲ್‌ಗೆ ಹೋದರೂ ಅಲ್ಲಿಯೂ ಅವರೇ ಸರ್ವರ್ (ಮಾಣಿ), ಅವರೇ ಕ್ಯಾಷಿಯರ್. ಈ ಸ್ಥಾನಗಳನ್ನೂ ಅವರು ಪುರುಷರಿಗೆ ಬಿಟ್ಟುಕೊಟ್ಟಿಲ್ಲ. ಜನರನ್ನು ಆಕರ್ಷಿಸಲು ವಿಧ ವಿಧ ಬಗೆಯಲ್ಲಿ ಅವರು ಅಲಂಕರಿಸಿಕೊಂಡಿರುತ್ತಾರೆ. ನಮಗೆ ಚೀನಿ ಭಾಷೆ ಬರಲ್ಲ, ಅವರಿಗೆ ಇಂಗ್ಲಿಷ್ ಬರಲ್ಲ. ಈ ಪೇಚಾಟದ ನಡುವೆಯೂ ನಾವು ಸನ್ನೆ ಮೂಲಕ ಹೇಳಿದ್ದನ್ನು ತಾಳ್ಮೆಯಿಂದ ಆಲಿಸಿಕೊಂಡು ಅದನ್ನು ಅಷ್ಟೇ ನಗುಮುಖದಿಂದ ನೀಡುವಲ್ಲಿ ಅವರು ಸಿದ್ಧ.

ನಮ್ಮಲ್ಲಿ ಬಾರ್‌ಗಳಲ್ಲಿ ಮಹಿಳೆಯರು ಕೆಲಸ ಮಾಡಬೇಕೇ ಬೇಡವೇ ಎಂಬ ವಿವಾದ ದೊಡ್ಡ ಕಾನೂನು ಸಮರವನ್ನೇ ಸಾರಿತ್ತು. ಕಾಲ್‌ಸೆಂಟರ್ ಉದ್ಯೋಗಿ ಪ್ರತಿಭಾ ಅವರ ಕೊಲೆ ನಂತರ ರಾತ್ರಿಪಾಳಿ ವಿವಾದ ಬಹು ಚರ್ಚೆಗೆ ಗ್ರಾಸವಾಗಿತ್ತು. ಆದರೆ ಚೀನಾದಲ್ಲಿ ಎಲ್ಲ ಪಾಳಿಗಳಲ್ಲೂ, ಎಲ್ಲ ಬಾರ್‌ಗಳಲ್ಲೂ ಇವರದ್ದೇ ಸೇವೆ.

ಮಹಿಳಾ ಉದ್ಯಮ ಪ್ರಪಂಚ

80 ರ ದಶಕದಿಂದೀಚೆಗೆ ಸ್ವಂತ ಉದ್ಯಮದಲ್ಲಿ ಇವರು ಹೆಚ್ಚಿನ ಸಂಖ್ಯೆಯಲ್ಲಿ ತೊಡಗಿಸಿಕೊಂಡಿದ್ದಾರೆ ಎಂದು ಹೇಳಲಾಗುತ್ತಿದೆ. ಹಾಲಿ, ಚೀನಾದಲ್ಲಿ 30 ರಿಂದ 50 ವರ್ಷ ವಯಸ್ಸಿನ ಶೇ.80 ರಷ್ಟು ಮಹಿಳೆಯರು ಉದ್ಯಮಿಗಳಿದ್ದಾರೆ. ಇವರಲ್ಲಿ ಶೇ.63 ರಷ್ಟು ವನಿತೆಯರು ಸ್ವಂತ ಉದ್ಯಮದಲ್ಲಿ ತೊಡಗಿಸಿಕೊಂಡಿದ್ದು, ಅವರ ಉದ್ಯಮದಲ್ಲಿ ಅರ್ಧಕ್ಕಿಂತ ಹೆಚ್ಚು ಮಂದಿ ಮಹಿಳೆಯರೇ ಇರುವುದು ವಿಶೇಷ. ರಾಜಕೀಯ ರಂಗದಲ್ಲಿಯೂ ಇಲ್ಲಿನ ಮಹಿಳೆಯರು ಸಾಧನೆ ಮಾಡಿದ್ದಾರೆ.

ನಮ್ಮಲ್ಲಿ ಮಗ/ ಮಗಳು ಯಾರನ್ನಾದರೂ ಪ್ರೇಮಿಸುತ್ತಿದ್ದಾರೆ ಎಂದರೆ ಅದೊಂದು ದೊಡ್ಡ ರಾದ್ಧಾಂತ. ಜಾತಿ, ಅಂತಸ್ತಿನ ಪ್ರತಿಷ್ಠೆ. ಆದರೆ ಚೀನಾದಲ್ಲಿ ಇರೋದು ಮುಕ್ತ ಸಮಾಜ. ವಿವಾಹದ ವಿಷಯದಲ್ಲಿಯೂ ಮಹಿಳೆಗೆ ಅಷ್ಟೇ ಮುಕ್ತ ಅವಕಾಶ ನೀಡಲಾಗಿದೆ. ತನ್ನ ಬಾಳಸಂಗಾತಿಯ ಆಯ್ಕೆ ಆಕೆಗೇ ಬಿಟ್ಟಿದ್ದು.

ದೌರ್ಜನ್ಯದ ಪ್ರಮಾಣ

ಮಹಿಳೆ ಇದ್ದಲ್ಲಿ ದೌರ್ಜನ್ಯ ಇದ್ದದ್ದೇ. ಆದರೆ ಭಾರತಕ್ಕೆ ಹೋಲಿಸಿದರೆ ಚೀನಾದಲ್ಲಿ ಆಕೆಯ ಮೇಲಿನ ದೌರ್ಜನ್ಯದ ಪ್ರಮಾಣ ಅತಿ ಕಡಿಮೆ ಎನ್ನಲಾಗುತ್ತಿದೆ. ಚೀನಾದಲ್ಲಿ ಮುಕ್ತ ಸಮಾಜ ಆಗಿರುವುದರಿಂದ ಇಲ್ಲಿಯಷ್ಟು ಲೈಂಗಿಕ ದೌರ್ಜನ್ಯ ಅಲ್ಲಿ ಇಲ್ಲ ಎನ್ನುವುದು ಅಂಕಿ ಅಂಶಗಳಿಂದ ತಿಳಿದುಬರುತ್ತದೆ. ವರದಕ್ಷಿಣೆ ಎನ್ನುವ ಪೆಡಂಭೂತ ಚೀನಾಕ್ಕೆ ಇನ್ನೂ ಕಾಲಿಟ್ಟಂತಿಲ್ಲ. ಈ ಕಾರಣ ವರದಕ್ಷಿಣೆ ಸಾವು ಎನ್ನುವುದು ಕೂಡ ಅಲ್ಲಿಲ್ಲವಂತೆ.

ಆದರೆ ಗಂಡಿನ 'ಘನತೆ'ಯ ಮುಂದೆ ಹೆಣ್ಣಿನ ಎಲ್ಲ ಗುಣಗಳೂ ಗೌಣವೇ ಎಂಬ ಭಾರತದಲ್ಲಿನ ಮಾತು ಚೀನಾವನ್ನೂ ಬಿಟ್ಟಿಲ್ಲ ಕಾರಣ, ಇಲ್ಲಿ ಅವ್ಯಾಹತವಾಗಿ ನಡೆಯುತ್ತಿರುವ ಹೆಣ್ಣುಶಿಶು ಹತ್ಯೆ....!

ವಿವಿಧ ಸೌಲಭ್ಯ

ಇವೆಲ್ಲವುಗಳ ಹೊರತಾಗಿಯೂ ಮಹಿಳೆಯರಿಗೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಅಲ್ಲಿಯ ಸರ್ಕಾರ, ನಿರುದ್ಯೋಗಿ ಮಹಿಳೆಯರಿಗೆ ಸಣ್ಣ ಪ್ರಮಾಣದ ಉದ್ಯಮ ಸ್ಥಾಪನೆಗೆ ಹೆಚ್ಚಿನ ರೀತಿಯಲ್ಲಿ ಧನಸಹಾಯ ಮಾಡುತ್ತಿದೆ. ಅಷ್ಟೇ ಅಲ್ಲದೇ ಮಹಿಳೆಯರಿಗಾಗಿಯೇ ಎಸ್.ವೈ.ಬಿ (ಸ್ಟಾರ್ಟ್ ಯುವರ್ ಬಿಸಿನೆಸ್ ನಿಮ್ಮ ಉದ್ಯಮ ಪ್ರಾರಂಭಿಸಿ) ಎಂಬ ಯೋಜನೆಯನ್ನೂ ಜಾರಿಗೆ ತಂದಿದೆ.

ಭಾರತದಲ್ಲೂ ಮಹಿಳೆಯರ ಉನ್ನತಿಗೆ ಇರುವ ಯೋಜನೆಗಳು ಕಡಿಮೆಯೇ..? ಚೀನಾಕ್ಕಿಂತ ಹೆಚ್ಚೇ ಇದೆ. ಆದರೆ ಒಂದೇ ಒಂದು ವ್ಯತ್ಯಾಸ ಎಂದರೆ, ಇಲ್ಲಿಯ ಬಹುತೇಕ ಯೋಜನೆಗಳು, ಫಲಾನುಭವಿಗಳ ಬಳಿ ಸಾಗುವುದೇ ಇಲ್ಲ, ಆದರೆ ಚೀನಾದಲ್ಲಿ ಇರುವ ಎಲ್ಲ ಯೋಜನೆಗಳ ಪ್ರಯೋಜನವೂ ಪ್ರತಿಯೊಬ್ಬ ನಾಗರಿಕನ ಮನೆಬಾಗಿಲನ್ನು ತಲುಪುತ್ತವೆ ಅಷ್ಟೆ.

ಪುಟ 15 ಕ್ಕೆ

ಸೈನಾ ಸಾಧನೆ

ಇತ್ತೀಚೆಗೆ ಜಕಾರ್ತಾದಲ್ಲಿ ನಡೆದ 'ಇಂಡೋನೇಷ್ಯಾ ಸೂಪರ್ ಸೀರಿಸ್ ಬ್ಯಾಡ್ಮಿಂಟನ್ ಟೂರ್ನಿ'ಯಲ್ಲಿ ಚಾಂಪಿಯನ್ ಆದ ಸೈನಾ ನೆಹ್ವಾಲ್ ಆಟದ ಒಂದು ಆಕರ್ಷಕ ಹೊಡೆತದ ಚಿತ್ರ. ಈ ಪ್ರಶಸ್ತಿಯನ್ನು ಗೆಲ್ಲುತ್ತಿರುವ ಭಾರತದ ಪ್ರಥಮ ಕ್ರೀಡಾಪಟು ಸೈನಾ.



JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana,12. 18th Cross, S.R.Nagar, BANGALORE - 560 027 Karnataka (State) and Published at BANGALORE
No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor : S.Y.GURUSHANTH

ಸಂಪಾದಕರ ಫೈಲ್.